# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಗುರುವಾರ, ಮೇ 04, 2023

ಸಂಪುಟ : 49 ಸಂಚಿಕೆ : 352 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com







## ಕೃತಕ ಬುದ್ಧಿವಂತಿಕೆ 'ಪಿತಾಮಹ'ನ ಎಚ್ಚರಿಕೆ

**ಎ.ಐ. ನಮಗಿಂತ ಚತುರವಾಗಿದೆ, ನಮ್ಮನ್ನೇ ನಿಯಂತ್ರಿಸಬಲ್ಲದು: ಜಾಫ್ರಿ**

ನ್ಯೂಯಾರ್ಕ್, ಮೇ 3 – ಕೃತಕ ಬುದ್ಧಿವಂತಿಕೆಯ (ಎ.ಐ.) 'ಪಿತಾಮಹ' ಎಂದೇ ಹೆಸರಾಗಿರುವ ಜಾಫ್ರಿ ಹಿಂಟನ್ ಅವರು, ತಾವೇ ಭಾಗಿಯಾಗಿದ್ದ ತಂತ್ರಜ್ಞಾನದ ಬಗ್ಗೆ ಎಚ್ಚರಿಕೆ ಗಂಟೆ ಭಾರಿಸಿದ್ದಾರೆ.

ಈ ತಂತ್ರಜ್ಞಾನ ನಮಗಿಂತ ಚತುರವಾಗುತ್ತಿದೆ ಎಂಬುದು ಓರ್ವ ವಿಜ್ಞಾನಿಯಾಗಿ ನನಗೆ ಹಠಾತ್ತನೆ ಅರ್ಥವಾಗಿದೆ. ಈ ಬಗ್ಗೆ ಎಚ್ಚರಿಕೆ ಗಂಟೆ ಭಾರಿಸಲು ಬಯಸುತ್ತೇನೆ. ಇದು ನಮ್ಮ ನಿಯಂತ್ರಣ ಮೀರಿ ಹೋಗದಂತೆ ತಡೆಯುವ



ಬಗ್ಗೆ ಗಂಭೀರವಾಗಿ ಚಿಂತಿಸಬೇಕಿದೆ ಎಂದು ಹಿಂಟನ್ ಸಂದರ್ಶನವೊಂದರಲ್ಲಿ ತಿಳಿಸಿದ್ದಾರೆ.

ಹಿಂಟನ್ ಅವರು ಹಲವಾರು ನ್ಯೂರಲ್ ನೆಟ್‌ವರ್ಕ್ ಯೋಜನೆಗಳಲ್ಲಿ ಭಾಗಿಯಾಗಿದ್ದರು. ಅವರ ಯೋಜನೆಗಳು ಈಗಿನ ಹಲವಾರು ಕೃತಕ ಬುದ್ಧಿವಂತಿಕೆಯ ಉಪಕರಣ ರೂಪಿಸುವಲ್ಲಿ ನೆರವಾಗಿವೆ. (3ನೇ ಪುಟಕ್ಕೆ)


GURUDATT ACADEMY
Gateway to NEET & IIT
Classroom coaching for 8th, 9th, 10th std ( CBSE ) 1st PUC & 2nd PUC ( NEET / JEE ) Supplementary batches.
Rangamahal, PJ Extension, Davangere.
Call: 9739865711


## ಸಕ್ಕರೆ ಕಾಯಿಲೆ ನಡುವಿನ ವ್ಯತ್ಯಾಸ ಪತ್ತೆ

**ಸಕ್ಕರೆ ಕಾಯಿಲೆ ರೋಗಿಗಳಿಗೆ ನೆರವಾಗುವ ನಿರೀಕ್ಷೆ**

ನವದೆಹಲಿ, ಮೇ 3 – ಭಾರತ ಮತ್ತು ಯುರೋಪ್‌ನಲ್ಲಿ ಕಂಡು ಬರುವ ಟೈಪ್ 2 ಸಕ್ಕರೆ ಕಾಯಿಲೆಗಳ ನಡುವಿನ ವಂಶವಾಹಿ ಹೋಲಿಕೆ ಹಾಗೂ ವ್ಯತ್ಯಾಸಗಳನ್ನು ವಿಜ್ಞಾನಿಗಳು ಗುರುತಿಸಿದ್ದಾರೆ. ಇದು ಭಾರತದಲ್ಲಿ ಸಕ್ಕರೆ ಕಾಯಿಲೆ ಚಿಕಿತ್ಸೆಗೆ ನೆರವಾಗುವ ನಿರೀಕ್ಷೆ ಇದೆ. ಸಕ್ಕರೆ ಕಾಯಿಲೆಯನ್ನು ಐದು ಉಪ ವಿಭಾಗಗಳಾಗಿ ವಿಭಜಿಸಬಹುದು ಎಂದು ಸ್ವೀಡನ್‌ನ ಸಂಶೋಧಕರು ಪತ್ತೆ ಮಾಡಿದ್ದಾರೆ. ಸಕ್ಕರೆ ಕಾಯಿಲೆಯ ನಾಲ್ಕು ಉಪ ಗುಂಪುಗಳಲ್ಲಿ ವಂಶವಾಹಿ ವ್ಯತ್ಯಾಸಗಳಿವೆ. ಈ ಕುರಿತ ಅಧ್ಯಯನವನ್ನು ದಿ ಲ್ಯಾನ್ಸೆಟ್ ನಿಯತಕಾಲಿಕದಲ್ಲಿ ಪ್ರಕಟಿಸಲಾಗಿದೆ. ಈ ಅಧ್ಯಯನದಲ್ಲಿ ಭಾರತ ಹಾಗೂ ಯುರೋಪ್‌ನಲ್ಲಿ (3ನೇ ಪುಟಕ್ಕೆ)

# ಜೈ ಭಜರಂಗ ಬಲಿ ಎಂದು ಮತ ಹಾಕಿ

## ಕಾಂಗ್ರೆಸ್ ಕಾಲದಲ್ಲಿ 10 ಕೋಟಿ ನಕಲಿ ಹೆಸರು ಹಗರಣ, ನಕಲಿ ಹೆಸರುಗಳ ಮೂಲಕ ಆಗುತ್ತಿದ್ದ 2.75 ಲಕ್ಷ ಕೋಟಿ ರೂ. ಸೋರಿಕೆ ತಡೆದಿದ್ದೇನೆ: ಮೋದಿ

ಅಂಕೋಲ, ಮೇ 3 – ಕಾಂಗ್ರೆಸ್ ಆಡಳಿತ ಇದ್ದಾಗ ಕಾಂಗ್ರೆಸ್ ಮುಖಂಡರು 10 ಕೋಟಿ ನಕಲಿ ಹೆಸರುಗಳ ಮೂಲಕ ಸಾಮಾಜಿಕ ಯೋಜನೆಗಳ ಹಣ ಪಡೆದು ಭ್ರಷ್ಟಾಚಾರ ನಡೆಸಿದ್ದರು ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಗಂಭೀರ ಆರೋಪ ಮಾಡಿದ್ದಾರೆ.

ಅಂಕೋಲಾದಲ್ಲಿ ನಡೆದ ಚುನಾವಣಾ ಸಮಾವೇಶದಲ್ಲಿ ಮಾತನಾಡಿದ ಅವರು, ಕೇಂದ್ರದಲ್ಲಿ ದಶಕಗಳ ಕಾಲ ಕಾಂಗ್ರೆಸ್ ಆಡಳಿತ ನಡೆಸುವಾಗ ದೇಶದ ಮೂಲೆ ಮೂಲೆಗಳಲ್ಲಿ 10 ಕೋಟಿ ನಕಲಿ ಹೆಸರುಗಳನ್ನು ಸರ್ಕಾರಿ ದಾಖಲೆಗಳಲ್ಲಿ ಸೇರಿಸಲಾಗಿತ್ತು. ಇವರಿಗೆ ಪಡಿತರ, ಗ್ಯಾಸ್ ಸಬ್ಸಿಡಿ, ಮಹಿಳಾ ಅಭಿವೃದ್ಧಿ, ವಿದ್ಯಾರ್ಥಿ ವೇತನ ಇತ್ಯಾದಿಗಳ ಹೆಸರಿನಲ್ಲಿ ಹಣ ರವಾನಿಸಲಾಗುತ್ತಿತ್ತು ಎಂದು ಹೇಳಿದರು.

ಈ ನಕಲಿ ಹೆಸರಿನವರಿಗೆ ಬರುತ್ತಿದ್ದ ಹಣ



ಕಾಂಗ್ರೆಸ್ ಮುಖಂಡರ ತಿಜೋರಿಗೆ ಕಾಳಧನವಾಗಿ ಸೇರುತ್ತಿತ್ತು. ಕಾಂಗ್ರೆಸ್ ಸರ್ಕಾರ ಇರದಿದ್ದರೂ ಈ ಹಣ ಬರುತ್ತಲೇ ಇತ್ತು ಎಂದು ಮೋದಿ ಹೇಳಿದರು.

4.20 ಕೋಟಿ ನಕಲಿ ಹೆಸರುಗಳನ್ನು ಪಡಿತರ ಚೀಟಿಗಳಲ್ಲಿ ಸೇರಿಸಲಾಗಿತ್ತು. 4 ಕೋಟಿ ಜನರಿಗೆ ಗ್ಯಾಸ್ (2ನೇ ಪುಟಕ್ಕೆ)


## ಭಜರಂಗದಳ ನಿಷೇಧಕ್ಕೆ ಕಾಂಗ್ರೆಸ್ ಸಮರ್ಥನೆ

ಬೆಂಗಳೂರು, ಮೇ 3- ಭಜರಂಗ ದಳ ನಿಷೇಧಿಸುವುದಾಗಿ ಪ್ರಣಾಳಿಕೆಯಲ್ಲಿ ತಿಳಿಸಿರುವುದನ್ನು ಕಾಂಗ್ರೆಸ್ ನಾಯಕರು ಸಮರ್ಥಿಸಿಕೊಂಡಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ, ಸಂವಿಧಾನದ ವಿಧಿಗಳನ್ನು ಉಲ್ಲಂಘಿಸಿ, ಸಮಾಜದಲ್ಲಿ ಅಶಾಂತಿ ಸೃಷ್ಟಿಸುವ ಮತ್ತು ಕೋಮು ಗಲಭೆಗಳಲ್ಲಿ ಭಾಗಿಯಾಗುವ ಸಂಘಟನೆಗಳ ವಿರುದ್ಧ ನಿಷೇಧವೂ ಸೇರಿದಂತೆ ಕಠಿಣ ಕ್ರಮ ಕೈಗೊಳ್ಳುತ್ತೇವೆ ಎಂದು ಪ್ರಣಾಳಿಕೆಯಲ್ಲಿ ಹೇಳಿದ್ದೇವೆ ಎಂದಿದ್ದಾರೆ.

ಜನರಿಗೆ ಬೇಕಿರುವುದು ಆಹಾರ, (3ನೇ ಪುಟಕ್ಕೆ)


## ವಿ.ಎಸ್.ಅರುಣಾಚಲ ಶೆಟ್ರು ನಿಧನ



ದಾವಣಗೆರೆ ಎಂ.ಸಿ.ಸಿ.'ಬಿ' ಬ್ಲಾಕ್ ವಾಸಿ, ದಾವಣಗೆರೆ ಸಮೀಪದ ಶಾಸ್ತ್ರಿಹಳ್ಳಿಯಲ್ಲಿರುವ
ಶ್ರೀ ಮಾತಾ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷರೂ,
ಆವೋಪ, ವಾಸವಿ ಅಭಿವೃದ್ಧಿ ಸಹಕಾರ ಸಂಘ ಹಾಗೂ ವಾಸವಿ ಕ್ಲಬ್ ಸಂಸ್ಥಾಪಕರೂ,
ಹಿರಿಯ ಲೆಕ್ಕ ಪರಿಶೋಧಕರೂ, ವಕೀಲರೂ ಆಗಿರುವ

**ಶ್ರೀ ವಿ.ಎಸ್. ಅರುಣಾಚಲ ಶೆಟ್ರು**

ಅವರು ದಿನಾಂಕ 3-5-2023 ರ ಸಂಜೆ ವಿಧಿವಶರಾದರು ಎಂದು ತಿಳಿಸಲು ವಿಷಾದಿಸುತ್ತೇವೆ.
ಅವರಿಗೆ 74 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು,
ಅಳಿಯಂದಿರು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.
ಮೃತರ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕಾಗಿ ಪುತ್ರ ವಿ.ಎ.ಶ್ರೀ ಹರ್ಷ,
ಆಡಿಟರ್ ಮತ್ತು ತೆರಿಗೆ ಸಲಹೆಗಾರರು ಅವರ ನಿವಾಸ "ಶ್ರೀವಾರಿ", #4140, 5ನೇ ಕ್ರಾಸ್,
ಕುವೆಂಪು ನಗರ, ಬಾಪೂಜಿ ಹೈಸ್ಕೂಲ್ ಹತ್ತಿರ, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ
ಇಲ್ಲಿ ದಿನಾಂಕ 4-5-2023ರ ಗುರುವಾರ ಮಧ್ಯಾಹ್ನ 12-30 ರಿಂದ 3-30ರವರೆಗೆ ಇಡಲಾಗುವುದು.
ನಂತರ ಸಂಜೆ 4 ಗಂಟೆಗೆ ನಗರದ ಆರ್.ಹೆಚ್.ಬೃಂದಾವನದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ.

ದು:ಖತಪ್ತ ಕುಟುಂಬ ವರ್ಗ :

ಪುತ್ರ : ವಿ.ಎ. ಶ್ರೀಹರ್ಷ ಆಡಿಟರ್
ಮೊ : 9844078890



## ಇಂದು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ|| ಶಾಮನೂರು ಶಿವಶಂಕರಪ್ಪನವರ ಪರ ಕನ್ನಯ್ಯಕುಮಾರ್ ರೋಡ್ ಶೋ, ಚುನಾವಣಾ ಪ್ರಚಾರ ಸಭೆ



ಇಂದು (ದಿನಾಂಕ 4-5-2023) ಗುರುವಾರ
ಕಾಂಗ್ರೆಸ್ ಪಕ್ಷದ ಸ್ಟಾರ್ ಪ್ರಚಾರಕ ಕನ್ನಯ್ಯಕುಮಾರ್ ಅವರಿಂದ
ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ
ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರ ಪರ
ರೋಡ್ ಶೋ ಮತ್ತು ಚುನಾವಣಾ ಪ್ರಚಾರ ಸಭೆಯನ್ನು ಹಮ್ಮಿಕೊಳ್ಳಲಾಗಿದೆ.

ಇಂದು ಬೆಳಿಗ್ಗೆ 11 ಗಂಟೆಯಿಂದ ದಾವಣಗೆರೆಯ ಅರಳಿಮರ ಸರ್ಕಲ್‌ನಿಂದ ಪ್ರಾರಂಭವಾಗುವ ರೋಡ್ ಷೋ ಹಳೇ ಬೇತೂರು ರಸ್ತೆ, ಮದೀನಾ ಸರ್ಕಲ್, ಆಜಾದ್ ನಗರ ಮುಖ್ಯರಸ್ತೆ, ಬಾಷಾನಗರ ಮೂಲಕ ಅಖ್ತರ್ ರಜಾ ಸರ್ಕಲ್ ವರೆಗೆ ನಡೆಸುವರು. ನಂತರ ಬೂದಾಳ್ ರಸ್ತೆಯ ಗೋಲ್ಡನ್ ಪ್ಯಾಲೇಸ್‌ನಲ್ಲಿ ಚುನಾವಣಾ ಪ್ರಚಾರ ಸಭೆ ನಡೆಯಲಿದೆ. ಮಹಾನಗರ ಪಾಲಿಕೆಯ ಎಲ್ಲಾ ಕಾಂಗ್ರೆಸ್ ಸದಸ್ಯರುಗಳು, ಜನಪ್ರತಿನಿಧಿಗಳು, ಕಾಂಗ್ರೆಸ್ ಪಕ್ಷದ ಯುವ ಕಾಂಗ್ರೆಸ್, ಎನ್‌ಎಸ್‌ಯುಐ, ಮಹಿಳಾ ಕಾಂಗ್ರೆಸ್, ಅಲ್ಪಸಂಖ್ಯಾತರ ವಿಭಾಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಓಬಿಸಿ, ಕಾರ್ಮಿಕ ವಿಭಾಗ, ಅಸಂಘಟಿಕ ಕಾರ್ಮಿಕ ವಿಭಾಗಗಳು ಸೇರಿದಂತೆ, ವಿವಿಧ ಘಟಕಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳು, ಮುಖಂಡರು, ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಕೋರಲಾಗಿದೆ.

ಸದೃಢ ಹಾಗೂ ಸುರಕ್ಷಿತ ಕುಟುಂಬಕ್ಕಾಗಿ ಕಾಂಗ್ರೆಸ್‌ಗೆ ಮತ ನೀಡಿ

ಪ್ರಕಟಣೆ : ಅಧ್ಯಕ್ಷರು, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ

# ಜೈ ಭಜರಂಗಬಲಿ ಎಂದು ಮತ ಹಾಕಿ

(1ನೇ ಪುಟದಿಂದ) ಸಬ್ಸಿಡಿ, 1 ಕೋಟಿ ಜನರಿಗೆ ಮಹಿಳಾ ಅಭಿವೃದ್ಧಿಯ ಹಣ ಹಾಗೂ 30 ಲಕ್ಷ ನಕಲಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಕೊಡಲಾಗುತ್ತಿತ್ತು. ಕಳೆದ ಒಂಭತ್ತು ವರ್ಷಗಳಲ್ಲಿ ಈ ನಕಲಿ ಹೆಸರುಗಳ ಹಗರಣ ನಿಲ್ಲಿಸಿದ್ದೇನೆ ಎಂದು ಮೋದಿ ತಿಳಿಸಿದರು.

2.75 ಲಕ್ಷ ಕೋಟಿ ರೂ. ಹಣ ತಪ್ಪು ಜನರ ಕೈಗೆ ಸಿಗುವುದನ್ನು ತಪ್ಪಿಸಿದ್ದೇನೆ. ಇಷ್ಟು ದೊಡ್ಡ ಕಳ್ಳತನ ತಡೆದ ಕಾರಣಕ್ಕೆ ಮೋದಿಗೆ ನಿಂದಿಸದೇ ಇನ್ನೇನು ಮಾಡುತ್ತಾರೆ? ದೇಶದ ಜನರಿಗೆ ಹಾಗೂ ಯುವಕರಿಗೆ ಹಕ್ಕು ಹಾಗೂ ನ್ಯಾಯ ಸಿಗುವಂತೆ ಮಾಡಿದ್ದಕ್ಕಾಗಿ ನನ್ನನ್ನು ಕಾಂಗ್ರೆಸ್ ನಿಂದಿಸುತ್ತಿದೆ ಎಂದರು.

ಕಾಂಗ್ರೆಸ್ ನಾಯಕರೊಬ್ಬರು ನಾನು ರಾಜಕೀಯದಿಂದ ನಿವೃತ್ತನಾಗುತ್ತಿದ್ದೇನೆ ಮತ ಕೊಡಿ ಎಂದು ಕೇಳುತ್ತಿದ್ದಾರೆ. ಇದೇನು ಮತ ಕೇಳುವ ರೀತಿಯೇ? ಇನ್ನು ಕೆಲವರು ನನ್ನನ್ನು ನಿಂದಿಸಿ ಮತ ಕೇಳುತ್ತಿದ್ದಾರೆ. ಈ ನಿಂದನೆಯ ಸಂಸ್ಕೃತಿ ನಿಲ್ಲಿಸಬೇಕಿದೆ. ನಿಂದಿಸುವವರನ್ನು ಶಿಕ್ಷಿಸಬೇಕಿದೆ. ಹೀಗಾಗಿ ಮತಗಟ್ಟೆಗೆ ಹೋಗಿ ಮತದಾನ ಮಾಡುವಾಗ 'ಜೈ ಭಜರಂಗ ಬಲಿ' ಎಂದು ಮತಯಂತ್ರದ ಬಟನ್ ಒತ್ತಿ ಎಂದು ಮೋದಿ ಕರೆ ನೀಡಿದರು.

ಭಜರಂಗ ದಳ ನಿಷೇಧಿಸುವುದಾಗಿ ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ತಿಳಿಸಿತ್ತು. ಈ ಹಿನ್ನೆಲೆಯಲ್ಲಿ ಪ್ರಧಾನಿ ಭಜರಂಗ ಬಲಿ ಘೋಷಣೆ ಮಾಡಿ ಮತ ನೀಡಿ ಎಂದಿರುವುದು ಪ್ರಾಮುಖ್ಯತೆ ಪಡೆದುಕೊಂಡಿದೆ.

# ಹರಪನಹಳ್ಳಿ ಟಿಎಪಿಸಿಎಂಎಸ್ ಅಧ್ಯಕ್ಷರಾಗಿ ನೇತ್ರಾವತಿ ಪರಶುರಾಮ



ಹರಪನಹಳ್ಳಿ, ಮೇ 3- ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಅಲಮರಸಿಕೇರಿ ನೇತ್ರಾವತಿ ಪರಶುರಾಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪಟ್ಟಣದಲ್ಲಿರುವ ಸಂಘದ ಕಚೇರಿಯಲ್ಲಿ ಈಚೆಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ನೇತ್ರಾವತಿ ಪರಶುರಾಮ ಅವರು ಒಬ್ಬರೇ ನಾಮಪತ್ರ ಸಲ್ಲಿಸಿದ ಹಿನ್ನೆಲೆಯಲ್ಲಿ ಅವಿರೋಧವಾಗಿ ಆಯ್ಕೆಯಾದರು ಎಂದು ಚುನಾವಣಾಧಿಕಾರಿಯಾಗಿದ್ದ ಸಹಕಾರ ಇಲಾಖೆಯ ಬಿ.ಆರ್.ಬಡಿಗೇರ್ ತಿಳಿಸಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬೇಲೂರು ಅಂಜಪ್ಪ, ಪಿ. ಪ್ರೇಮಕುಮಾರ, ಕಂಭತ್ತಹಳ್ಳಿ ಎಸ್.ಮಂಜುನಾಥ, ಮುಖಂಡರಾದ ಹೆಚ್. ಬಿ.ಪರಶುರಾಮಪ್ಪ, ಶಶಿಧರ ಪೂಜಾರ, ಹೆಚ್.ಕೆ.ಹಾಲೇಶ, ಸಾಬಳ್ಳಿ ಜಂಭಣ್ಣ, ಬಂಡ್ರಿ ಗೋಣಿಬಸಪ್ಪ, ಪುರಸಭೆ ಸದಸ್ಯರಾದ ಭರತೇಶ, ಜಾಕೀರ್ ಹುಸೇನ್, ಸಂಘದ ನಿರ್ದೇಶಕರಾದ ತಿಮ್ಮನಾಯ್ಕ್, ಗಿಡ್ಡಳ್ಳಿ ನಾಗರಾಜ, ಕುಲುಮಿ ಅಬ್ದುಲ್, ಪ್ರಕಾಶ ಗೌಡ, ಮಂಜಪ್ಪ, ಸಿದ್ದೇಶ, ಜಿ.ಹನುಮಂತಪ್ಪ ಸೇರಿದಂತೆ ಇತರರು ಇದ್ದರು.

# ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನೇ ನಿಷೇಧ ಮಾಡಲು ಒತ್ತಾಯ

ದಾವಣಗೆರೆ, ಮೇ 3- ತನ್ನ ಪ್ರಣಾಳಿಕೆಯಲ್ಲಿ ಬಜರಂಗ ದಳ ನಿಷೇಧದ ಪ್ರಸ್ತಾಪ ಮಾಡಿ ದೇಶದ್ರೋಹದ, ಧರ್ಮದ್ರೋಹದ ಕೆಲಸ ಮಾಡುತ್ತಿರುವ ಕಾಂಗ್ರೆಸ್ ಪಕ್ಷವನ್ನೇ ನಿಷೇಧಿಸಬೇಕೆಂದು ವಿಶ್ವ ಹಿಂದೂ ಪರಿಷದ್ ಜಿಲ್ಲಾ ಸಂಚಾಲಕ ಸಿ.ಎಸ್. ರಾಜು ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

ದೇಶಪ್ರೇಮ, ದೇಶಭಕ್ತಿ, ಧರ್ಮರಕ್ಷಣೆಯನ್ನು ಮೈಗೂಡಿಸಿಕೊಂಡಿರುವ ಬಜರಂಗ ದಳ ಸಂಘಟನೆ ನಿಷೇಧದ ಕಾಂಗ್ರೆಸ್ ಪ್ರಣಾಳಿಕೆಯಲ್ಲಿನ ಪ್ರಸ್ತಾಪ ಮಾಡಿದೆ. ಇದನ್ನು ಬಜರಂಗ ದಳ ಉಗ್ರವಾಗಿ ಖಂಡಿಸುತ್ತದೆ ಎಂದರು.

ರಾಜ್ಯದಲ್ಲಿ ಚುನಾವಣೆ ನೀತಿ ಸಂಹಿತೆ ಜಾರಿ ಇರುವ ಕಾರಣ ನಾವು ಯಾವುದೇ ಪ್ರತಿಭಟನೆಗೆ ಮುಂದಾಗಿಲ್ಲ.

ಕೇವಲ ಪತ್ರಿಕಾಗೋಷ್ಠಿಯ ಮೂಲಕ ನಮ್ಮ ಆಕ್ರೋಶವನ್ನು ಹೊರಹಾಕಿದ್ದೇವೆ. ಜಿಲ್ಲಾಡಳಿತಕ್ಕೆ ಮನವಿ ಮಾತ್ರ ಕೊಡಲಾಗುವುದು ಎಂದು ಹೇಳಿದರು.

ಕೇವಲ ಒಂದು ಸಮುದಾಯವನ್ನು ಓಲೈಕೆ ಮಾಡುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ಈ ಬಾರಿಯ ಚುನಾವಣೆಯಲ್ಲಿ ಜನತೆ ತಕ್ಕ ಪಾಠ ಕಲಿಸಲಿದ್ದಾರೆ. ಕಾಂಗ್ರೆಸ್ ಸೋಲಿಸುವಂತೆ ಮತದಾರರಿಗೆ ಮನವಿ ಮಾಡಿದರು.

ಬಜರಂಗ ದಳ ರಾಷ್ಟ್ರೀಯ ಸಂಘಟನೆ ಮತ್ತು ಸೇವಾ ಮನೋಭಾವನೆ ಇರುವ ಸಂಘಟನೆಯಾಗಿದೆ. ಯಾವುದೇ ದೇಶದ್ರೋಹ ಕೆಲಸ ಮಾಡುತ್ತಿಲ್ಲ. ಬದಲಾಗಿ ದೇಶರಕ್ಷಣೆ ಮಾಡುವ ಸಂಘಟನೆಯಾಗಿದೆ. ದೇಶದ್ರೋಹಿ ಪಿಎಫ್ಐ ಸಂಘಟನೆ ಜೊತೆ ಬಜರಂಗದಳ ಸಂಘಟನೆಯನ್ನು ಹೋಲಿಸುವುದು ಸರಿಯಲ್ಲ ಎಂದು ಕಿಡಿಕಾರಿದರು.


## 2ನೇ ವರ್ಷದ ಪುಣ್ಯಸ್ಮರಣೆ




**ಅಂII ಬೂಸ್ನೂರು ಉಮಾಮಹೇಶ್ವರಪ್ಪನವರು**

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ ನೀವು ಹಾಕಿ ಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ

ಪತ್ನಿ: ಶ್ರೀಮತಿ ಸುಲೋಚನ
ಮಕ್ಕಳಾದ : ಡಾII ಬಿ.ಯು. ಯೋಗೇಂದ್ರ ಕುಮಾರ್ ಶ್ರೀಮತಿ ಸುಷ್ಮ
ಬಿ.ಯು. ಧೀರೇಂದ್ರ ಕುಮಾರ್ ಶ್ರೀಮತಿ ನಾಗವೇಣಿ
ಬಿ.ಯು. ವೀರೇಂದ್ರ ಕುಮಾರ್ ಶ್ರೀಮತಿ ಮಂಜುಳಾ
ಮೊಮ್ಮಕ್ಕಳಾದ: ನಿರೀಕ್ಷಾ, ಹಿಮಘ್ನ, ಶ್ರೇಷ್ಠಾ, ಅಥರ್ವ, ಶ್ರೀತನ್

## ಭಾವಪೂರ್ಣ ಶ್ರದ್ಧಾಂಜಲಿ



ದಾವಣಗೆರೆಯ ಹಿರಿಯ ತೆರಿಗೆ ಸಲಹೆಗಾರರು, ವಕೀಲರು, ಆತ್ಮೀಯರೂ ಆಗಿದ್ದ

**ಶ್ರೀ ಅರುಣಾಚಲ ಶ್ರೇಷ್ಠಿ**

ಅವರು, ದಿನಾಂಕ 3-5-2023ರ ಬುಧವಾರ ಅಕಾಲಿಕವಾಗಿ ದೈವಾಧೀನರಾಗಿದ್ದು ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿಗಳು. ಮೃತರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕರುಣಿಸಲಿ, ಹಾಗೂ ಕುಟುಂಬ ವರ್ಗದವರಿಗೆ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತೇನೆ.

**ಹೆಚ್.ಟಿ. ಸುಧೀಂದ್ರರಾವ್,** ತೆರಿಗೆ ಸಲಹೆಗಾರರು, ದಾವಣಗೆರೆ.


# 12ನೇ ಶತಮಾನದ ಸಮಾನತೆಯ ಹೋರಾಟ ಇಂದೂ ಅಗತ್ಯ

## ಶ್ರೀ ಅನ್ನದಾನೇಶ್ವರ ಮಠದಲ್ಲಿನ ಶಿವಾನುಭವ ಸಂಪದದಲ್ಲಿ ಶೋಭಾ ಚಪ್ಪರದಳ್ಳಿ ಮಠ



ದಾವಣಗೆರೆ, ಮೇ 3- ಅಡುಗೆ ಮನೆಯಿಂದ ಮಹಿಳೆ ಆಕಾಶದೆತ್ತರಕ್ಕೆ ಏರಿದ್ದರೂ ಸಹ ಮಹಿಳೆಯರಿಗೆ ರಾಜಕೀಯವಾಗಿ ಸ್ಥಾನಮಾನ ಇನ್ನೂ ಸಿಕ್ಕಿಲ್ಲವೆಂದು ಸರ್ಕಾರಿ ಮೋತಿ ವೀರಪ್ಪ ಜ್ಯೂನಿಯರ್ ಕಾಲೇಜಿನ ಕನ್ನಡ ಉಪನ್ಯಾಸಕರಾದ ಶ್ರೀಮತಿ ಶೋಭಾ ಚಪ್ಪರದಳ್ಳಿ ಮಠ ವಿಷಾದಿಸಿದರು.

ನಗರದ ಹಾಲಕೆರೆ ಶ್ರೀ ಅನ್ನದಾನೇಶ್ವರ ಶಾಖಾ ಮಠದಲ್ಲಿ ಮೊನ್ನೆ ಏರ್ಪಡಿಸಿದ್ದ 257 ನೇ ಶಿವಾನುಭವ ಸಂಪದ, ಮಹಿಳಾ ದಿನಾಚರಣೆ ಹಾಗೂ ಶ್ರೀ ಜಗಜ್ಯೋತಿ ಬಸವೇಶ್ವರ ಜಯಂತಿಯಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಉಪನ್ಯಾಸ ನೀಡಿದರು.

ಮಹಿಳೆಯರನ್ನು ಎರಡನೇ ದರ್ಜೆ ಸ್ಥಾನದಲ್ಲಿ ಕೂರಿಸಿ ನೋಡುವುದನ್ನು ಬಿಡಬೇಕು. ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆ ಎಲ್ಲಾ ಸ್ಥಾನಗಳಲ್ಲಿಯೂ ಸಾಧನೆ ಮಾಡಿದ್ದರೂ ಕೂಡ ಅವಳ ದೃಢ ನಿರ್ಧಾರದೊಂದಿಗೆ ದಿಟ್ಟ ಹೆಜ್ಜೆಯನ್ನಿಟ್ಟಿದ್ದರೂ ಸಹ ಅವಳಿಗೆ ಕಿರುಕುಳ, ಹಿಂಸೆ ಹಾಗೂ ಸ್ವೇಚ್ಛಾಚಾರದ ಘಟನೆಗಳು ನಡೆಯುತ್ತಲೇ ಇವೆ ಎಂದು ನುಡಿದು, 12 ನೇ ಶತಮಾನದಲ್ಲಿನ ಸಮಾನತೆಯ ಹೋರಾಟ ಇಂದು ಅಗತ್ಯವಾಗಿದೆ ಎಂದರು.

ಹೆಣ್ಣು ಮಕ್ಕಳು ಮನಸ್ಸು ಮಾಡಿದರೆ ಮನೆಯನ್ನು ಬೆಳಗುವುದರ ಜೊತೆಗೆ ದೇಶವನ್ನೂ ಬೆಳಗುತ್ತಾಳೆ. ತೊಟ್ಟಿಲು ತೂಗುವ ಕೈಗಳು ಜಗತ್ತನ್ನು ಆಳಬಲ್ಲವು ಎಂಬುದಕ್ಕೆ ಸಿದ್ಧಗಂಗಾ ವಿದ್ಯಾ ಸಂಸ್ಥೆಯ ಮುಖ್ಯಸ್ಥೆ ಡಾ. ಜಸ್ಟಿನ್ ಡಿಸೋಜಾ ಹಾಗೂ ಮಾಜಿ ಪ್ರಧಾನಿ ಇಂದಿರಾಗಾಂಧಿಯವರ ದಿಟ್ಟತನ ಮತ್ತು ಅವರ ಆಡಳಿತ ಇಂದಿಗೂ ನಮ್ಮೆಲ್ಲರಿಗೂ ಆದರ್ಶ ಪ್ರಾಯವಾಗಿದೆ ಎಂದರು.

ಇಂದಿನ ದಿನಗಳಲ್ಲಿ ಒತ್ತಡಕ್ಕೆ ಸಿಲುಕಿದ ವಿದ್ಯಾವಂತರೇ ಆತ್ಮಹತ್ಯೆಗೆ ಒಳಗಾಗುತ್ತಿದ್ದಾರೆ. ಅಂತವರು ಇಂತಹ ಧಾರ್ಮಿಕ ಕೇಂದ್ರಗಳಿಗೆ ಬಂದು ಬುದ್ಧಿ ವಿಕಾಸ ಮಾಡಿಕೊಳ್ಳಬೇಕೆಂದು ಸಲಹೆ ನೀಡುತ್ತಾ, ಮಹಿಳೆಯರಿಗೆ ಸಿಕ್ಕ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು. ಮಕ್ಕಳಿದ್ದಾಗಲೇ ಸಂಸ್ಕಾರವಂತರನ್ನಾಗಿ ಮಾಡುವುದರ ಮೂಲಕ ಧೈರ್ಯವಂತರನ್ನಾಗಿ ಬೆಳೆಸಬೇಕೆಂದರು.

ದಿವ್ಯ ಸಾನ್ನಿಧ್ಯ ವಹಿಸಿದ್ದ ಗರಗ- ನಾಗಲಾಪುರದ ಜಗದ್ಗುರು ಕೊಟ್ಟೂರು ಸ್ವಾಮಿ ಕುರುಗೋಡು ಶಾಖಾ ಮಠದ ಶ್ರೀ ನಿರಂಜನ ಪ್ರಭುದೇವರು ಆಶೀರ್ವಚನ ನೀಡುತ್ತಾ ಅರಿವು, ಅನ್ನ, ಆಶ್ರಯ ನೀಡಿದ ಹಾಲಕೆರೆ ಶ್ರೀ ಅನ್ನದಾನೇಶ್ವರ ಮಠದ ಜಗದ್ಗುರುಗಳು.

ಮಹಿಳೆಯರು ಮಾತ್ರ ಎಳೆಯಲು 640 ಕೆಜಿ ಬೆಳ್ಳಿಯ ರಥ ನಿರ್ಮಾಣ ಮಾಡಿದ ಶ್ರೀ ಡಾ.ಅಭಿನವ ಅನ್ನದಾನ ಮಹಾಸ್ವಾಮಿಗಳವರ ಅಭಿವೃದ್ಧಿಯ ಕನಸು ನನಸು ಮಾಡಿದ್ದಾರೆ. ಅವರ ಕಾರ್ಯ ಶ್ಲಾಘನೀಯ ಎಂದರು.

ಇದೇ ಸಂದರ್ಭದಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯದಿಂದ ಮರಣೋತ್ತರ ಗೌರವ ಡಾಕ್ಟರೇಟ್‌ಗೆ ಭಾಜನರಾದ ಶ್ರೀ ಸಿದ್ದಗಂಗಾ ವಿದ್ಯಾ ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ಶಿಕ್ಷಣ ಶಿಲ್ಪಿ ಲಿಂ. ಎಂ.ಎಸ್. ಶಿವಣ್ಣ ಅವರ ಧರ್ಮಪತ್ನಿ ಶ್ರೀಮತಿ ಜಸ್ಟಿನ್ ಡಿ ಸೋಜಾ ಅವರನ್ನು ಶ್ರೀಗಳವರು ಶಾಲು ಹೊದಿಸಿ ಸನ್ಮಾನಿಸಿದರು.

ಸೋಮ ಸಮುದ್ರದ ಶ್ರೀ ಸಿದ್ದಲಿಂಗ ದೇವರು ದಿವ್ಯ ಸಾನ್ನಿಧ್ಯ ವಹಿಸಿದ್ದರು. ಟ್ರಸ್ಟಿನ ಅಧ್ಯಕ್ಷ ಅಥಣಿ ಎಸ್. ವೀರಣ್ಣ, ಪ್ರಧಾನ ಕಾರ್ಯದರ್ಶಿ ಎನ್. ಅಡಿವೆಪ್ಪ, ದಂಡೆಪ್ಪರ ರೇವಣಸಿದ್ದಪ್ಪ, ಕೆ.ಟಿ. ಮಹಾಲಿಂಗೇಶ್, ನಾಗರಾಜ ಯರಗಲ್ ಮತ್ತಿತರರು ಉಪಸ್ಥಿತರಿದ್ದರು.

ಅಕ್ಕನ ಬಳಗದ ಅಧ್ಯಕ್ಷೆ ಶ್ರೀಮತಿ ಮಂಗಳ ವೀರಪ್ಪ ಅಧ್ಯಕ್ಷತೆ ವಹಿಸಿದ್ದರು. ಇಂದಿನ ಸುದ್ದಿ ಸಂಪಾದಕ ವೀರಪ್ಪ ಎಂ.ಬಾವಿ ಸ್ವಾಗತಿಸಿದರು. ಶ್ರೀಮತಿ ಸುಜಾತ ಮತ್ತು ಶ್ರೀಮತಿ ತನುಜ ವಿ.ಬಿ. ರವರು ಕಾರ್ಯಕ್ರಮ ನಿರೂಪಿಸಿದರು.

ದಿ. ಬಸವಲಿಂಗಮ್ಮ ಶ್ರೀ ಎಂ.ಸಿ. ಸದಾಶಿವಯ್ಯ ಇವರ ಸ್ಮರಣಾರ್ಥ ಶ್ರೀಮತಿ ನಾಗರತ್ನ ಹೊಸಮನಿ ನರೇಂದ್ರ ಪ್ರಕಾಶ್ ಭಕ್ತಿ ಸೇವೆಯನ್ನು ವಹಿಸಿಕೊಂಡಿದ್ದರು.

# ಬಿಜೆಪಿ ಸರ್ಕಾರ 39 ಸಮಾಜಕ್ಕೆ 119 ಕೋಟಿ ಅನುದಾನ ಕೊಟ್ಟಿದೆ

## ಹಡಗಲಿಯಲ್ಲಿ ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ



ಹಡಗಲಿ, ಮೇ 3- ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಡಗಲಿ ತಾಲ್ಲೂಕು ಮೈಲಾರ ಗ್ರಾಮಕ್ಕೆ 10 ಕೋಟಿ ಅನುದಾನ ಕೊಟ್ಟಿದ್ದಾರೆ. ನಾನು ಮಂತ್ರಿಯಾಗಿದ್ದಾಗ ಇದೇ ಗ್ರಾಮಕ್ಕೆ ಮೂರು ಕೋಟಿ ಅನುದಾನ ಕೊಟ್ಟಿದ್ದೇನೆ. ಆದರೆ ಪರಮೇಶ್ವರ ನಾಯ್ಕ 20 ಲಕ್ಷ ಕೊಡುತ್ತೇನೆ ಎಂದು ಹೇಳಿ ಕೊಡದೆ ವಚನಭ್ರಷ್ಟರಾಗಿದ್ದಾರೆ. ಆದ್ದರಿಂದ ಬಿಜೆಪಿ ಅಭ್ಯರ್ಥಿ ಕೃಷ್ಣನಾಯ್ಕ ಅವರನ್ನು ಗೆಲ್ಲಿಸಿ ಪರಮೇಶ್ವರ್ ನಾಯ್ಕರಿಗೆ ತಕ್ಕ ಪಾಠ ಕಲಿಸಿ ಎಂದು ಮಾಜಿ ಸಚಿವ ಕೆ. ಎಸ್. ಈಶ್ವರಪ್ಪ ಕರೆ ನೀಡಿದ್ದಾರೆ.

ಹಡಗಲಿ ತಾಲ್ಲೂಕು ಹ್ಯಾರಡ ಗ್ರಾಮದಲ್ಲಿ ಇಂದು ರೋಡ್ ಶೋ ನಡೆಸಿ, ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದರು.

ಕಾಂಗ್ರೆಸ್ ಈ ದೇಶದಲ್ಲಿ ಕೇವಲ ಹಿಂದುಳಿದ ವರ್ಗದವರ ಮತ್ತು ದಲಿತರ ಪರವಾಗಿ ಮಾತನಾಡುತ್ತದೆಯೇ ಹೊರತು, ಯಾವ ಕೆಲಸಗಳನ್ನೂ ಮಾಡಿಲ್ಲ ಎಂದು ಅವರು ಕಾಂಗ್ರೆಸ್ ಪಕ್ಷವನ್ನು ಟೀಕಿಸಿದರು.

ಬೊಮ್ಮಾಯಿ ನೇತೃತ್ವದ ರಾಜ್ಯ ಬಿಜೆಪಿ ಸರ್ಕಾರ 39 ಸಮಾಜಕ್ಕೆ ಅಂದರೆ ಕುರುಬ, ಕುಂಬಾರ, ಮರಾಠರು, ಉಪ್ಪಾರ್, ದಲಿತರು, ಲಂಬಾಣಿ ಇತರೆ ಯಾವುದೇ ಇರಬಹುದು ಒಟ್ಟು 119 ಕೋಟಿ ಕೊಟ್ಟು ಬಡವರಿಗೆ ನೆರವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಂಡಲ್ ಅಧ್ಯಕ್ಷ ಸಂಜೀವ್ ರೆಡ್ಡಿ, ಮುಖಂಡ ಓದೋ ಗಂಗಪ್ಪ, ಮಾಜಿ ಶಾಸಕರಾದ ಚಂದ್ರನಾಯಕ್, ನಂದಿಹಳ್ಳಿ ಹಾಲಪ್ಪ ಹಾಗು ಈಟಿ ಲಿಂಗರಾಜ್ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

# ಪವರ್‌ಲಿಫ್ಟಿಂಗ್ ಚಾಂಪಿಯನ್ ಶಿಪ್ : ತೀರ್ಪುಗಾರರಾಗಿ ಎಚ್.ದಾದಾಪೀರ್



ದಾವಣಗೆರೆ, ಮೇ 3- ಕೇರಳ ರಾಜ್ಯದ ಅಲ್ಲಪೂಜಾ ದಲ್ಲಿ ಇಂದಿನಿಂದ ಇದೇ ದಿನಾಂಕ 6ರವರೆಗೆ ನಡೆಯಲಿರುವ ಏಷ್ಯನ್ ಪವರ್‌ಲಿಫ್ಟಿಂಗ್ ಚಾಂಪಿಯನ್ ಶಿಫ್ ಭಾರತ ತಂಡದ ತರಬೇತುದಾರರಾಗಿ ಮತ್ತು ಸ್ಪರ್ಧೆಗಳ ತೀರ್ಪುಗಾರರಾಗಿ ಅಂತರರಾಷ್ಟ್ರೀಯ ಕ್ರೀಡಾಪಟು, ಏಕಲವ್ಯ ಪ್ರಶಸ್ತಿ ಪುರಸ್ಕೃತ ದಾವಣಗೆರೆಯ ಎಚ್. ದಾದಾಪೀರ್ ಆಯ್ಕೆಯಾಗಿದ್ದಾರೆ.

# ರಾಣಿಯ ಬಿದನೂರಿನಲ್ಲಿ ವಂಚಿತ ವನಿತೆಯರು

## ರಾಣೇಬೆನ್ನೂರು



ರಾಣೇಬೆನ್ನೂರು, ಮೇ 3- ಮಹಿಳಾ ಸಬಲೀಕರಣ, ಸ್ತ್ರೀ ಸಮಾನತೆ ರಾಜಕಾರಣದಲ್ಲಿ ವನಿತೆಯರಿಗೆ ಪ್ರಾತಿನಿಧ್ಯ ಮುಂತಾದ ಆಶಯಗಳು ಕೇವಲ ಭಾಷಣಗಳಿಗೆ ಸೀಮಿತವಾಗಿದ್ದು, ಚುನಾವಣೆಗೆ ಟಿಕೆಟ್ ಕೊಡುವಾಗ ಮಹಿಳೆಯರನ್ನು ಕಡೆಗಣಿಸುವ ಪರಿಪಾಠ ಎಲ್ಲ ರಾಜಕೀಯ ಪಕ್ಷಗಳಲ್ಲಿ ಮೊದಲಿನಿಂದಲೂ ನಡೆದು ಬಂದಿದೆ. ಸಾಮಾಜಿಕ ಹಬ್ಬ- ಹರಿದಿನಗಳಲ್ಲಿ ಗರಿಗರಿ ಉಡುಗೆ ತೊಡುಗೆಗಳೊಂದಿಗೆ ಸಂಭ್ರಮಿಸುವ ಮಹಿಳಾಮಣಿಯರು ಜನತಂತ್ರದ ಹಬ್ಬದಲ್ಲಿ ಬೇವನುಂಡವರೇ ಹೆಚ್ಚು.

ಸ್ವಾತಂತ್ರ್ಯದ ನಂತರ ನಡೆದ ಮೊದಲ ಎರಡು ಚುನಾವಣೆಗಳಲ್ಲಿ ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರವಾಗಿದ್ದ ರಾಣೇಬೆನ್ನೂರಿನಿಂದ ಒಮ್ಮೆ ಅವಿರೋಧ ಆಯ್ಕೆಯಾಗಿ, ನಂತರದ 1967 ರ ಚುನಾವಣೆಯಲ್ಲಿ ಪಿ ಎಸ್ ಪಾರ್ಟಿಯ ವೈ.ವಿ.ಜೋಗಣ್ಣನವರ ಅವರನ್ನು 6,119 ಮತಗಳ ಅಂತರದಿಂದ ಸೋಲಿಸಿ 18,715 ಮತಗಳನ್ನು ಪಡೆದು ಆಯ್ಕೆಯಾದ ಕಾಂಗ್ರೆಸ್ ಪಾರ್ಟಿಯ ಮೊದಲ ಮಹಿಳಾ ಶಾಸಕಿ ಸಾಂಬ್ರಾಣಿ ಎಲ್ಲಮ್ಮ.

ನಂತರದ ದಿನಗಳಲ್ಲಿ ಮಹಿಳೆಯರಿಗೆ ಅಂತಹ ಅವಕಾಶಗಳು ಬರಲೇ ಇಲ್ಲಾ. ಸುಮಾರು ಮೂರು ದಶಕಗಳ ಹಿಂದೆ ಬೆಂಗಳೂರು ಮೂಲದ ಶಾಂತಮ್ಮ ಪವಾಡಪ್ಪ ಎನ್ನುವವರು ಟಿಕೆಟ್‌ಗೆ ಪ್ರಯತ್ನಿಸಿ ವಿಫಲರಾದರು. ನಂತರದಲ್ಲಿ ಜಿಲ್ಲಾ ಪರಿಷತ್ ಸದಸ್ಯೆಯಾಗಿದ್ದ ಕಮಲಾನಾಯ್ಕ, ತದನಂತರ ಪ್ರಭಾವಿ ರಾಜಕೀಯ ಮನೆತನದಲ್ಲಿ ಜನಿಸಿದ ರುಕ್ಮಿಣಿ ಸಾವುಕಾರ, ಮಾಜಿ ಶಾಸಕರ ಮಗಳು, ನಗರದ ಪ್ರತಿಷ್ಠಿತ ಕುಟುಂಬದ ಸೊಸೆ ಭಾರತಿ ಜಂಬಗಿ, ಜನಸೇವೆಯಲ್ಲಿ ಆತ್ಮತೃಪ್ತಿ ಕಾಣುವ ಹಂಬಲದ ಭಾರತಿ ಅಳವಂಡಿ ಹೀಗೆ ಬೆರಳೆಣಿಕೆಯಷ್ಟಿರುವ ಮಹಿಳೆಯರು ಅವಕಾಶ ವಂಚಿತರಾಗುತ್ತಿರುವುದು ವಿಷಾದಕರ ಸಂಗತಿ.

# ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ನಾಳೆ ಶಿವಾನುಭವ ಗೋಷ್ಠಿ



ದಾವಣಗೆರೆ, ಮೇ 3- ನಗರ ಸಮೀಪದ ಬಾಡಾ ಕ್ರಾಸ್‌ನಲ್ಲಿರುವ ಶ್ರೀ ವೀರೇಶ್ವರ ಪುಣ್ಯಾಶ್ರಮ ದಲ್ಲಿ 266ನೇ ಬುದ್ಧ ಪೌರ್ಣಿಮೆ ಶಿವಾನುಭವ ಗೋಷ್ಠಿ ಮತ್ತು ಸಂಗೀತ ಕಾರ್ಯಕ್ರಮವನ್ನು ನಾಡಿದ್ದು ದಿನಾಂಕ 5ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಏರ್ಪಡಿಸಲಾಗಿದೆ.

ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಹಾಗೂ ವೀರೇಶ್ವರ ಪುಣ್ಯಾಶ್ರಮದ ಶ್ರೀ ಡಾ. ಕಲ್ಲಯ್ಯಜ್ಜನವರು ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಲೆಕ್ಕ ಪರಿಶೋಧಕ ಅಥಣಿ ವೀರಣ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ವೀರೇಶ್ವರ ಪುಣ್ಯಾಶ್ರಮದ ಕಾರ್ಯದರ್ಶಿ ಎ.ಹೆಚ್. ಶಿವಯೋಗಿ ಸ್ವಾಮಿ ಉಪಸ್ಥಿತರಿರುವರು.

# ರಾಣೇಬೆನ್ನೂರಿನಲ್ಲಿಂದು ವಿದ್ಯುತ್ ವ್ಯತ್ಯಯ

ಹಲಗೇರಿ ವ್ಯಾಪ್ತಿಯಲ್ಲಿ ಕಾಮಗಾರಿ ಹಮ್ಮಿಕೊಂಡಿರುವುದರಿಂದ 33 ಕೆವಿ ಹಲಗೇರಿ ವಿದ್ಯುತ್ ಕೇಂದ್ರದ 11ಕೆವಿ ಎಫ್2- ಆನಂದ ಮಿಲ್, ಎಫ್3- ಹಲಗೇರಿ ಟೌನ್, ಎಫ್4-ಎನ್ ಜೆ ವಾಯ್ ನಿಟ್ಟೂರು ಮತ್ತು ಎಫ್8-ಎನ್ ಜೆ ವಾಯ್ ದಂಡಗಿಹಳ್ಳಿ ಮಾರ್ಗಕ್ಕೆ ಇಂದು ವಿದ್ಯುತ್ ಸರಬರಾಜು ಇರುವುದಿಲ್ಲ. ಕಾರಣ, ಆನಂದ ಮಿಲ್ ಮತ್ತು ಹಲಗೇರಿ, ಬಿಲ್ಲಹಳ್ಳಿ, ದಂಡಗಿಹಳ್ಳಿ, ಹಾರೋಗೊಪ್ಪ, ಆಲದಕಟ್ಟಿ, ಮಣಕೂರು, ಲಿಂಗದಹಳ್ಳಿ, ಅಂತರವಳ್ಳಿ, ನಂದಿಹಳ್ಳಿ, ಯಲಬಡಗಿ, ಗೋಡಿಹಾಳ, ನಿಟ್ಟೂರು, ಕೋಣನತಲೆ ಗ್ರಾಮಗಳಿಗೆ ಇಂದು ಮುಂಜಾನೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

# ಇಂದು ದೇವರಹಟ್ಟಿ ಸುತ್ತಮುತ್ತ ನಾಗರಾಜ್ ಲೋಕಿಕೆರೆ ಪ್ರಚಾರ



ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಅವರು ಇಂದು ಮತ ಪ್ರಚಾರ ನಡೆಸುವರು. ಬೆಳಿಗ್ಗೆ 7.30ಕ್ಕೆ ಚಿಕ್ಕಬೂದಿಹಾಳ್‌ನಿಂದ ಪ್ರಾರಂಭ ವಾಗುವ ಮತ ಪ್ರಚಾರವು ದೇವರಹಟ್ಟಿ, ಗಡಿ ಬೇವಿನ ಮರ, ಮಾಗಾನಹಳ್ಳಿ, ಪುಟಗನಾಳ್ ಭಾಗಗಳಲ್ಲಿ ನಡೆಯಲಿದೆ. ಸಂಜೆ 4 ಗಂಟೆಗೆ 23ನೇ ವಾರ್ಡ್‌ನಲ್ಲಿ ಮತ ಪ್ರಚಾರ ಕಾರ್ಯಕ್ರಮವು ವಿನೋಬನಗರ 2ನೇ ಮುಖ್ಯ ರಸ್ತೆಯಲ್ಲಿನ ಶ್ರೀ ವೀರ ವರಸಿದ್ಧಿ ವಿನಾಯಕ ದೇವಸ್ಥಾನದಿಂದ ಪ್ರಾರಂಭಗೊಂಡು, ಎಸ್. ನಿಜಲಿಂಗಪ್ಪ ಬಡಾವಣೆ, ಎಸ್. ಎಸ್. ಬಡಾವಣೆಯಲ್ಲಿ ನಾಗರಾಜ್ ಲೋಕಿಕೆರೆ ಅವರು ಮತ ಯಾಚಿಸುವರು.

# ನಗರದಲ್ಲಿ ಇಂದು ಚಿಂತನೆ, ಸಂವಾದ

ಕರುಣಾ ಜೀವ ಕಲ್ಯಾಣ ಟ್ರಸ್ಟ್ ಆಶ್ರಯದಲ್ಲಿ 'ಬುದ್ಧನ ಅಷ್ಟಾಂಗ ಮಾರ್ಗಗಳು' ವಿಷಯ ಕುರಿತು ಚಿಂತನೆ, ಸಂವಾದವು ಕರುಣಾ ಜೀವ ಕಲ್ಯಾಣ ಟ್ರಸ್ಟ್ ಕಚೇರಿಯಲ್ಲಿ ಇಂದು ನಡೆಯಲಿದೆ. ಬೆಳಿಗ್ಗೆ 6 ರಿಂದ 7 ರವರೆಗೆ ನಡೆಯಲಿರುವ ಕಾರ್ಯಕ್ರಮದಲ್ಲಿ ಶಿವನಕೆರೆ ಬಸವಲಿಂಗಪ್ಪ ಚಿಂತನೆ ನಡೆಸುವರು. ಸಂವಾದದಲ್ಲಿ ಗುರುಮೂರ್ತಿ, ಎಂ. ಗಂಗಾಧರಪ್ಪ, ಪ್ರೊ. ಎಂ. ಬಸವರಾಜ್, ಡಾ. ನಾಗರಾಜ್ ಆಚಾರ್, ಕೆ.ಆರ್. ಸಿದ್ದಪ್ಪ, ಮಹಾಂತೇಶ್ ಅಗಡಿ, ಲಾಯರ್ ಸಿದ್ದಯ್ಯ, ಮಲ್ಲಾಬಾದಿ ಬಸವರಾಜ್ ಭಾಗವಹಿಸುವರು.


## ಶಿವಾಜಿರಾವ್ ಅಂಬರ್‌ಕರ್ ನಿಧನ



ಜನನ : 24-06-1941

ದೈವಾಧೀನ : 03-05-2023

ದಾವಣಗೆರೆ ಸಿಟಿ ವಾಸಿ, ದಾವಣಗೆರೆ ಅಂಬರ್‌ಕರ್ ಟ್ರೈಲರ್ ಸ್ಥಾಪಕರಾದ

**ಶ್ರೀ ಶಿವಾಜಿರಾವ್ ಅಂಬರ್‌ಕರ್** ಅವರು

ದಿನಾಂಕ 03-05-2023ರ ಬುಧವಾರ ಬೆಳಿಗ್ಗೆ 6.30 ಗಂಟೆಗೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 82 ವರ್ಷ ವಯಸ್ಸಾಗಿತ್ತು. ಮಕ್ಕಳು, ಸಹೋದರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 3-5-2023ರ ಬುಧವಾರ ಸಂಜೆ ಪಿ.ಬಿ. ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ನೆರವೇರಿಸಲಾಯಿತು.

**ದುಃಖತಪ್ತ ಕುಟುಂಬ ವರ್ಗ**

ಮಕ್ಕಳು :
- ಶಿವಪ್ರಸಾದ್ ಅಂಬರ್‌ಕರ್
- ಹರೀಶ್ ಅಂಬರ್‌ಕರ್
- ನರೇಶ್ ಅಂಬರ್‌ಕರ್

ಸಹೋದರರು :
- ಜಯಪ್ರಕಾಶ್ ಅಂಬರ್‌ಕರ್
- ಮದನ್‌ಕುಮಾರ್ ಅಂಬರ್‌ಕರ್
- ಪ್ರಮೋದ್ ಅಂಬರ್‌ಕರ್

ಹಾಗೂ ಕುಟುಂಬ ವರ್ಗದವರು


# ವೈಯಕ್ತಿಕ ಹಿತಾಸಕ್ತಿಗೆ ಬಂಜಾರ ಸಮಾಜದ ಬಳಕೆ

## ಲಂಬಾಣಿ ಸಮಾಜದ ಜಿಲ್ಲಾ ಮುಖಂಡ ಎಲ್.ಕೊಟ್ರೇಶ್ ನಾಯ್ಕ ಆರೋಪ

ದಾವಣಗೆರೆ, ಮೇ 3- ಮಾಯಕೊಂಡ ಬಿಜೆಪಿ ಅಭ್ಯರ್ಥಿ ಎಂ. ಬಸವರಾಜನಾಯ್ಕ ಅವರು ತಮ್ಮ ವೈಯಕ್ತಿಕ ಹಿತಾಸಕ್ತಿಗಾಗಿ ಬಂಜಾರ ಸಮುದಾಯವನ್ನು ಬಲಿಕೊಡುತ್ತಿದ್ದಾರೆ ಎಂದು ಕಾಂಗ್ರೆಸ್ ಮುಖಂಡ, ಲಂಬಾಣಿ ಸಮಾಜದ ಜಿಲ್ಲಾ ಮುಖಂಡ ಎಲ್. ಕೊಟ್ರೇಶ್ ನಾಯ್ಕ ಆರೋಪಿಸಿದ್ದಾರೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಜಾತಿಗಳ ವರ್ಗೀಕರಣ (ಒಳ ಮೀಸಲಾತಿ) ಹಂಚಿಕೆ ಮಾಡಿ ಕೇಂದ್ರಕ್ಕೆ ಶಿಫಾರಸ್ಸು ಮಾಡಲು ನಿರ್ಧರಿಸಿರುವ ಸರ್ಕಾರದ ಕ್ರಮದಿಂದ ಸಂವಿಧಾನ ಹಾಗೂ ಕಾನೂನನ್ನು ಗಾಳಿಗೆ ತೂರಲಾಗಿದೆ. ಆದರೆ ತನ್ನ ವೈಯಕ್ತಿಕ ಲಾಭಕ್ಕಾಗಿ ಬಸವರಾಜ ನಾಯ್ಕ ಅವರು ಸರ್ಕಾರದ ನಿರ್ಧಾರ ಸರಿ ಇದೆ ಎಂದು ಹೇಳಿಕೆ ನೀಡಿದ್ದಾರೆ. ಈ ಮೂಲಕ ಲಂಬಾಣಿ ಜನಾಂಗಕ್ಕೆ ಮೋಸ ಮಾಡಿದ್ದಾರೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಚಂದ್ರಶೇಖರನಾಯ್ಕ ಜಮ್ಮಾಪುರ, ದೇವ್ಲಾನಾಯ್ಕ ಚಿನ್ನಸಮುದ್ರ, ಪಿ. ಕಾಶೀನಾಥ ಉಪಸ್ಥಿತರಿದ್ದರು.

# ಜಿಗಳಿ: ಹೋಮ, ಸಾಮೂಹಿಕ ಸತ್ಯನಾರಾಯಣ ಪೂಜೆ



ಮಲೇಬೆನ್ನೂರು, ಮೇ 3- ಜಿಗಳಿ ಗ್ರಾಮದ ವಾಸವಿ ಅಮ್ಮನವರ ದೇವಸ್ಥಾನದ ನೂತನ ಕಟ್ಟಡದಲ್ಲಿ ವಾಸವಿ ಯುವಜನ ಸಂಘದಿಂದ ವಾಸವಿ ಜಯಂತಿ ಪೂರ್ವಭಾವಿ ಯಾಗಿ ಶುಕ್ರವಾರ ಹೋಮ ಮತ್ತು ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆಯನ್ನು ಹಮ್ಮಿಕೊಳ್ಳಲಾಗಿತ್ತು.

ಈ ವೇಳೆ ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ನಿರ್ದೇಶಕ ಆರ್.ಜಿ. ಶ್ರೀನಿವಾಸಮೂರ್ತಿ ಮತ್ತು ಕರ್ನಾಟಕ ಆರ್ಯ ವೈಶ್ಯ ಮಹಾಸಭಾದ ನಿರ್ದೇಶಕರೂ ಆದ ದಾವಣಗೆರೆ ಶ್ರೀ ಕನ್ನಿಕಾಪರಮೇಶ್ವರಿ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಆರ್.ಎಲ್. ಪ್ರಭಾಕರ್ ಹಾಗೂ ಹರಿಹರ, ಹೊನ್ನಾಳಿ ತಾಲ್ಲೂಕುಗಳ ವಾಸವಿ ಯುವಜನ ಸಂಘಗಳ ಅಧ್ಯಕ್ಷರುಗಳನ್ನು ಸನ್ಮಾನಿಸಿ, ಗೌರವಿಸಲಾಯಿತು.

ಜಿಗಳಿ ವಾಸವಿ ಯುವಜನ ಸಂಘದ ಅಧ್ಯಕ್ಷ ಬಿಳಸನೂರು ಹನುಮಂತರೆಡ್ಡಿ, ಕೆ.ವಿ. ತಿರುಕಪ್ಪ ಶ್ರೇಷ್ಠಿ, ಕೂಲಂಬಿ ಕೃಷ್ಣಮೂರ್ತಿ ಶ್ರೇಷ್ಠಿ, ಭಾನುವಳ್ಳಿಯ ಶ್ರೀನಿವಾಸಬಾಬು, ನಂದಿಗಾವಿಯ ವೈ.ಕೆ. ತಿಮ್ಮಪ್ಪ ಶ್ರೇಷ್ಠಿ, ಗುಳದಹಳ್ಳಿಯ ರವೀಂದ್ರನಾಥ್ ಶ್ರೇಷ್ಠಿ, ಜಿಗಳಿಯ ಮುಖಂಡರಾದ ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿ. ಆನಂದಪ್ಪ, ಪತ್ರಕರ್ತ ಪ್ರಕಾಶ್, ಕೆ. ಎಂ. ಮಹಾಬಲೇಶ್, ಮುರುಳಿ, ರಾಘು, ಬಡಿಗೇರ್ ರಾಮು, ಮಲೇಬೆನ್ನೂರಿನ ನಂದಿಗಾವಿ ರಾಜೀವ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ಲೋಕಿಕೆರೆ ನಾಗರಾಜ್ ಪತ್ನಿ ಬಿರುಸಿನ ಪ್ರಚಾರ



ದಾವಣಗೆರೆ, ಮೇ 3- ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಅವರ ಪತ್ನಿ ಶ್ರೀಮತಿ ಲತಾ ನಾಗರಾಜ್ ಲೋಕಿಕೆರೆ ಅವರು ಪತಿ ಪರ ಬಿರುಸಿನ ಮತ ಪ್ರಚಾರ ನಡೆಸಿದರು.

ಆವರಗೊಳ್ಳ, ರೇಣುಕಾ ನಗರ, ಕಟ್ಟೆಗುಂಡಿ ಕ್ಯಾಂಪ್ ಭಾಗಗಳಲ್ಲಿ ಇಂದು ಬಿಜೆಪಿ ಮಹಿಳಾ ಮುಖಂಡರು, ಕಾರ್ಯಕರ್ತೆಯರ ಜೊತೆಗೂಡಿ, ಮತದಾರರ ಪ್ರತಿ ಮನೆಗಳಿಗೆ ಭೇಟಿ ನೀಡಿ, ಮನೆ ಮನೆ ಸಂಪರ್ಕದ ಜೊತೆಗೆ ಮತದಾರರ ಮನೆಗಳಲ್ಲಿ ಸಭೆ ನಡೆಸಿ, ಪತಿ ನಾಗರಾಜ್ ಲೋಕಿಕೆರೆ ಅವರನ್ನು ಬೆಂಬಲಿಸುವಂತೆ ಮತ ಯಾಚಿಸಿದರು.

ಈ ವೇಳೆ ಹೆಚ್.ಸಿ. ಜಯಮ್ಮ, ವೀಣಾ ನಂಜಪ್ಪ, ಗಾಯತ್ರಿ, ರೇಖಾ ಸುರೇಶ್, ತನು ನಂದೀಶ್, ರಾಜೇಶ್ವರಿ, ಮೇಘನಾ, ದಾಕ್ಷಾಯಿಣಿ, ಮಂಜುಳಾ, ಯಶೋಧ, ಶ್ರೀದೇವಿ, ರಶ್ಮಿ ಪ್ರದೀಪ್, ಪ್ರೀತಿ ಜಗದೀಶ್, ಶ್ವೇತಾ ರಾಘವೇಂದ್ರ, ಪಾಲ್ಗುಣಿ, ಸಾಕಮ್ಮ, ದೇವಕ್ಕ, ಜ್ಯೋತಿ, ಗಾಯತ್ರಿ, ರೇಖಾ ಸುರೇಶ್, ಉಷಾ ಸೇರಿದಂತೆ ಪಕ್ಷದ ಕಾರ್ಯಕರ್ತರು ಲತಾ ನಾಗರಾಜ್ ಲೋಕಿಕೆರೆ ಅವರಿಗೆ ಸಾಥ್ ನೀಡಿದ್ದರು.

# ಶಿವಶಂಕರ್ ಗೆಲುವಿಗಾಗಿ ಸಹೋದರಿ ಪಾದಯಾತ್ರೆ



ಹರಿಹರ, ಮೇ 3 – ಹರಿಹರ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಎಸ್. ಶಿವಶಂಕರ್ ಅವರು ಅಧಿಕ ಬಹುಮತದೊಂದಿಗೆ ಗೆಲ್ಲುವಂತೆ ಅವರ ಸಹೋದರಿ ಚೇತನಾ ಅವರು ದಾವಣಗೆರೆ ನಗರದ ಅವರ ಮನೆಯಲ್ಲಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ, ನಂತರ ಪಾದಯಾತ್ರೆ ಮೂಲಕ ನಗರದ ಇತಿಹಾಸಿ ಪ್ರಸಿದ್ಧ ಶ್ರೀ ಹರಿಹರೇಶ್ವರ ಸ್ವಾಮಿ ದೇವಸ್ಥಾನದವರಗೆ ಆಗಮಿಸಿ ವಿಶೇಷ ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಜೆಡಿಎಸ್ ಮುಖಂಡರಾದ ಅರ್ಚನಾ ಅರವಿಂದ್, ಆಯಿಷಾ, ಲತಾ ಕೊಟ್ರೇಶ್, ಹೊನ್ನಮ್ಮ ಕೊಂಡಜ್ಜಿ, ಸುನಂದ, ಲಕ್ಷ್ಮಿ ರಾಜಚಾರ್, ಮಮತಾ, ಶೀಲಾಕುಮಾರಿ, ಅಡಕಿ ಕುಮಾರ್, ನಾಗರಾಜ್ ಅಮರಾವತಿ, ಚಂದ್ರಪ್ಪ ಅಮರಾವತಿ, ಪುಷ್ಪಾ ಲೋಕೇಶ್, ನಗಿನಾ ಸುಭಾನ್, ಪುಷ್ಪಾ ಮಾನೆ, ಪಾರ್ವತಿ, ಸ್ಮಿತಾ, ನಿರಂಜನ, ಯೋಗೀಶ, ಸಂಗಮೇಶ, ಮಹೇಶ್ ಪೂಜಾರ್, ಯಶವಂತ್ ಮತ್ತಿತರರು ಉಪಸ್ಥಿತರಿದ್ದರು.

# ಕೃತಕ ಬುದ್ಧಿವಂತಿಕೆ 'ಪಿತಾಮಹ'ನ ಎಚ್ಚರಿಕೆ

**(1ನೇ ಪುಟದಿಂದ)** ದಶಕದ ಕಾಲ ಗೂಗಲ್‌ನಲ್ಲಿ ಕಾರ್ಯನಿರ್ವಹಿಸಿದ್ದ ಅವರು, ಸೋಮವಾರವಷ್ಟೇ ರಾಜೀನಾಮೆ ನೀಡಿದ್ದರು. ನಂತರ ಈ ತಂತ್ರಜ್ಞಾನದ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ.

ಕೃತಕ ಬುದ್ಧಿವಂತಿಕೆ ಉದ್ಯೋಗಗಳನ್ನು ನಾಶಗೊಳಿಸುವ ಸಾಮರ್ಥ್ಯ ಹೊಂದಿದೆ. ನಮಗೆ ಸತ್ಯ ಯಾವುದೆಂಬುದು ಗೊತ್ತಾಗದೇ ಹೋಗುವ ಪ್ರಪಂಚ ಸೃಷ್ಟಿಸಬಲ್ಲದು ಎಂದವರು ಹೇಳಿದ್ದಾರೆ.

ಕೃತಕ ಬುದ್ಧಿವಂತಿಕೆಯು ಅಚ್ಚರಿಯ ವೇಗದಲ್ಲಿ ಬೆಳೆಯುತ್ತಿದೆ. ಇದರ ವೇಗ ನಾನು ಹಾಗೂ ಇತರರು ಊಹಿಸಿದ್ದಕ್ಕಿಂತ ತೀವ್ರತರ ದ್ದಾಗಿದೆ ಎಂದವರು ತಿಳಿಸಿದ್ದಾರೆ. ಇದು ನಮಗಿಂತ ಹೆಚ್ಚು ಚತುರವಾದರೆ, ಕಾರ್ಯ ನಿರ್ವಹಣೆಯಲ್ಲಿ ನಮ್ಮನ್ನು ಹಿಂದೆ ಹಾಕಲಿದೆ. ಹೆಚ್ಚು ಬುದ್ಧಿವಂತರು, ತಮಗಿಂತ ಕಡಿಮೆ ಬುದ್ಧಿವಂತರನ್ನು ನಿಯಂತ್ರಿಸುವ ಉದಾಹರಣೆ ಗಳಿವೆ ಎಂದು ಹಿಂಟನ್ ತಿಳಿಸಿದ್ದಾರೆ.

ಎ.ಐ.ಗೆ ಪ್ರೋಗ್ರಾಂ ಮಾಡುವ ಬಗ್ಗೆ ತಿಳಿದಿದೆ. ಹೀಗಾಗಿ ನಮ್ಮ ನಿಯಂತ್ರಣಗಳನ್ನು ಮೀರಿ ಹೋಗುವ ಬಗ್ಗೆ ಗೊತ್ತಿದೆ. ಇದು ಜನರು ತಾನು ಬೇಕಾದಂತೆ ವರ್ತಿಸುವ ರೀತಿಯಲ್ಲಿ ತಿರುಚಬಲ್ಲದು ಎಂದವರು ಎಚ್ಚರಿಸಿದ್ದಾರೆ.

ಕಳೆದ ಮಾರ್ಚ್ ತಿಂಗಳಲ್ಲಿ ವಿಜ್ಞಾನ ಸಮುದಾಯದ ಹಲವರು ಕೃತಕ ಬುದ್ಧಿವಂತಿಕೆಯ ಪ್ರಯೋಗಗಳನ್ನು ಕನಿಷ್ಠ ಆರು ತಿಂಗಳು ತಡೆಯುವಂತೆ ಬಹಿರಂಗ ಪತ್ರ ಬರೆದಿದ್ದರು. ಈ ತಂತ್ರಜ್ಞಾನದಿಂದ ಸಮಾಜ ಹಾಗೂ ಮನುಕುಲಕ್ಕೆ ಅಪಾಯವಿದೆ ಎಂದು ಹೇಳಿದ್ದರು.

ಆಪಲ್ ಕಂಪನಿಯ ಸಹಸ್ಥಾಪಕ ಸ್ಟೀವ್ ವಾಜ್ನಿಯಾಕ್ ಸಹ ಈ ಪತ್ರಕ್ಕೆ ಸಹಿ ಹಾಕಿದವರಲ್ಲಿ ಸೇರಿದ್ದಾರೆ. ಆದರೆ, ಹಿಂಟನ್ ಈ ಪತ್ರಕ್ಕೆ ಸಹಿ ಹಾಕಿರಲಿಲ್ಲ.

ಪತ್ರ ಬರೆಯುವ ಮಾತ್ರಕ್ಕೆ ಎ.ಐ. ಕುರಿತ ಪ್ರಗತಿ ನಿಲ್ಲುವುದಿಲ್ಲ. ಹೀಗಾಗಿ ಪತ್ರಕ್ಕೆ ಸಹಿ ಹಾಕಿರಲಿಲ್ಲ. ಅಮೆರಿಕದವರು ಈ ಕೆಲಸ ನಿಲ್ಲಿಸಿದರೂ, ಚೀನಾದವರು ನಿಲ್ಲಿಸಲಾರರು. ಈ ಸಮಸ್ಯೆ ಬಗೆಹರಿಸುವುದು ಹೇಗೆ ಎಂಬುದು ಸ್ಪಷ್ಟವಾಗಿಲ್ಲ. ಆದರೆ, ಸಮಸ್ಯೆ ಬಗೆಹರಿಸಲು ದೊಡ್ಡ ಪ್ರಯತ್ನವನ್ನಂತೂ ನಡೆಸಬೇಕಿದೆ ಎಂದವರು ತಿಳಿಸಿದ್ದಾರೆ.

# ಜಿಲ್ಲೆಯ ಸಮಗ್ರ ಅಭಿವೃದ್ಧಿಗಾಗಿ ಕಾಂಗ್ರೆಸ್ ಗೆಲ್ಲಿಸಿ

## ಉತ್ತರ ಕ್ಷೇತ್ರದ ಅಭ್ಯರ್ಥಿ ಎಸ್.ಎಸ್. ಮಲ್ಲಿಕಾರ್ಜುನ್



ದಾವಣಗೆರೆ, ಮೇ 3 - ಬಡವರ ಮಕ್ಕಳಿಗೆ ವಿದ್ಯೆ, ಕಡು ಬಡವರಿಗೆ, ಹಮಾಲರು, ಕಾರ್ಮಿಕರು, ಶ್ರಮಿಕರಿಗೆ ಸೂರು, ದಾವಣಗೆರೆ ನಗರ, ಜಿಲ್ಲೆಯ ಸಮಗ್ರ ಅಭಿವೃದ್ಧಿಗಾಗಿ ಉತ್ತರ-ದಕ್ಷಿಣ ಸೇರಿದಂತೆ ಜಿಲ್ಲೆಯ 7 ಕ್ಷೇತ್ರಗಳಲ್ಲೂ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ನಮ್ಮ ಪಕ್ಷವನ್ನು ಅಧಿಕಾರಕ್ಕೆ ತರುವಂತೆ ಉತ್ತರ ಕ್ಷೇತ್ರದ ಅಭ್ಯರ್ಥಿ, ಮಾಜಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಮತದಾರರಿಗೆ ಮನವಿ ಮಾಡಿದರು.

ನಗರದ ಎಪಿಎಂಸಿ ಆವರಣದ ಶ್ರೀ ಮಣಿಕಂಠ ಟ್ರೇಡರ್ಸ್ ಬಳಿ ಖಾಲಿ ಚೀಲ ವ್ಯಾಪಾರಸ್ಥರಾದ ಎಂ.ಬಿ. ಪ್ರಕಾಶ ಸೇರಿದಂತೆ ಅನೇಕರು ಕಾಂಗ್ರೆಸ್ ಸೇರ್ಪಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹಿಂದೆ 2002-03ರಲ್ಲಿ 15 ಸಾವಿರ ಆಶ್ರಯ ಮನೆ ಕಟ್ಟಿದ್ದೆವು. ಹಮಾಲರಿಗಾಗಿ ಆಲೂರುಹಟ್ಟಿ ಬಳಿ ಮನೆ ವ್ಯವಸ್ಥೆ ಮಾಡಿದ್ದೆವು. ಎಸ್‌ಓಜಿ ಕಾಲೋನಿ ನಿರ್ಮಿಸಿ, ಬಡವರಿಗೆ ಮನೆ ಕೊಟ್ಟೆವು. ಗ್ರಾ.ಪಂ. ನಿಂದ 50-100 ಮನೆ ಕೇಳುತ್ತಿದ್ದರು. ಆಗ ತಮ್ಮ ಆತ್ಮಿಯರಾಗಿದ್ದ ದಿ. ಅಂಬರೀಶ್ ವಸತಿ ಸಚಿವರಿದ್ದ ವೇಳೆ ಪ್ರತಿ ಗ್ರಾ.ಪಂ. ಗೆ 400-500 ಮನೆ ಮಂಜೂರು ಮಾಡಿಸಿದ್ದೆ. ಆದರೆ, ಪಂಚಾಯಿತಿಯವರು 50-60 ಮನೆ ಮಾತ್ರ ಕಟ್ಟಿ, ಉಳಿದವು ವಾಪಸ್ಸಾಗಿದ್ದವು. ಆದರೆ, ಬಿಜೆಪಿಯವರು ಒಂದು ಮನೆ ಕಟ್ಟಲೂ ಸಹ ಮುಂದಾಗಲಿಲ್ಲ ಎಂದು ಅವರು ಟೀಕಿಸಿದರು.

ಕಾಂಗ್ರೆಸ್ ಸರ್ಕಾರ ಬರುತ್ತಿದ್ದಂತೆ ಬಡವರು, ಹಮಾಲರು, ಕಾರ್ಮಿಕರು, ಶ್ರಮಿಕರಿಗೆ ಸೂರು, ಎಲ್ಲರಿಗೂ ಅನುಕೂಲ ಕಲ್ಪಿಸುವ ಕೆಲಸ ಮಾಡುತ್ತೇವೆ ಎಂದು ಅವರು ಭರವಸೆ ನೀಡಿದರು.

ಖಾಲಿ ಚೀಲ ವ್ಯಾಪಾರಸ್ಥರು, ದಲ್ಲಾಳಿಗಳು, ವರ್ತಕರು, ಹಮಾಲರು ಇಲ್ಲಿನ ಎಪಿಎಂಸಿಯಲ್ಲಿ ಉರಿ ಬಿಸಿಲು, ಧೂಳಿನಲ್ಲಿ ಕೆಲಸ ಮಾಡಬೇಕಿತ್ತು. ತಾವು ಹಾಗೂ ತಮ್ಮ ತಂದೆ ಎಪಿಎಂಸಿ, ತೋಟಗಾರಿಕೆ ಸಚಿವರಿದ್ದಾಗ ಇಡೀ ರಾಜ್ಯಕ್ಕೆ ಮಾದರಿ ಎಪಿಎಂಸಿ ಮಾಡಿದೆವು. ಇಂದು ಎಪಿಎಂಸಿ ರಾಜ್ಯಾದ್ಯಂತ ಉತ್ತಮ ಹೆಸರು ಗಳಿಸಿದೆ. ಧೂಳುಮುಕ್ತ ವಾತಾವರಣದಲ್ಲಿ ನೀವೆಲ್ಲಾ ವ್ಯವಹಾರ ನಡೆಸುತ್ತಿದ್ದೀರಿ.

ಹೈಟೆಕ್ ದನದ ಮಾರುಕಟ್ಟೆ, ನೀರಿನ ವ್ಯವಸ್ಥೆ, ಮೂಲ ಸೌಕರ್ಯ ಕಲ್ಪಿಸಿದ್ದೇವೆ. ಅದೇ ಪ್ರೀತಿ, ವಿಶ್ವಾಸವಿಟ್ಟು, ಹೆಚ್ಚು ಮತಗಳ ಅಂತರದಲ್ಲಿ ದಕ್ಷಿಣದಲ್ಲಿ ತಮ್ಮ ತಂದೆ ಶಾಮನೂರು ಶಿವಶಂಕರಪ್ಪ, ಉತ್ತರದಲ್ಲಿ ತಮ್ಮನ್ನು ಹಾಗೂ ಉಳಿದ 5 ಕ್ಷೇತ್ರಗಳಲ್ಲೂ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸುವಂತೆ ಅವರು ಮನವಿ ಮಾಡಿದರು.

ಆ ಜಾತಿ, ಈ ಜಾತಿ ಅಂತಾ ಅಲ್ಲ, ಎಲ್ಲರೂ ನಾವು ಮನುಷ್ಯ ಜಾತಿ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಎಲ್ಲರ ಹಿತ ಕಾಯುವ ಪಕ್ಷವಿದ್ದರೆ ಅದು ಕಾಂಗ್ರೆಸ್ ಮಾತ್ರ. ಕೊರೊನಾ ಸಂಕಷ್ಟದಿಂದಾಗಿ ಜನ ಜೀವನ ಪಾತಾಳ ತಲುಪಿದೆ. ನಮ್ಮೆಲ್ಲಾ ಕಾರ್ಯಕರ್ತರು ಆ ಸವಾಲಿನ ದಿನಗಳಲ್ಲೂ ಉತ್ತಮ ಕೆಲಸ ಮಾಡಿದ್ದಾರೆ ಎಂದರು.

ಇದೇ ಸಂದರ್ಭದಲ್ಲಿ ಸಲ್ಯೂಟ್ ತಿರಂಗ್ ಸಂಘಟನೆಯ ರಾಜ್ಯ ಕಾರ್ಯಾಧ್ಯಕ್ಷ ನೀಲಕಂಠಸ್ವಾಮಿ ಎನ್.ಬಿ. ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಗೊಂಡರು.

ಈ ಸಂದರ್ಭದಲ್ಲಿ ಎಪಿಎಂಸಿ ಮಾಜಿ ಅಧ್ಯಕ್ಷರುಗಳಾದ ಮುದೇಗೌಡ್ರು ಗಿರೀಶ್, ಎನ್.ಜಿ. ಪುಟ್ಟಸ್ವಾಮಿ, ಮಹಾನಗರ ಪಾಲಿಕೆ ಸದಸ್ಯ ಶ್ರೀಮತಿ ಮೀನಾಕ್ಷಿ ಜಗದೀಶ್, ಮಾಜಿ ಸದಸ್ಯ ಎಂ. ಬಸಪ್ಪ, ವಿನಾಯಕ ರೈಸ್ ಮಿಲ್ ಸಿದ್ದೇಶ್, ಎಂ.ಬಿ. ಪ್ರಕಾಶ್, ಅಂಬರೀಶ್ ಬೆಳಗನೂರು, ಮಾಣಿಕೇಶ್ವರಿ ಮಲ್ಲಣ್ಣ, ಇಸ್ಮಾಯಿಲ್, ಅಯ್ಯಪ್ಪ ಟ್ರೇಡರ್ಸ್ ವೀರೇಶ್, ಸಂತೋಷ್ ಬೆಳಗನೂರು, ವಿನಯ್, ವೆಂಕಟೇಶ್, ಮಾರುತಿ, ಪಾಟೀಲ್ ಪ್ರಕಾಶ್, ಮಹಬೂಬ್ ದಾ, ನಾಗರಾಜ್, ಗುರುರಾಜ್, ಹುಲಿಕಟ್ಟೆ ರಾಜೇಶ್, ಹನುಮಂತಣ್ಣ, ಮಹೇಶಣ್ಣ, ಸನಾವುಲ್ಲಾ, ಹೆಚ್.ಎನ್. ರಾಜಶೇಖರ್, ಪ್ರಶಾಂತ್, ಜಯರಾಜ್, ಪ್ರವೀಣ್, ಶಿವಪುತ್ರಣ್ಣ, ಮಂಜಣ್ಣ ಅಕ್ಕಿ, ಅಣ್ಣಪ್ಪ, ಗಾಡಿ ಈರಣ್ಣ, ಎನ್ ಎಂ ಕೆ ವಿರೂಪಾಕ್ಷಣ್ಣ, ಗಿರೀಶ್, ನೀಲಕಂಠಸ್ವಾಮಿ, ಸುನೀಲ್, ಭೀಮ, ಅಜಯ್, ವೆಂಕಟೇಶ್, ಸುರೇಶಣ್ಣ, ಅಖಿಲೇಶ್, ಕಾರ್ತೀಕ್, ಅಲ್ಲಾವಲಿ ಆಶ್ರಫ್, ಅಜ್ಜಪ್ಪ, ಅಮರಯ್ಯ ಗುರುವಿನಮಠ್, ಚಂದ್ರಶೇಖರ್ ಆಡಿಟರ್, ಕಿರಣ್ ಆಡಿಟರ್, ಶ್ರೀಧರ್ ಬೆಂಗಳೂರು, ಲಾರಿ ಶಿವಣ್ಣ, ಒಣರೊಟ್ಟಿ ಶಿವಣ್ಣ, ಅವಣ್ಣೆಪ್ಪ, ಬಿ.ಎಂ.ಬಂದಗಿ, ಚಮನ್ ಸಾಬ್, ಇರ್ಫಾನ್, ರಿಯಾಜ್, ರಸೂಲ್, ಕೆ.ಬಿ.ಬುಡೇನ್, ಕರಿಬಸು, ತೌಡಿನ ಜಯಣ್ಣ, ಜಿ.ಬಸವರಾಜ್, ನೀಲಕಂಠಪ್ಪ ಮೇಟಿ, ಲಾಯರ್ ಬಸವರಾಜ್, ಎ.ಎಸ್.ವಿರೂಪಾಕ್ಷ, ಗಂಗಾಧರ್ ಮತ್ತಿತರರಿದ್ದರು.

# ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ನಾಳೆ ಶಿವಾನುಭವ ಗೋಷ್ಠಿ





ದಾವಣಗೆರೆ, ಏ. 3- ನಗರ ಸಮೀಪದ ಬಾಡಾ ಕ್ರಾಸ್‌ನಲ್ಲಿರುವ ಶ್ರೀ ವೀರೇಶ್ವರ ಪುಣ್ಯಾಶ್ರಮ ದಲ್ಲಿ 266ನೇ ಬುದ್ಧ ಪೌರ್ಣಿಮೆ ಶಿವಾನುಭವ ಗೋಷ್ಠಿ ಮತ್ತು ಸಂಗೀತ ಕಾರ್ಯಕ್ರಮವನ್ನು ನಾಡಿದ್ದು ದಿನಾಂಕ 5ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಏರ್ಪಡಿಸಲಾಗಿದೆ.

ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಮಹಾಸ್ವಾಮೀಜಿ ಹಾಗೂ ವೀರೇಶ್ವರ ಪುಣ್ಯಾಶ್ರಮದ ಶ್ರೀ ಡಾ. ಕಲ್ಲಯ್ಯಜ್ಜನವರು ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಲೆಕ್ಕ ಪರಿಶೋಧಕ ಅಥಣಿ ವೀರಣ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ವೀರೇಶ್ವರ ಪುಣ್ಯಾಶ್ರಮದ ಕಾರ್ಯದರ್ಶಿ ಎ.ಹೆಚ್. ಶಿವಯೋಗಿ ಸ್ವಾಮಿ ಉಪಸ್ಥಿತರಿರುವರು.

ಅಂದಿನ ಪ್ರಸಾದ ಸೇವೆಯನ್ನು ಬೆಂಗಳೂರಿನ ಲಿ. ಶ್ರೀ ಟಿ.ಕೆ. ವೀರಣ್ಣ ಇವರ ಸ್ಮರಣಾರ್ಥ ಶ್ರೀಮತಿ ಉಮಾ ಮತ್ತು ಕುಟುಂಬದವರು ಹಾಗೂ ದಾವಣಗೆರೆಯ ಡಾ. ಟಿ.ಜಿ. ನಿರಂಜನ್ ಹಾಗೂ ಕುಟುಂಬದವರು, ವೈಶ್ಯ ಸೇವಾಭೂಷಣ ಪಾಲ ರಾಜಗುಪ್ತರವರು ಲಿಂ. ಶ್ರೀಮತಿ ಪಿ.ಆರ್. ಶಾರದ ಮತ್ತು ಸಹೋದರರು ಮತ್ತು ಮಕ್ಕಳು, ಮೊಮ್ಮಕ್ಕಳು ಹಾಗೂ ಸಿ.ಜಿ. ಯಲ್ಲಪ್ಪ ಮತ್ತು ಮಕ್ಕಳು ವಹಿಸಿಕೊಳ್ಳಲಿದ್ದಾರೆ.

# ಸಕ್ಕರೆ ಕಾಯಿಲೆ ನಡುವಿನ ವ್ಯತ್ಯಾಸ ಪತ್ತೆ

**(1ನೇ ಪುಟದಿಂದ)** ಕಂಡು ಬರುವ ಸಕ್ಕರೆ ಕಾಯಿಲೆಗಳ ನಡುವಿನ ಹೋಲಿಕೆ ಹಾಗೂ ವ್ಯತ್ಯಾಸಗಳನ್ನು ಗುರುತಿಸಲಾಗಿದೆ. ಇದರಿಂದಾಗಿ ಭಾರತದಲ್ಲಿನ ಟೈಪ್ 2 ಸಕ್ಕರೆ ಕಾಯಿಲೆಯನ್ನು ಉತ್ತಮವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗಲಿದೆ ಎಂದು ಸ್ವೀಡನ್‌ನ ಲಂಡ್ ಯೂನಿವರ್ಸಿಟಿಯ ಸಹಾಯಕ ಅಧ್ಯಾಪಕರಾದ ರಶ್ಮಿ ಪ್ರಸಾದ್ ತಿಳಿಸಿದರು.

ಭಾರತದಲ್ಲಿ ಸಕ್ಕರೆ ಕಾಯಿಲೆಗೆ ಬಾಲ್ಯಾವಸ್ಥೆಯಲ್ಲಿನ ಅಪೌಷ್ಠಿಕತೆಯೇ ಪ್ರಮುಖ ಕಾರಣವಾಗಿದೆ. ಹೀಗಾಗಿ ಯುರೋಪ್ ಹಾಗೂ ಭಾರತದಲ್ಲಿನ ಸಕ್ಕರೆ ಕಾಯಿಲೆಯ ನಡುವೆ ವ್ಯತ್ಯಾಸ ಇದೆ ಎಂದು ಪ್ರಸಾದ್ ತಿಳಿಸಿದರು.

ಈ ಅಧ್ಯಯನದಿಂದ ಭಾರತದಲ್ಲಿ ಸಕ್ಕರೆ ಕಾಯಿಲೆ ತಡೆಯಲು ನೆರವು ಸಿಗಲಿದೆ. ಚೀನಾ ನಂತರ ಭಾರತದಲ್ಲಿ ಅತಿ ಹೆಚ್ಚಿನ ಸಕ್ಕರೆ ಕಾಯಿಲೆ ಎದುರಿಸುವವರಿದ್ದಾರೆ. ಅಪೌಷ್ಠಿಕತೆ ತಡೆದರೆ ಸಕ್ಕರೆ ಕಾಯಿಲೆಯನ್ನೂ ತಡೆಯಬಹುದು ಎಂದು ಈ ಅಧ್ಯಯನ ಹೇಳುತ್ತಿದೆ ಎಂದವರು ತಿಳಿಸಿದರು.

ಭಾರತದ ಸಕ್ಕರೆ ಕಾಯಿಲೆ ರೋಗಿಗಳನ್ನು ಪರೀಕ್ಷೆಗೆ ಒಳಪಡಿಸಿದಾಗ ಬಿ12 ವಿಟಮಿನ್ ಕೊರತೆ ಇರುವುದು ಕಂಡು ಬಂದಿದೆ. ಆದರೆ, ಸ್ವೀಡನ್ ಗುಂಪಿನವರಲ್ಲಿ ಈ ಸಮಸ್ಯೆ ಇರಲಿಲ್ಲ. ಹೀಗಾಗಿ ಬಿ12 ವಿಟಮಿನ್ ಕೊರತೆ ಭಾರತದಲ್ಲಿ ಸಕ್ಕರೆ ಕಾಯಿಲೆ ಹೆಚ್ಚಾಗಲು ಕಾರಣವಾಗಿರಬಹುದು ಎಂದು ಸಂಶೋಧಕರು ಹೇಳಿದ್ದಾರೆ.

# ಪುತಿನ್ ಹತ್ಯೆಗೆ ಸಂಚಿನ ಆರೋಪ

ಮಾಸ್ಕೋ, ಮೇ 3 – ಡ್ರೋನ್ ಮೂಲಕ ದಾಳಿ ನಡೆಸಿ ಅಧ್ಯಕ್ಷ ವ್ಲಾಡಿಮಿರ್ ಪುತಿನ್ ಹತ್ಯೆಗೆ ಉಕ್ರೇನ್ ನಡೆಸಿದ ಸಂಚು ವಿಫಲಗೊಳಿಸಿರುವುದಾಗಿ ರಷ್ಯಾ ತಿಳಿಸಿದೆ. ಆದರೆ, ರಷ್ಯಾ ಆರೋಪವನ್ನು ಉಕ್ರೇನ್ ತಳ್ಳಿ ಹಾಕಿದೆ.

ದಾಳಿ ನಡೆದಾಗ ಪುತಿನ್ ಕ್ರೆಮ್ಲಿನ್‌ನಲ್ಲಿ ಇರಲಿಲ್ಲ. ಅವರು ಮಾಸ್ಕೋದ ಹೊರ ವಲಯದಲ್ಲಿರುವ ನೋವೋ - ಒಗರ್ಯೊವೊದಲ್ಲಿರುವ ತಮ್ಮ ನಿವಾಸದಲ್ಲಿದ್ದರು ಎಂದು ಅವರ ವಕ್ತಾರ ಡಿಮಿಟ್ರಿ ಪೆಸ್ಕೊವ್ ತಿಳಿಸಿದ್ದಾರೆ.

ಮಂಗಳವಾರ ರಾತ್ರಿ ಈ ದಾಳಿ ನಡೆದಿದೆ ಎಂದು ತಿಳಿಸಲಾಗಿದೆ. ಆದರೆ, ದಾಳಿಗೆ ಯಾವುದೇ ಸಾಕ್ಷಿ ಒದಗಿಸಿಲ್ಲ. ದಾಳಿಯ ವಿವರ ಬಹಿರಂಗ ಪಡಿಸಿದ್ದು 12 ಗಂಟೆಗಳ ಕಾಲ ತಡವಾಗಿದ್ದು ಏಕೆ ಎಂಬ ಬಗ್ಗೆಯೂ ಸ್ಪಷ್ಟನೆ ನೀಡಲಾಗಿಲ್ಲ.

ಡ್ರೋನ್ ದಾಳಿಯಲ್ಲಿ ಉಕ್ರೇನ್ ಭಾಗಿಯಾಗಿಲ್ಲ. ಉಕ್ರೇನ್ ನಗರಗಳಲ್ಲಿನ ಜನರು ಹಾಗೂ ಮೂಲಭೂತ ಸೌಲಭ್ಯಗಳ ಮೇಲೆ ದಾಳಿ ನಡೆಸಲು ಇಂತಹ ವಾದ ಮುಂದಿಡಲಾಗುತ್ತಿದೆ ಎಂದು ಉಕ್ರೇನ್ ಅಧ್ಯಕ್ಷರ ಸಲಹೆಗಾರ ಮೈಖೈಲೊ ಪೊಡೊಲ್ಯಾಕ್ ಹೇಳಿದ್ದಾರೆ.

# ಕಾಂಗ್ರೆಸ್‌ನದ್ದು ಮರುಳು ಮಾಡುವ ಪ್ರಣಾಳಿಕೆ : ಸಿಎಂ



ಬೆಂಗಳೂರು, ಮೇ 3 - ಕಾಂಗ್ರೆಸ್ ಪ್ರಣಾಳಿಕೆ ಮೋಸದ ಪ್ರ ಣಾಳಿಕೆ. ಜನರನ್ನು ಮರಳು ಮಾಡುವ ಪ್ರಣಾಳಿಕೆ. ಜನರು ಇದನ್ನು ಧಿಕ್ಕರಿ ಸಲಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತ ನಾಡಿದ ಅವರು, ಕಾಂಗ್ರೆಸ್‌ನ ವರು ನಾವು ಈಗಾಗಲೇ ಮಾಡಿದ ಕೆಲಸಗಳನ್ನೇ ತಾವು ಮಾಡಿರುವು ದಾಗಿ ಪ್ರಣಾಳಿಕೆಯಲ್ಲಿ ಹೇಳಿ ದ್ದಾರೆ. ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಬರೀ ಸುಳ್ಳು ಹೇಳಿದ್ದಾರೆ. ಕಾಂಗ್ರೆಸ್ ಪ್ರಣಾಳಿಕೆ ಅನುಷ್ಠಾನ ಮಾಡಲು 6 ಲಕ್ಷ ಕೋಟಿ ಅನು ದಾನ ಬೇಕು ಎಂದರು. ಈಗಾ ಗಲೇ ಬಿಜೆಪಿ ಜಾರಿಗೆ ತಂದ ಯೋಜನೆಗಳನ್ನು, ಪುನಃ ಜಾರಿ ಮಾಡುವುದಾಗಿ ಹೇಳಿ ದ್ದಾರೆ.

ಈಗಾಗಲೇ ಜಲಜೀವನ ಮಿಷನ್ ಮೂಲಕ ಮನೆ ಮನೆಗೆ ನಲ್ಲಿ ನೀರು ಕೊಡುವ ಕೆಲಸ ಆರಂಭಿಸಲಾಗಿದೆ. ಹೆಣ್ಣು ಮಕ್ಕಳಿಗೆ ಉಚಿತ ಬಸ್ ಪಾಸ್ ನಾವು ಈಗಾಗಲೇ ಬಜೆಟ್ ನಲ್ಲಿ ಘೋಷಣೆ ಮಾಡಿದ್ದೇವೆ ಎಂದರು.

ಮೀಸಲಾತಿ ಪ್ರಮಾಣ ಶೇಕಡ 75 ಹೆಚ್ಚಳ ಮಾಡುವುದಾಗಿ ಹೇಳಿದ್ದಾರೆ. ಹೇಗೆ ಮಾಡುತ್ತಾರೆ. ಕೇಂದ್ರದಲ್ಲಿ ಇವರ ಸರ್ಕಾರ ಇದೆಯಾ ಹಿಂದುಳಿದ ಜನಾಂಗಗಳ ನಿಗಮಗಳನ್ನು ಸ್ಥಾಪಿಸುವುದಾಗಿ ಹೇಳಿದೆ. ನಾನು ಈಗಾಗಲೇ ಘೋಷಣೆ ಮಾಡಿ, ಆದೇಶ ಮಾಡಿದ್ದೇನೆ. ಕಾಂಗ್ರೆಸ್ ಅದನ್ನೇ ಪ್ರಣಾಳಿಕೆಯಲ್ಲಿ ಹೇಳಿದೆ ಎಂದು ಬೊಮ್ಮಾಯಿ ವ್ಯಂಗವಾಡಿದರು.

ಭಜರಂಗ ದಳ ನಿಷೇಧಿಸುವ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿ ಕ್ರಿಯೆ ನೀಡಿದ ಅವರು, ಭಜ ರಂಗದಳ ನಿಷೇಧಿಸಲು ಸಾಧ್ಯ ವಿಲ್ಲ. ನಿಷೇಧಿಸುವ ಅಧಿಕಾರ ರಾಜ್ಯ ಸರ್ಕಾರಕ್ಕಿಲ್ಲ. ಭಜರಂಗ ದಳ ಇಡೀ ದೇಶದಲ್ಲಿ ಇರುವ ಸಂಘಟನೆ. ಇವರಿಗೆ ದೇಶದಲ್ಲಿ ಅಧಿಕಾರವೇ ಇಲ್ಲ, ಅದನ್ನು ಹೇಗೆ ನಿಷೇಧಿಸಲು ಸಾಧ್ಯ. ಸಮಾಜದಲ್ಲಿ ಗಲಭೆ ಉಂಟು ಮಾಡುವ ಉದ್ದೇಶದಿಂದ ಭಜರಂಗ ದಳ ನಿಷೇಧಿಸುವ ಬಗ್ಗೆ ಮಾತನಾಡಿದ್ದಾರೆ ಎಂದರು.

# ಕಾಂಗ್ರೆಸ್ ಸಮರ್ಥನೆ

**(1ನೇ ಪುಟದಿಂದ)** ಉದ್ಯೋಗ, ನೆಮ್ಮದಿಯಿಂದ ಬದುಕುವ ವಾತಾವರಣ. ಇದನ್ನು ಒದಗಿಸ ಬೇಕಿರುವುದು ಜನರಿಂದ ಆಯ್ಕೆಯಾದ ಸರ್ಕಾರದ ಕರ್ತವ್ಯ. ಕೋಮುಗಲಭೆ ಸೃಷ್ಟಿಸುವವರ ಮೇಲೆ ಕಠಿಣ ಕ್ರಮ ತೆಗೆದುಕೊಂಡರೆ ಸಮಾಜ ಘಾತುಕರಿಗೆ ನೋವಾಗಬೇಕು. ಬಿಜೆಪಿಗೆ ಏಕೆ ನೋವಾಗುತ್ತಿದೆ? ಎಂದು ಪ್ರಶ್ನಿಸಿದರು. ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿರುವಂತೆ ಭಜರಂಗ ದಳ ನಿಷೇಧ ಮಾಡೇ ಮಾಡುತ್ತೇವೆ ಎಂದು ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ಭಜರಂಗ ದಳಕ್ಕೂ ಹನುಮಂತನಿಗೂ ಏನು ಸಂಬಂಧ. ಹನುಮಂತನೇ ಬೇರೆ, ಭಜರಂಗ ದಳವೇ ಬೇರೆ. ಭಜರಂಗ ದಳಕ್ಕೂ ಹನುಮಂತನಿಗೂ ಸಂಬಂಧವೇ ಇಲ್ಲ. ಭಜರಂಗ ದಳ ಸಂಘಟನೆ ಕಾನೂನಿನ ವ್ಯವಸ್ಥೆಗಳನ್ನು ದುರ್ಬಳಕೆ ಮಾಡುತ್ತಿದೆ ಎಂದವರು ಆರೋಪಿಸಿದರು.

# ಕೆಟಿಜೆ ನಗರದಲ್ಲಿ ನಾಗರಾಜ್ ಲೋಕಿಕೆರೆ ಮತ ಪ್ರಚಾರ



ದಾವಣಗೆರೆ, ಮೇ 3- ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಕೆಟಿಜೆ ನಗರದ ಪ್ರತಿ ಗಲ್ಲಿಗಳಲ್ಲೂ ಬಿರುಸಿನ ಮತ ಪ್ರಚಾರ ನಡೆಸಿದರು.

26, 27ನೇ ವಾರ್ಡಿನ ಕೆಟಿಜೆ ನಗರದ ಪ್ರತಿ ಕೇರಿ, ಗಲ್ಲಿಗಳಲ್ಲಿ ಸಂಚರಿಸಿ ಮತ ಯಾಚಿಸಿದರು.

ಹೀಗೆ ತೆರೆದ ವಾಹನದಲ್ಲಿ ಸಾಗುವಾಗ ವಾರ್ಡಿನ ನಾಗರಿಕರಾದ ಮತದಾರರು ರಸ್ತೆಯ ಬದಿಗಳು, ಮನೆ ಬಾಗಿಲು, ಮಹಡಿ ಮೇಲೆಲ್ಲಾ ನಿಂತು ನಾಗರಾಜ್ ಲೋಕಿಕೆರೆ ಅವರನ್ನು ನೋಡಿದರು. ಇದು ಹೊಸ ಅಭ್ಯರ್ಥಿಯತ್ತ ಜನ ಮನಸ್ಸು ಮಾಡಿರುವುದಕ್ಕೆ ಸಾಕ್ಷಿಯಾಗಿತ್ತು.

ಮತ ಪ್ರಚಾರದ ವೇಳೆ ಮತದಾರರು, ಅಭಿಮಾನಿಗಳು ನಾಗರಾಜ್ ಲೋಕಿಕೆರೆ ಅವರಿಗೆ ಬೃಹತ್ ಹೂ ಮಾಲೆ ಹಾಕಿ ಗೌರವಿಸಿ ಸ್ವಾಗತಿಸುವ ಮೂಲಕ ಬೆಂಬಲಿಸಿದ್ದು ಕಂಡು ಬಂತು. 32ನೇ ವಾರ್ಡಿನ ನಿಟ್ಟುವಳ್ಳಿ ಭಾಗದಲ್ಲೂ ನಾಗರಾಜ್ ಲೋಕಿಕೆರೆ ಅವರು ಮತ ಯಾಚಿ ಸುವಾಗ ಇದೇ ರೀತಿಯ ಅಭೂತ ಪೂರ್ವ ಅಭಿಮಾನ, ಸ್ವಾಗತ, ಬೆಂಬಲ ವ್ಯಕ್ತವಾಯಿತು.

ನಗರ ಪಾಲಿಕೆ ಉಪಮೇಯರ್ ಯಶೋಧಮ್ಮ ಯಗ್ಗಪ್ಪ, ಮುಖಂಡರುಗಳಾದ ಅಜ್ಜಂಪುರ ಶೆಟ್ರು ಮೃತ್ಯುಂಜಯ, ಯಗ್ಗಪ್ಪ, ಆನಂದ್, ರೆಡ್ಡಿ, ಕಿರಣ್ ಕುಮಾರ್, ಬಿಜೆಪಿ ರಾಜ್ಯ ಮುಖಂಡ ಟಿಪ್ಪು ಸುಲ್ತಾನ್, ಎಂ.ಎನ್. ಚಂದ್ರಶೇಖರ, ಆಲೂರ್ ನಿಂಗರಾಜ್ ಸೇರಿದಂತೆ ಇತರರು ಸಾಥ್ ನೀಡಿದ್ದರು.

**ಅಭ್ಯರ್ಥಿ ಪರ ಕಾರ್ಯಕರ್ತೆ ಮತಯಾಚನೆ :** ಇತ್ತ ನಾಗರಾಜ್ ಲೋಕಿಕೆರೆ ಅವರು ಮತ ಪ್ರಚಾರ ನಡೆಸುತ್ತಿದ್ದರೆ, ಅವರು ಸಾಗುವ ದಾರಿಯಲ್ಲಿ ಕಕ್ಕರಗೊಳ್ಳದ ರಾಜೇಶ್ವರಿ ಎಂಬ ಬಿಜೆಪಿ ಮಹಿಳಾ ಕಾರ್ಯಕರ್ತೆ ಮತದಾರರ ಮನೆ ಬಾಗಿಲಿಗೆ ಹೋಗಿ ಕೈ ಮುಗಿದು ನಾಗರಾಜ್ ಲೋಕಿಕೆರೆ ಅವರನ್ನು ಬೆಂಬಲಿಸುವಂತೆ ಮನವಿ ಮಾಡಿದರು.

# ಮೇ 9ರಂದು ಬಂಗಾಳ ಕೊಲ್ಲಿಯಲ್ಲಿ ಚಂಡಮಾರುತ

ಭುವನೇಶ್ವರ, ಮೇ 3 – ಬರುವ ಮೇ 9ರಂದು ಬಂಗಾಳ ಕೊಲ್ಲಿಯಲ್ಲಿ ಚಂಡಮಾರುತ ಉಂಟಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಆದರೆ, ಚಂಡಮಾರುತದ ಮಾರ್ಗ ಹಾಗೂ ಅದರ ತೀವ್ರತೆಯನ್ನು ಇನ್ನೂ ಅಂದಾಜಿಸಲು ಸಾಧ್ಯವಾಗಿಲ್ಲ. ಮೇ 9ರ ವೇಳೆಗೆ ಚಂಡಮಾರುತ ರೂಪುಗೊಳ್ಳುವ ಅಂದಾಜು ದೊರೆತಿದೆ. ಮೇ 7ರ ವೇಳೆಗೆ ಅದರ ತೀವ್ರತೆ ಹಾಗೂ ಮಾರ್ಗ ತಿಳಿಯಲಿದೆ ಎಂದು ಹವಾಮಾನ ಇಲಾಖೆಯ ಪ್ರಧಾನ ನಿರ್ದೇಶಕ ಮೃತ್ಯುಂಜಯ ಮೊಹಾಪಾತ್ರ ತಿಳಿಸಿದ್ದಾರೆ.

# ನೆರೆ ಬಂದಾಗ ಬಾರದ ಮೋದಿ

## ಚುನಾವಣಾ ವೇಳೆ ರೋಡ್ ಶೋ : ಕುಮಾರಸ್ವಾಮಿ

ಬೆಂಗಳೂರು, ಮೇ 3 - ರಾಜ್ಯದ ಜನರು ನೆರೆ, ಬರ ಇನ್ನಿತರೆ ಕಷ್ಟಗಳಲ್ಲಿದ್ದಾಗ ಬಾರದಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಚುನಾವಣೆ ಹೊತ್ತಿನಲ್ಲಿ ಬಂದು ರೋಡ್ ಶೋ ಮಾಡಿ ಕೈಬೀಸಿ ಹೋಗುತ್ತಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಕಿಡಿಕಾರಿದರು.

ಇಂದಿಲ್ಲಿ ಮಾಧ್ಯಮಗಳ ಜತೆ ಮಾತನಾಡಿದ ಅವರು, ಚುನಾವಣೆ ಬಂದಿದೆ. ಬಿಜೆಪಿಯ ದೆಹಲಿ ನಾಯಕರು ರಾಜ್ಯಕ್ಕೆ ಲಗ್ಗೆ ಇಡುತ್ತಿದ್ದಾರೆ. ಇವರು ರಾಜ್ಯದ ಜನ ಸಂಕಷ್ಟದಲ್ಲಿದ್ದಾಗ ಬರಬೇಕಾಗಿತ್ತು. ಈಗ ಬಂದು ಮೋದಿಯವರು ರೋಡ್ ಶೋ ಮೂಲಕ ಜನರತ್ತ ಕೈ ಬೀಸುತ್ತಿದ್ದಾರೆ. ರಾಜ್ಯಕ್ಕೆ ಇವರ ಕೊಡುಗೆ ಏನು? ಎಂದು ಖಾರವಾಗಿ ಪ್ರಶ್ನೆ ಮಾಡಿದರು.

ಕಾಂಗ್ರೆಸ್ ಪಕ್ಷವು ತನ್ನ ಪ್ರಣಾಳಿಕೆಯಲ್ಲಿ ಭಜರಂಗ ದಳವನ್ನು ನಿಷೇಧ ಮಾಡಲಾಗುವುದು ಎಂದು ಘೋಷಣೆ ಮಾಡಿದೆ. ಬ್ಯಾನ್ ಮಾಡಿದ್ರೆ ಸಮಸ್ಯೆಗೆ ಪರಿಹಾರ ಆಗುತ್ತಾ, ಎರಡೂ ಪಕ್ಷಗಳು ಈ ಬಗ್ಗೆ ಯೋಚನೆ ಮಾಡಬೇಕು ಎಂದು ಅವರು ಟಾಂಗ್ ಕೊಟ್ಟರು.

ಭಜರಂಗ ದಳದಲ್ಲಿ ಅಮಾಯಕರನ್ನು ಬಳಕೆ ಮಾಡಿಕೊಳ್ಳಲಾಗುತ್ತಿದೆ. ಅವರ ಮನಸ್ಸು ಕೆಡಿಸಿ ಹಾಳು ಮಾಡಲಾಗುತ್ತಿದೆ. ಅವರ ತಲೆಯಲ್ಲಿ ಏನೇನೋ ತುಂಬಿ ಅವರನ್ನು ಹಾಳು ಮಾಡ್ತಿದ್ದಾರೆ. ಅಮಾಯಕರಿಗೆ ಚಿತಾವಣೆ ಮಾಡೋರನ್ನು ಮೊದಲು ಮಟ್ಟ ಹಾಕಬೇಕು. ಅದು ಬಿಟ್ಟು ಬ್ಯಾನ್ ಮಾಡ್ತೀನಿ ಅಂದ್ರೆ ಉಪಯೋಗ ಏನು? ಕಾಂಗ್ರೆಸ್ ನವರು ಐದು ವರ್ಷ ಅಧಿಕಾರದಲ್ಲಿ ಇದ್ದಾಗ ಯಾಕೆ ಬ್ಯಾನ್ ಮಾಡಲಿಲ್ಲ ಎಂದು ಅವರು ಕಟುವಾಗಿ ಟೀಕಿಸಿದರು.


**FORM C-1**

***Declaration about Criminal Cases***

As per judgement dated 25th September, 2018, of Hon'ble Supreme Court in WP (Civil) No:536 of 2011 (Public interest Foundation & Ors. Vs. Union of India & Anr.)

**Name and Address of the candidate : Shanthanagowda.D.G. S/o Shankrappa Gowda**, Aged about 75 Years, Resident of No: Gollarahalli Village, Masadi Post, Honnali Tq. Davangere Dist.-577217.

**Name of the Political Party** : Indian National Congress Party [INC]

**Name of Eelction** : MLA, Karnataka Assebmly General Election.

**Name of Consituency** : 110-AC Honnali, Davangere Dist.

I, Shanthanagowda.D.G, Candidate for the above mentioned election, decalre for public information the following details about my criminal antecedents.

**(A) Pending Criminal cases :**

| Sl. No. | Name of Court | Case No and Dated | Status of Cases(s) | Section(s) of Acts Conecerned and brief description of offence(s) |
|---|---|---|---|---|
| 01 | Before Hon'ble Additional JMFC Court at Honnali | C.C.No 192/2022 | For Charge | Under Section 143, 147, 323, 307, 504, 506, 549 IPC |
| 02 | Before Hon'ble Thasildar Court in Honnali | C.C.No 33/2023 | For Charge | Under Section 107/CRPC |

**(B) Details About cases of conviction for Criminal offences**

| Sl. No. | Name of the Court & Date (s) of order (s) | Description of offience(s) & punishment imposed | Maximum Punishment Imposed |
|---|---|---|---|
| Nil | | | |

**Date : 27.04.2023**
**Place : Honnali**

**Shantanagowda.D.G**
INC, MLA CONTESTING CANDIDATE
FOR 110-AC HONNALI



**ಕರ್ನಾಟಕ ವಿಧಾನಸಭಾ ಚುನಾವಣೆ – 2023**
**ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ – 107,**
**ಪಕ್ಷೇತರ ಅಭ್ಯರ್ಥಿ**

ಆತ್ಮೀಯ ಬಂಧುಗಳೇ, ದಿನಾಂಕ 10.5.2023ನೇ ಬುಧವಾರದಂದು ನಡೆಯಲಿರುವ ದಾವಣಗೆರೆ ದಕ್ಷಿಣ ವಿಧಾನಸಭಾ ಚುನಾವಣೆಗೆ ಪಕ್ಷೇತರ ಅಭ್ಯರ್ಥಿಯಾಗಿ ನಾನು ಸ್ಪರ್ಧಿಸಿರುತ್ತೇನೆ. ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಲು ಕಂಕಣ ಬದ್ಧನಾಗಿರುತ್ತೇನೆ. ನನ್ನ ಗುರುತಾದ ಇಟ್ಟಿಗೆ ಗುರುತಿಗೆ ತಮ್ಮ ಅಮೂಲ್ಯವಾದ ನೀಡುವುದರ ಮೂಲಕ ನನ್ನನ್ನು ಪ್ರಚಂಡ ಬಹುಮತದಿಂದ ಜಯಶೀಲನನ್ನಾಗಿಸಿ ಕ್ಷೇತ್ರದ ಅಭಿವೃದ್ಧಿಗಾಗಿ ಅವಕಾಶ ಕಲ್ಪಿಸಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.



| ಕ್ರ.ಸಂ. | ಅಭ್ಯರ್ಥಿಯ ಹೆಸರು | ಚಿಹ್ನೆ | ಮತದಾನ |
|---|---|---|---|
| 11 | ಈರಣ್ಣ | | |

ದಿನಾಂಕ : 10.5.2023ನೇ ಬುಧವಾರ
ಸಮಯ : ಬೆಳಿಗ್ಗೆ 7 ರಿಂದ ಸಂಜೆ 6ರವರೆಗೆ
ತಮ್ಮ ಸೇವಾಂಕ್ಷಿ : ಈರಣ್ಣ S/o ಮಲ್ಲೇಶಪ್ಪ

ಇಟ್ಟಿಗೆ' ಗುರುತಿಗೆ ನಿಮ್ಮ ಮತ – ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಹಿತ



**ಮಾನ್ಯ ಗೌರವಾನ್ವಿತ 3ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ದಾವಣಗೆರೆ**

ಸಿ.ಆರ್.ಮಿಸ್.ನಂ. 157/2023

**ಅರ್ಜಿದಾರರು :** ಶ್ರೀಮತಿ ಗಂಗಮ್ಮ @ ಗಂಗಮಾಳಮ್ಮ ಬಿನ್ ದಿ.ಮಲ್ಲಪ್ಪ @. ಮಲ್ಲಪ್ಪ ಗೌಡ್ರು, @ ಕಬ್ಬೂರು ಮಲ್ಲಪ್ಪ ಕೋಂ ಹನುಮಂತಪ್ಪ, ವಯಸ್ಸು 51 ವರ್ಷ, ವ್ಯವಸಾಯಗಾರರು, ವಾಸ ಬಟ್ಟಲಕಟ್ಟೆ ಗ್ರಾಮ, ಹದಡಿ ಪೋಸ್ಟ್, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ. *ವಿರುದ್ಧ*

**ಎದುರುದಾರರು :** ತಹಶೀಲ್ದಾರರು, ದಾವಣಗೆರೆ ತಾಲ್ಲೂಕು & ಜಿಲ್ಲೆ

**ಸಾರ್ವಜನಿಕ ಪ್ರಕಟಣಾ ನೋಟೀಸು**

ಮೇಲ್ಕಂಡ ಕೇಸಿನಲ್ಲಿ ಅರ್ಜಿದಾರರಾದ **ಶ್ರೀಮತಿ ಗಂಗಮ್ಮ (@) ಗಂಗಮಾಳಮ್ಮ ಬಿನ್ ದಿ.ಮಲ್ಲಪ್ಪ @ ಮಲ್ಲಪ್ಪ ಗೌಡ್ರು @ ಕಬ್ಬೂರು ಮಲ್ಲಪ್ಪ ಕೋಂ ಹನುಮಂತಪ್ಪ ಇವರ ತಾಯಿಯಾದ ಶ್ರೀಮತಿ ದುರ್ಗಮ್ಮ ಕೋಂ ದಿ.ಮಲ್ಲಪ್ಪ @ ಮಲ್ಲಪ್ಪ ಗೌಡ್ರು, @ ಕಬ್ಬೂರು ಮಲ್ಲಪ್ಪ** ಇವರು ದಿನಾಂಕ: 09.01.2019 ರಂದು ದಾವಣಗೆರೆ ತಾಲ್ಲೂಕು ಬಟ್ಟಲಕಟ್ಟೆ ಗ್ರಾಮದ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಸದರಿಯವರಾದ ಶ್ರೀಮತಿ ದಿ. ದುರ್ಗಮ್ಮ ಕೋಂ ದಿ.ಮಲ್ಲಪ್ಪ @ ಮಲ್ಲಪ್ಪ ಗೌಡ್ರು@ ಕಬ್ಬೂರು ಮಲ್ಲಪ್ಪರವರ ಮರಣ ಪ್ರಮಾಣ ಪತ್ರವನ್ನು ಪಡೆಯಲು ಆದೇಶ ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಇದರ ಬಗ್ಗೆ ಯಾರಿಂದಲಾದರೂ ತಂಟೆ-ತಕರಾರು ಇದ್ದಲ್ಲಿ ದಿನಾಂಕ: 06.06.2023 ರಂದು ಬೆಳಿಗ್ಗೆ 11:00 ಗಂಟೆಗೆ ನ್ಯಾಯಾಲಯಕ್ಕೆ ಖುದ್ದಾಗಿಯಾಗಲೀ ಅಥವಾ ವಕೀಲರ ಮುಖಾಂತರವಾಗಿಯಾಗಲೀ ಹಾಜರಾಗಿ, ತಕರಾರು ಸಲ್ಲಿಸತಕ್ಕದ್ದು. ಇಲ್ಲದಿದ್ದ ಪಕ್ಷದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ, ಸದರಿ ಪ್ರಕರಣವನ್ನು ತೀರ್ಮಾನಿಸಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಹಾಗೂ ನನ್ನ ಸಹಿಯೊಂದಿಗೆ ದಿನಾಂಕ 03.05.2023ರಂದು ಕೊಡಲ್ಪಟ್ಟಿದೆ.

ನ್ಯಾಯಾಲಯದ ಅಪ್ಪಣೆ ಮೇರೆಗೆ
(ಕೆ.ಜಿ ಶಾಂತರಾಜ) ಅರ್ಜಿದಾರರ ಪರ ವಕೀಲರು
3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು 3ನೇ ಹೆಚ್ಚುವರಿ ಸಿವಿಲ್ & ಜೆ.ಎಂ.ಎಫ್.ಸಿ ನ್ಯಾಯಾಲಯ ದಾವಣಗೆರೆ

# ಪರಿಸರ ಸಂರಕ್ಷಿಸಲು ಸ್ವಯಂ ಪ್ರೇರಣೆಯಿಂದ ಮುಂದಾಗಬೇಕು



**ಕಸದಿಂದ ರಸ, ಮನೆಮದ್ದು, ಮನೆ ಅಡುಗೆ ಉಚಿತ ಕಾರ್ಯಾಗಾರದಲ್ಲಿ ಪರಿಸರವಾದಿ ಡಾ.ಶಾಂತಾ ಶ್ರೀಪಾದ್‌ಭಟ್**

ದಾವಣಗೆರೆ, ಮೇ 3- ಪ್ರತಿಯೊಬ್ಬರು ಸ್ವಯಂ ಪ್ರೇರಿತವಾಗಿ ತಮ್ಮ ಮನೆಯ ತ್ಯಾಜ್ಯವನ್ನು ಸರಿಯಾಗಿ ನಿರ್ವಹಣೆ ಮಾಡಿದರೆ ವಾತಾವರಣ ಕಲುಷಿತಗೊಳ್ಳುವುದನ್ನು ತಪ್ಪಿಸಬಹುದು ಎಂದು ಹಿರಿಯ ಪರಿಸರವಾದಿ ಹಾಗೂ ಸ್ತ್ರೀರೋಗ ತಜ್ಞರಾದ ಡಾ.ಶಾಂತಾ ಶ್ರೀಪಾದ್‌ಭಟ್ ಅಭಿಪ್ರಾಯ ಪಟ್ಟರು.

ಶನಿವಾರ ನಗರದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಕಸದಿಂದ ರಸ, ಮನೆಮದ್ದು, ಮನೆ ಅಡುಗೆ ಉಚಿತ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸರಿಯಾದ ಕ್ರಮದಲ್ಲಿ ಕಸ ನಿರ್ವಹಣೆ ಮಾಡದಿರುವುದು, ಕುಟುಂಬದಲ್ಲಿ ಅಗತ್ಯಕ್ಕಿಂತ ಹೆಚ್ಚಿನ ವಾಹನ ಬಳಕೆ ಮಾಡುವುದು ಹಾಗೂ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಜನಸಂದಣಿಯಿಂದಾಗಿ ವಾತಾವರಣ ಕಲುಷಿತಗೊಳ್ಳುವ ಮುಖಾಂತರ ನಗರ-ಪಟ್ಟಣಗಳಲ್ಲಿ ತಾಪಮಾನ ಏರಿಕೆಯಾಗುತ್ತಿದೆ. ಸ್ಥಳೀಯ ಮಟ್ಟದಲ್ಲಿ ಪರಿಸರ ಸಂರಕ್ಷಿಸಲು ಸ್ವಯಂ ಪ್ರೇರಣೆಯಿಂದ ಮುಂದಾಗಬೇಕು ಎಂದರು.

ಬಿಸಿಲಿನ ತಾಪಮಾನಕ್ಕೆ ಪ್ಲಾಸ್ಟಿಕ್ ಸುಟ್ಟು ಅದರಿಂದ ಹೊರಸೂಸುವ ಡಯಾಕ್ಸಿನ್ ಹೊಗೆ ಸೇವನೆಯಿಂದ ಶ್ವಾಸಕೋಶ ಸಂಬಂಧಿತ ಕಾಯಿಲೆಗಳು ಹರಡುತ್ತಿವೆ. ಜೊತೆಗೆ ಹೆಚ್ಚಿನ ಪ್ಲಾಸ್ಟಿಕ್ ಬಳಕೆಯಿಂದ ಜಲಮಾಲಿನ್ಯ ಉಂಟಾಗಿ, ನೀರೂ ಸಹ ವಿಷಮಯವಾಗಿ ಪರಿವರ್ತನೆಯಾಗಿ ಜಲಚರ ಪ್ರಾಣಿಗಳು ನಶಿಸುತ್ತಿವೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಲಾಕುಂಚ ಸಂಸ್ಥೆಯ ಅಧ್ಯಕ್ಷ ಕೆ.ಹೆಚ್.ಮಂಜುನಾಥ್ ವಹಿಸಿದ್ದರು. ಸಂಸ್ಥೆಯ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶಣೈ ಮನೆಮದ್ದು ಮತ್ತು ಮನೆ ಅಡುಗೆ ಕುರಿತು ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಶಾರದಮ್ಮ ಶಿವನಪ್ಪ, ಲಲಿತಾ ಕಲ್ಲೇಶ್, ಪ್ರಭಾ ರವೀಂದ್ರ, ವಿ.ಕೃಷ್ಣಮೂರ್ತಿ, ಸಂಧ್ಯಾ ಶ್ರೀನಿವಾಸ್, ಜಯಶ್ರೀ ರಾಜು, ಸಾವಿತ್ರಿ ಜಗದೀಶ್, ಸುಮಾ ಏಕಾಂತಪ್ಪ ಮತ್ತಿತರರಿದ್ದರು.

# ಬಿಜೆಪಿ ಜಿಲ್ಲಾ ಅಲ್ಪಸಂಖ್ಯಾತರ ಮೋರ್ಚಾ ಅಧ್ಯಕ್ಷ ಮಜೀದ್ ಕಾಂಗ್ರೆಸ್ ಸೇರ್ಪಡೆ

ದಾವಣಗೆರೆ, ಮೇ 4- ತಾವು ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಯಾಗಿರುವುದಾಗಿ ಬಿಜೆಪಿ ಜಿಲ್ಲಾ ಅಲ್ಪಸಂಖ್ಯಾತರ ಮೋರ್ಚಾ ಅಧ್ಯಕ್ಷ ಎಸ್. ಅಬ್ದುಲ್ ಮಜೀದ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಅಲ್ಪಸಂಖ್ಯಾತರಿಗೆ ರಾಜ್ಯ ಸರ್ಕಾರ ನೀಡುತ್ತಿದ್ದ ಶೇ.4 ರ ಮೀಸಲಾತಿ ರದ್ದುಪಡಿಸಿದ್ದರಿಂದ ಮನನೊಂದು ರಾಜೀನಾಮೆ ನೀಡುತ್ತಿರುವುದಾಗಿ ಹೇಳಿದರು.

ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರ ಅಧಿಕಾರವಧಿಯಲ್ಲಿ ಎಲ್ಲಾ ಸಮುದಾಯಗಳನ್ನು ಸಮನಾಗಿ ಕಾಣುತ್ತಿದ್ದರು. ಆದರೆ ಬಸವರಾಜ ಬೊಮ್ಮಾಯಿ ಅಧಿಕಾರ ವಹಿಸಿಕೊಂಡ ನಂತರ ಅಲ್ಪಸಂಖ್ಯಾತರನ್ನೇ ಗುರಿಯನ್ನಾಗಿಸಿಕೊಂಡು ಇಲ್ಲಸಲ್ಲದ ಟೀಕೆ ಮಾಡಲಾಗುತ್ತಿದೆ. ಇದನ್ನು ವಿರೋಧಿಸಿ, ಉತ್ತರ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಸಮ್ಮುಖದಲ್ಲಿ ಕಾಂಗ್ರೆಸ್ ಸೇರ್ಪಡೆಯಾಗಿರುವುದಾಗಿ ಅವರು ಹೇಳಿದರು..

ಪತ್ರಿಕಾಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡರಾದ ಕೆ.ಜಿ. ಶಿವಕುಮಾರ್, ಆರೀಫ್ ಖಾನ್, ಎಸ್.ಕೆ. ಜಬೀವುಲ್ಲಾ, ಅಬ್ದುಲ್ ಜಬ್ಬಾರ್, ರಿಯಾಜ್ ಅಹಮದ್, ತೌಫಿಕ್, ಮುಬಾರಕ್, ಪರ್ವೇಜ್ ಮತ್ತಿತರರಿದ್ದರು.

# ಪಿಯುಸಿ : ಎ.ವಿ.ಕೆ. ಕಾಲೇಜಿಗೆ ಉತ್ತಮ ಫಲಿತಾಂಶ




ದಾವಣಗೆರೆ, ಮೇ 3- ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ನಗರದ ಎ.ವಿ. ಕಮಲಮ್ಮ ಮಹಿಳಾ ಪದವಿ ಪೂರ್ವ ಕಾಲೇಜಿಗೆ ಉತ್ತಮ ಫಲಿತಾಂಶ ಲಭಿಸಿದೆ.

ವಾಣಿಜ್ಯ ವಿಭಾಗದಲ್ಲಿ ಎನ್. ವಿರಾಜ (ಶೇ. 96.16), ವಿ. ಕಾವ್ಯ (ಶೇ. 94.33), ಇ.ಎಲ್. ತನುಶ್ರೀ (ಶೇ. 93.83), ಕಲಾ ವಿಭಾಗದಲ್ಲಿ ಶಮ್ಯ ಜೆ. ಬೆಣ್ಣೆಹಳ್ಳಿ (ಶೇ. 94.33), ವಿ. ಅಮೃತ, ಟಿ. ಸೋನಾ (ಶೇ. 94) ಹಾಗೂ ವಿಜ್ಞಾನ ವಿಭಾಗದಲ್ಲಿ ಸಂಜನಾ ಎನ್. ಜೋಗಿ (ಶೇ. 93), ಎ. ಶ್ರದ್ಧಾ (ಶೇ. 91.33) ಶೇಕಡಾವಾರು ಅಂಕ ಗಳಿಸಿದ್ದಾರೆ.

25 ವಿದ್ಯಾರ್ಥಿನಿಯರು ಅತ್ಯುನ್ನತ ಶ್ರೇಣಿ, 111 ವಿದ್ಯಾರ್ಥಿನಿಯರು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ ಎಂದು ಕಾಲೇಜಿನ ಪ್ರಾಚಾರ್ಯ ರವಿ ಬಣಕಾರ್ ತಿಳಿಸಿದ್ದಾರೆ.

# ಭ್ರಷ್ಟಾಚಾರ ಬಂದ್ ಮಾಡಿದ್ದರಿಂದ ಕಾಂಗ್ರೆಸ್ ಕಿಡಿ



ಬೆಂಗಳೂರು, ಮೇ 3 - ಭ್ರಷ್ಟಾಚಾರದ ರಸ್ತೆಯನ್ನು ಬಂದ್ ಮಾಡಿದ್ದರಿಂದ ಕಾಂಗ್ರೆಸ್ ಪಕ್ಷವು ಬಿಜೆಪಿ ಮತ್ತು ನನ್ನ ವಿರುದ್ಧ ಕಿಡಿಕಾರುತ್ತಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಟೀಕಿಸಿದ್ದಾರೆ.

ಕರ್ನಾಟಕದಲ್ಲಿ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಲೇಬೇಕೆಂದು ಹಠ ತೊಟ್ಟಿರುವ ಪ್ರಧಾನಿ ನರೇಂದ್ರ ಮೋದಿ ಮೂರನೇ ದಿನವಾದ ಬುಧವಾರ ರಾಜ್ಯದ ವಿವಿಧೆಡೆ ರೋಡ್ ಶೋ ಮತ್ತು ಬೃಹತ್ ಸಮ್ಮೇಳನವನ್ನುದ್ದೇಶಿಸಿ ಮಾತನಾಡಿ, ಕಾಂಗ್ರೆಸ್ ಹಾಗೂ ಆ ಪಕ್ಷದ ಮುಖಂಡರನ್ನು ತರಾಟೆಗೆ ತೆಗೆದುಕೊಂಡರು.

ರಾಜ್ಯವನ್ನು ಉತ್ಪಾದನಾ ಕ್ಷೇತ್ರದ ಸೂಪರ್ ಪವರ್ ಮಾಡಲು ಬಿಜೆಪಿಗೆ ಅಧಿಕಾರ ಕೊಡಿ, ಕರ್ನಾಟಕವನ್ನು ನಂಬರ್ ಒನ್ ಮಾಡುವ ಭರವಸೆ ನನ್ನದು ಎಂದಿದ್ದಾರೆ.

ದೇಶ ಮತ್ತು ಜಗತ್ತಿನಲ್ಲಿ ಕರ್ನಾಟಕದ ಹೆಸರನ್ನು ಪ್ರಸಿದ್ಧಿಗೊಳಿಸಲು ಬಿಜೆಪಿಯ ಸ್ಥಿರ ದೃಢವಾದ ಸರ್ಕಾರ ಬೇಕು. ರಿವರ್ಸ್ ಗೇರ್‌ನತ್ತ ರಾಜ್ಯವನ್ನು ದೂಡುವವರನ್ನು ದೂರವಿಡಲು ಜನತೆ ನಿರ್ಧರಿಸಿದ್ದಾರೆ. ಈ ಬಾರಿಯ ನಿರ್ಧಾರ ಬಿಜೆಪಿ ಸ್ಥಿರ ಸರ್ಕಾರ ಎಂದು ಜನತೆ ನಿರ್ಣಯ ಮಾಡಿದ್ದಾರೆ ಎಂದರು.

ಡಬಲ್ ಎಂಜಿನ್ ಸರ್ಕಾರವು ಆರಂಭದಲ್ಲಿ ಕರ್ನಾಟಕದಲ್ಲಿ ಅನೇಕ ಸವಾಲುಗಳನ್ನು ಎದುರಿಸಿತು. ಜೆಡಿಎಸ್-ಕಾಂಗ್ರೆಸ್ ವೈಫಲ್ಯವನ್ನು ಸರಿಪಡಿಸಲು ಸಮಯ ಬೇಕಾಯಿತು. ಕರ್ನಾಟಕದಲ್ಲಿ ರಸ್ತೆ, ರೈಲು ಸೇರಿ ಮೂಲಸೌಕರ್ಯದ ಕೆಲಸಗಳು ಇಂದು ಗರಿಷ್ಠ ವೇಗ ಪಡೆದಿವೆ ಎಂದರು.

ಕರ್ನಾಟಕವನ್ನು ಮುನ್ನಡೆಸುವವರು ನಿಮಗೆ ಬೇಕಲ್ಲವೇ? ಎಂದು ಪ್ರಶ್ನಿಸಿದರಲ್ಲದೆ, ಬಿಜೆಪಿ ಸರ್ಕಾರದ ಮೊದಲ ಆದ್ಯತೆ ಕರ್ನಾಟಕದ ವಿಕಾಸವೇ ಆಗಿದೆ. ಭಯಂಕರ ಮಹಾಮಾರಿ ಕೋವಿಡ್ ಬಂದಿದ್ದು, ಅದರಿಂದ ಜನರನ್ನು ರಕ್ಷಿಸಿದ್ದು ಬಿಜೆಪಿ. ಬಿಜೆಪಿ ಇಲ್ಲದಿದ್ದರೆ ಏನಾಗುತ್ತಿತ್ತು. ಕೇರಳ, ಮಹಾರಾಷ್ಟ್ರವನ್ನು ನೀವು ನೋಡಿದ್ದೀರಲ್ಲವೇ? ಎಂದು ಪ್ರಶ್ನಿಸಿದರು.

ಕೋವಿಡ್ ಲಸಿಕೆಯನ್ನು ಉಚಿತವಾಗಿ ನೀಡಿದ್ದೇವೆ. 100 ವರ್ಷಗಳಲ್ಲಿ ಒಮ್ಮೆ ಬರುವ ಸಾಂಕ್ರಾಮಿಕ ಕಾಡಿದರೂ ಅಭಿವೃದ್ಧಿಯಲ್ಲಿ ಕರ್ನಾಟಕ ಹಿಂದುಳಿಯಲಿಲ್ಲ ಎಂದು ವಿವರಿಸಿದರು. ನಾವು ಇಂದಿಗೂ ಬಡವರ ಕುಟುಂಬಕ್ಕೆ ಉಚಿತ ಪಡಿತರ ನೀಡುತ್ತಿದ್ದೇವೆ. ಇದರಿಂದಾಗಿ ಕರ್ನಾಟಕದ ಪ್ರತಿಯೊಬ್ಬರೂ ಈ ಬಾರಿಯ ನಿರ್ಧಾರ ಬಹುಮತದ ಬಿಜೆಪಿ ಸರ್ಕಾರ ಎನ್ನುತ್ತಿದ್ದಾರೆ ಎಂದು ತಿಳಿಸಿದರು.

ಕಾಂಗ್ರೆಸ್ ಪಕ್ಷವು ನಮ್ಮ ನಾಯಕ ನಿವೃತ್ತರಾಗುತ್ತಿದ್ದಾರೆ. ಆದ್ದರಿಂದ ನಮಗೆ ಮತ ಕೊಡಿ ಎನ್ನುತ್ತಿದೆ. ನಾವು ಅಭಿವೃದ್ಧಿಗಾಗಿ ಮತ ಕೊಡಿ ಎನ್ನುತ್ತಿದ್ದೇವೆ. ಇದೇ ನಮ್ಮ ನಡುವಿನ ಅಂತರ ಎಂದು ವಿವರಿಸಿದರು.

ಕಾಂಗ್ರೆಸ್ ಪಕ್ಷವು ಕುಟುಂಬವಾದದ ಪಕ್ಷ. ಕರ್ನಾಟಕವನ್ನು ಅದು ಪಕ್ಷದ ಎಟಿಎಂ ಮಾಡಲು ಬಯಸುತ್ತಿದೆ.

ಶೇ. 85 ರಷ್ಟು ಕಮೀಷನ್ ಪಡೆಯುವ ಕಾಂಗ್ರೆಸ್ ಪಕ್ಷವು ಕರ್ನಾಟಕವನ್ನು ದಶಕದಷ್ಟು ಹಿಂದಕ್ಕೆ ಎಳೆಯಲಿದೆ. ಜೆಡಿಎಸ್ ಕೂಡ ಅದೇ ರೀತಿಯಲ್ಲಿದೆ ಎಂದು ಆರೋಪಿಸಿದರು.

# ಉತ್ತರ ಕ್ಷೇತ್ರದ ಅಭಿವೃದ್ಧಿ, ಜನ ಸೇವೆಗೆ ಅವಕಾಶ ನೀಡಿ



**33ನೇ ವಾರ್ಡಿನಲ್ಲಿ ನಾಗರಾಜ್ ಲೋಕಿಕೆರೆ ಬಿರುಸಿನ ಮತ ಪ್ರಚಾರ**

ದಾವಣಗೆರೆ, ಮೇ 3- ನಗರದ 33ನೇ ವಾರ್ಡಿನಲ್ಲಿ ಬುಧವಾರ ಸಂಜೆ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಬಿರುಸಿನ ಮತ ಪ್ರಚಾರ ನಡೆಸಿದರು.

ನಿಟುವಳ್ಳಿಯ ಎಕೆಟಿ ವೃತ್ತದಿಂದ ಪ್ರಾರಂಭವಾಯಿತು. ಸರಸ್ವತಿ ಬಡಾವಣೆ, 34ನೇ ವಾರ್ಡ್‌ನ ಶಿವಕುಮಾರ ಸ್ವಾಮಿ ಬಡಾವಣೆಯಲ್ಲಿ ಮತಯಾಚಿಸಿ, ತಮಗೆ ಉತ್ತರ ಕ್ಷೇತ್ರದ ಅಭಿವೃದ್ಧಿ, ಜನರ ಸೇವೆಗೆ ಅವಕಾಶ ನೀಡುವಂತೆ ಮತದಾರರಲ್ಲಿ ಮನವಿ ಮಾಡಿದರು.

ಈ ಮತ ಪ್ರಚಾರದಲ್ಲಿ ಕಮಲದ ಚಿಹ್ನೆಯುಳ್ಳ ಬಿಜೆಪಿ ಬಾವುಟ ಹಿಡಿದು ಹೆಗಲ ಮೇಲೆ ಬಿಜೆಪಿಯ ಶಾಲು ಹಾಕಿಕೊಂಡು ಬಿಜೆಪಿ ಬೆಂಬಲಿಸಿ, ನಾಗರಾಜ್ ಲೋಕಿಕೆರೆ ಅವರಿಗೆ ಮತ ನೀಡಿ ಜಯಶೀಲರಾಗಿಸುವಂತೆ ಪಕ್ಷದ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು, ಬೆಂಬಲಿಗರು ನಾಗರಾಜ್ ಪರ ಮತ ಯಾಚಿಸಿದರು. ಮಹಿಳಾ ಕಾರ್ಯಕರ್ತೆಯರೇ ಹೆಚ್ಚಾಗಿ ಭಾಗವಹಿಸಿದ್ದರು.

ಮುಖಂಡರುಗಳಾದ ಹೇಮಂತ ಕುಮಾರ್, ಶಿವರಾಜ್ ಪಾಟೀಲ್, ಹೆಚ್.ಎನ್. ಶಿವಕುಮಾರ್, ಜಿಲ್ಲಾ ಬಿಜೆಪಿ ದಕ್ಷಿಣ ಮಂಡಲ ಅಧ್ಯಕ್ಷ ಸಂಗನಗೌಡ್ರು, ಕೆ.ಎನ್. ಓಂಕಾರಪ್ಪ, ದೂಡಾ ಮಾಜಿ ಅಧ್ಯಕ್ಷ ಕೆ.ಎಂ. ಸುರೇಶ್, ನಗರ ಪಾಲಿಕೆ ಸದಸ್ಯ ಪೈಲ್ವಾನ್ ವೀರೇಶ್ ಸೇರಿದಂತೆ ಇತರರು ಸಾಥ್ ನೀಡಿದ್ದರು.

# ಮಕ್ಕಳ ಪೌಷ್ಟಿಕ ಆಹಾರ ಪ್ಯಾಕೆಟ್‌ನಲ್ಲಿ ಮತದಾನ ಜಾಗೃತಿ



ದಾವಣಗೆರೆ, ಮೇ 3- ವಿಧಾನಸಭಾ ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಭಾನುವಾರ ಮೇ 10 ರಂದು ತಪ್ಪದೇ ಮತದಾನ ಮಾಡಿರಿ, 'ಮತದಾನ ನಮ್ಮೆಲ್ಲರ ಹಕ್ಕು' ಎಂಬ ಸಂದೇಶವನ್ನು ಮುದ್ರಿಸಿದ ಪೌಷ್ಠಿಕಾಂಶವುಳ್ಳ ಆಹಾರ ಪ್ಯಾಕೆಟ್‌ಗಳನ್ನು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಅವರಿಂದ ಬಿಡುಗಡೆಗೊಳಿಸಲಾಯಿತು.

6 ತಿಂಗಳಿಂದ 3 ವರ್ಷದ ಒಳಗಿನ ಮಕ್ಕಳಿಗೆ ವಿವಿಧ ಆಹಾರ ಧಾನ್ಯಗಳನ್ನು ಬಳಸಿ ತಯಾರಿಸಿದ ಪುಷ್ಠಿ ಎಂಬ ಪೌಷ್ಠಿಕ ಆಹಾರದ ಪ್ಯಾಕೇಟ್‌ಗಳ ಮೇಲೆ ಮತದಾರರಿಗೆ ಮತದಾನದ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಫಲಾನುಭವಿಗಳ ಮನೆಗೆ ವಿತರಿಸಲಾಗುತ್ತಿದೆ.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ರಾಮಗೊಂಡ ಬಸರಗಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪ ನಿರ್ದೇಶಕರಾದ ಶ್ರೀಮತಿ ವಾಸಂತಿ ಉಪ್ಪಾರ್ ಹಾಗೂ ನಿರೂಪಣಾಧಿಕಾರಿ ರಾಜ್‌ಕುಮಾರ್ ರಾಥೋಡ್ ಉಪಸ್ಥಿತರಿದ್ದರು.

## 24ರಂದು ನಗರದಲ್ಲಿ ಧರ್ಮೋಪನಯನ

ದಾವಣಗೆರೆ, ಮೇ 3 - ಶ್ರೀ ಶಂಕರ ಸೇವಾ ಸಂಘದಿಂದ ತ್ರಿಮತಸ್ಥ ಬ್ರಾಹ್ಮಣ ವಟುಗಳಿಗೆ ಇದೇ ದಿನಾಂಕ 24 ರಂದು ಧರ್ಮೋಪನಯನವನ್ನು ಏರ್ಪಡಿಸಲಾಗಿದೆ. ಆಸಕ್ತಿಯುಳ್ಳ ವಿಪ್ರ ಪೋಷಕರು ಮೇ 15 ರೊಳಗೆ ಮೊ: 82964 08068 । 94807 10858ಕ್ಕೆ ಸಂಪರ್ಕಿಸಬಹುದು.

## ನಗರದಲ್ಲಿ ಇಂದು ಮಜ್ಜಿಗೆ ವಿತರಣೆ

ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಸಾರ್ವಜನಿಕರಿಗೆ ಉಚಿತ ಮಜ್ಜಿಗೆ ವಿತರಿಸುವ ಕಾರ್ಯಕ್ರಮವು ಶ್ರೀ ಜಯದೇವ ವೃತ್ತದಲ್ಲಿ ನಡೆಯಲಿದೆ. ದಿ. ಶ್ರೀಮತಿ ಮೀನಾಕ್ಷಿ ಹಿರೇಮಠ್ ಇವರ ಸ್ಮರಣಾರ್ಥ ರಾಜನಹಳ್ಳಿ ದಯಾನಂದ ಮತ್ತು ಶ್ರೀಮತಿ ಲೀಲಾವತಿ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ ಇಂದಿನ ಮಜ್ಜಿಗೆ ದಾನಿಗಳಾಗಿದ್ದಾರೆ.

# ಆವರಗೆರೆ ಗೋಶಾಲೆಯಲ್ಲಿ ಬಸವೇಶ್ವರ ಜಯಂತಿ



ದಾವಣಗೆರೆ, ಮೇ 3- ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಜಿಲ್ಲಾ ಮತ್ತು ನಗರ ಮಹಿಳಾ ಘಟಕಗಳ ಸಂಯುಕ್ತ ಆಶ್ರಯದಲ್ಲಿ ಬಸವ ಜಯಂತಿಯನ್ನು ಆವರಗೆರೆಯ ಮಹಾವೀರ ಗೋಶಾಲೆಯಲ್ಲಿ ಆಚರಿಸಲಾಯಿತು.

ಸಮಾಜದ ಎಲ್ಲ ಘಟಕಗಳ ಸದಸ್ಯರು ಸೇರಿ ಗೋ ಪೂಜೆ ಮತ್ತು ಬಸವಣ್ಣನವರ ಪೂಜೆ ಮಾಡಿ, ಗೋ ಶಾಲೆಯ ಗೋವುಗಳಿಗೆ ಹಣ್ಣು, ಅಕ್ಕಿ, ಬೆಲ್ಲ ಮತ್ತು ಆಹಾರಗಳನ್ನು ನೀಡುವುದರ ಮೂಲಕ ಗೋವುಗಳ ಸಂರಕ್ಷಣೆಯಲ್ಲಿ ತಮ್ಮ ಕರ್ತೃತ್ವದ ಭಾವನೆಗಳನ್ನು ವ್ಯಕ್ತಪಡಿಸಿದರು.

ಸಮಾಜದ ಜಿಲ್ಲಾಧ್ಯಕ್ಷ ಬಿ.ಸಿ. ಉಮಾಪತಿ, ಉಪಾಧ್ಯಕ್ಷ ದೊಡ್ಡಪ್ಪ, ವಾಣಿ ಶಿವಣ್ಣ, ಪ್ರಧಾನ ಕಾರ್ಯದರ್ಶಿ ಎಸ್.ಸಿ. ಕಾಶಿನಾಥ್, ತಾಲ್ಲೂಕು ಅಧ್ಯಕ್ಷ ಮಲ್ಲಿನಾಥ, ಮಹಿಳಾ ಘಟಕದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಮೀನಾ ಪ್ರಸಾದ್ ಹಾಗೂ ನಗರ ಘಟಕದ ಅಧ್ಯಕ್ಷರಾದ ಶ್ರೀಮತಿ ವೀಣಾ ಬೆಳ್ಳೂಡಿ, ಕಾರ್ಯದರ್ಶಿ ಶ್ರೀಮತಿ ಪಾರ್ವತಿ ಮತ್ತಿಹಳ್ಳಿ, ಸಂಘಟನಾ ಕಾರ್ಯದರ್ಶಿ ಶೋಭಾ ಅಂಗಡಿ ದಂಪತಿ, ಶ್ರೀಮತಿ ಸುನಂದ ಮುಳಗಿ, ಶ್ರೀಮತಿ ಅಕ್ಕಮ್ಮ, ಶ್ರೀಮತಿ ದೇವೀರಮ್ಮ, ಶ್ರೀಮತಿ ಶಕುಂತಲ, ಶ್ರೀಮತಿ ಗೀತಾ ಭದ್ರಶೆಟ್ಟಿ ಇವರಲ್ಲದೇ, ಯುವ ಮುಖಂಡರಾದ ಬಾದಾಮಿ ಜಯಣ್ಣ, ಮಂಜುನಾಥ ಪುರವಂತರ, ಜಯಣ್ಣ ಬಿಸಲೇರಿ, ಕೆ.ಕೆ. ನಾಗರಾಜ್, ನಂದೀಶ್ ಬಳ್ಳಾರಿ, ಚಂದ್ರಶೇಖರ್ ನೂಲ, ಮಹಡಿ ತಿಪ್ಪೇಸ್ವಾಮಿ, ವೀರಣ್ಣ ಮತ್ತಿತರರು ಭಾಗವಹಿಸಿದ್ದರು.

ಸಮಾರಂಭದಲ್ಲಿ ಗೋಶಾಲೆಯ ಅಧ್ಯಕ್ಷ ಸುರೇಶ್ ದೇವಿ ಚಂದ್ ಮತ್ತು ಉಪಾಧ್ಯಕ್ಷ ವಿಜಯ ಶಂಕರ್ ಲಾಲ್ ಜಿ ಅವರುಗಳನ್ನು ಸನ್ಮಾನಿಸಲಾಯಿತು. ಸಮಾಜದ ಯುವ ಘಟಕದ ಬದಾಮಿ ಜಯಣ್ಣ, ಗೋ ಶಾಲೆಗೆ 5001 ರೂ.ಗಳ ದೇಣಿಗೆ ನೀಡಿದರು.


**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
28ನೇ ವರ್ಷದ
ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ
ಏಪ್ರಿಲ್ 1 ರಿಂದ ಮೇ 15ರವರೆಗೆ.
ಸ್ಥಳ : ಮಹಾನಗರ ಪಾಲಿಕೆ ಆವರಣ
ಇಂದಿನ ಮಜ್ಜಿಗೆ ಪ್ರಾಯೋಜಕರು :
ದಿ.ಶ್ರೀಮತಿ ಐಗೂರು ಚನ್ನಬಸಮ್ಮ ಮತ್ತು ದಿ.ಶ್ರೀ ಐಗೂರು ದೊಡ್ಡಬಸಪ್ಪ ಇವರ ಜ್ಞಾಪಕಾರ್ಥವಾಗಿ ಮಕ್ಕಳು : ಐಗೂರು ಚಂದ್ರಶೇಖರ್, ಐಗೂರು ಪ್ರಭಣ್ಣ ಕುಟುಂಬ ವರ್ಗದವರ ಸೇವಾರ್ಥ

**ತಕ್ಷಣ ಬೇಕಾಗಿದ್ದಾರೆ**
ಡಿಟಿಡಿಸಿ ಕೋರಿಯರ್ ಆಫೀಸ್‌ನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಜ್ಞಾನವಿರುವ ಹುಡುಗಿಯರು (Ladies) ಬೇಕಾಗಿದ್ದಾರೆ.
ಸಂಜೆ 5 ರಿಂದ ರಾತ್ರಿ 10.30ರವರೆಗೆ Part time ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಮೊ.97385-23711

**ಸಣ್ಣ ಸಣ್ಣ ಸೈಟುಗಳು ಮಾರಾಟಕ್ಕಿವೆ**
15x45 South, ವಿವೇಕಾನಂದ ಬಡಾವಣೆಯಲ್ಲಿ, 20x40 West, LIC ಕಾಲೋನಿಯಲ್ಲಿ, 20x30 ಕಾರ್ನರ್ ವಾಜಪೇಯಿ ಲೇಔಟ್‌ನಲ್ಲಿ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**WANTED**
Sr/Jr Accounts Executive M.com / B.com 2 + Years exper, Residential Engineer Sewage Treatment Plant Operator, Hostel Supervisor, Plumber Carpenter, Attenders and Car/Bus Drivers ( Min 5+ Years experience)
90199 64655

**ವಾಣಿಜ್ಯ ಕಟ್ಟಡ ಬಾಡಿಗೆಗೆ**
ಹದಡಿ ಮುಖ್ಯ ರಸ್ತೆಯಲ್ಲಿರುವ ಟಿವಿಎಸ್ ಷೋರೂಂ ಪಕ್ಕ ಹಾಗೂ ಉದಯ ಬಜಾರ್ ಎದುರುಗಡೆ ಇರುವ ಸುಸಜ್ಜಿತ ವಾಣಿಜ್ಯ ಕಟ್ಟಡ ಬಾಡಿಗೆಗಿದೆ. ನೆಲ ಮಹಡಿ 1200 ಅಡಿಗಳು, ಮೊದಲನೇ ಮಹಡಿ 1600 ಅಡಿಗಳು. ಸೆಲ್ಲರ್ 2400 ಅಡಿಗಳು ಸಂಪರ್ಕಿಸಿ.
96205 95579

**ವೀರಶೈವ ಖಾನಾವಳಿ**
ಕ್ಲೀನಿಂಗ್ ಅಂಡ್ ಸಪ್ಲೈಯರ್ ಕೆಲಸಕ್ಕೆ ಬೇಕಾಗಿದ್ದಾರೆ
ಸಂಬಳ : 10,000, ಸಂಪರ್ಕಿಸಿ
99017 70830
99458 29046

**ಸೈಟು ಮಾರಾಟಕ್ಕಿದೆ**
ಎಂ.ಸಿ.ಸಿ. 'ಎ' ಬ್ಲಾಕ್, 5ನೇ ಅಡ್ಡ ರಸ್ತೆ ರಾಜು ಮೆಡಿಕಲ್ಸ್ ಶಾಪ್ ರೋಡ್‌ನಲ್ಲಿ ಪಶ್ಚಿಮ ದಿಕ್ಕಿನ 20x60 ಅಳತೆಯ ಸೈಟು ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ :
74116-87803, 99455-71898

**ಸೈಟುಗಳು ಮಾರಾಟಕ್ಕಿವೆ**
ಶನೇಶ್ವರ ದೇವಸ್ಥಾನ ಹಿಂಭಾಗ ಕಾಡಪ್ಪನವರ ಲೇಔಟ್‌ನಲ್ಲಿ 30x40 East, 30x40 ಅಕ್ಕ-ಪಕ್ಕ, 60x40 East. Rate - 2150
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆ ಬಾಡಿಗೆಗೆ / ಲೀಸ್‌ಗೆ ಇದೆ**
ಸರಸ್ವತಿ ಬಡಾವಣೆ ವಿದ್ಯಾನಂದ ಸ್ಕೂಲ್ ಹಿಂಭಾಗ, ಶ್ರೀ ಕೃಷ್ಣ ಬಿಲ್ಡಿಂಗ್‌ನಲ್ಲಿ ಮೇಲಂತಸ್ತಿನ ಮಹಡಿಯಲ್ಲಿ ಡಬ್ಬಲ್ ಬೆಡ್ ರೂಂ ಮನೆ (ಸಣ್ಣ ಮನೆ) ಬಾಡಿಗೆಗೆ / ಲೀಸ್‌ಗೆ ಲಭ್ಯವಿದೆ. ಆಸಕ್ತರು ಕೆಳಗಿನ ನಂಬರ್‌ಗೆ ಸಂಪರ್ಕಿಸಿ :
70268 26453
ಮಧ್ಯವರ್ತಿಗಳಿಗೆ ಅವಕಾಶವಿಲ್ಲ ( ಸಸ್ಯಹಾರಿಗಳಿಗೆ ಮಾತ್ರ)

**HERBAL CURE WELLNESS**
**PART TIME / FULL TIME**
ಮೊಬೈಲ್ ಮೂಲಕ ನಮ್ಮ ಆಯುರ್ವೇದ ಉತ್ಪನ್ನಗಳನ್ನು ಪ್ರಚಾರ ಮಾಡುವ ಮೂಲಕ ದಿನಗಳಲ್ಲಿ 500 ರಿಂದ 5000 ರವರೆಗೂ ಗಳಿಸಿ.
81976 95295

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಮ್ಯಾನೇಜರ್ ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಕೆಲಸ ಮಾಡಲು ಮ್ಯಾನೇಜರ್, ಕ್ಲೀನರ್ ಬೇಕಾಗಿದ್ದಾರೆ.
ಸಂಪರ್ಕಿಸಿ.
88924 51765, 80956 82725

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಲೇಔಟ್‌ನಲ್ಲಿ 40x70 West 60 ಅಡಿ ರೋಡಿಗಿದೆ, 40x43 East, 80x43 East, 30x50 West, 30x40 West, 40 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**HOUSE FOR RENT**
Good Condi, + Vastu
G. Floor / 2BHK
1st Main, Opp. Railway park S.N. Layout
(Veg Only)
92423 42144, 96635 26688

**IIT FOUNDATION**
**Maths**
(From 5th, 6th, 7th class)
**Bruit Academy**
Nijalingappa Badavane
M: 97390 66956

**ಬೇಕಾಗಿದ್ದಾರೆ**
ನಗರದ ಪ್ರತಿಷ್ಠಿತ ಫರ್ನಿಚರ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ.
ಫೋ. : 91108 68664

**ಮಳಿಗೆ ಬಾಡಿಗೆಗೆ ಇವೆ (2 ಮಳಿಗೆ )**
2ನೇ ಮೇನ್, 2ನೇ ಕ್ರಾಸ್, ಪಿ. ಜೆ. ಬಡಾವಣೆ, AVK ಕಾಲೇಜ್ ರಸ್ತೆ, ನಂದಿ ಸ್ಪೋರ್ಟ್ಸ್ ಪಕ್ಕ,
(15 ಅಡಿ ಉದ್ದ, 35 ಅಡಿ ಅಗಲ)
78927 87627

**ಈಶ್ವರಿ ಮಹಿಳಾ ತರಬೇತಿ ಕೇಂದ್ರ**
ಫ್ಯಾಷನ್ ಡಿಸೈನಿಂಗ್ - ಟೈಲರಿಂಗ್ ಕೋರ್ಸ್, ರಾಜಸ್ಥಾನಿ ಚೂಡಿ - ಬ್ಲೌಜ್ ಕಟಿಂಗ್, ಮಿಡಿಗಳು & ಫ್ರಾಕುಗಳು, ಹ್ಯಾಂಡ್ ಎಂಬ್ರಾಯಿಡಿಂಗ್ & ಗ್ಲಾಸ್ ಪೆಂಟಿಂಗ್, ಪಾಟಪೇಟಿಂಗ್ ಹಾಗೂ ಕ್ರೋಷಾ ಕುಚ್ಚು, ಅನುಭವಿ ತರಬೇತುದಾರರಿಂದ ಶಿಕ್ಷಣ ಕೊಡಲಾಗುವುದು. ಆಸಕ್ತಿಯುಳ್ಳವರು ಸಂಪರ್ಕಿಸಿ : ವಿಳಾಸ - ಶ್ರೀ ಜಗದ್ಗುರು ರೇಣುಕಾ ಕೃಪಾ, # 2798, ಎಸ್.ಎಸ್. ಲೇಔಟ್ 'ಬಿ' ಬ್ಲಾಕ್ 10-A ಕ್ರಾಸ್. 97316 50435, 96325 80172, 95358 15543

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಕೃಷ್ಣ ಫ್ಲೆಕ್ಸ್ ಪ್ರಿಂಟಿಂಗ್‌ನಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು ಬೇಕಾಗಿದ್ದಾರೆ. ಹಳೇ ಬಸ್ ನಿಲ್ದಾಣದ ಎದುರು, ಪಿ.ಬಿ ರಸ್ತೆ, ದಾವಣಗೆರೆ.
96117 71970

**ಬೇಕಾಗಿದ್ದಾರೆ**
ಆನಗೋಡು ಸಮೀಪ NH48ನಲ್ಲಿ ಇರುವ BPCL ಪೆಟ್ರೋಲ್ ಬಂಕ್‌ನಲ್ಲಿ ಕ್ಲೀನಿಂಗ್ ಕೆಲಸ ಮಾಡಲು ಕೆಲಸಗಾರರು ಬೇಕಾಗಿದ್ದಾರೆ.
ಸಂಪರ್ಕಿಸಿ.
90082 28222, 99001 42052

**JOB OPPORTUNITY**
**ACCOUNTANT**
Qualifications : B. Com., M.Com
With 5 years experience in civil construction company, with good knowledge of Tally & MS office is a must.
91486 79995

**WE ARE HIRING**
**Akshaya Fabrication:**
We have 2 openings for sales
Qualification :
PUC or Any graduation
Shift: 10am to 8pm
Fresher/experienced
Contact : 63660 65527

**ಜಮೀನು ಮಾರಾಟಕ್ಕಿದೆ**
4 ಎಕರೆ 4 ಗುಂಟೆ ಕಪ್ಪು ಭೂಮಿ, 2 ಎಕರೆ, 25 ಗುಂಟೆ, ಕೆಂಪು ಭೂಮಿ, ದಾವಣಗೆರೆಯಿಂದ 19 ಕಿ.ಮೀ. ದೂರದಲ್ಲಿದೆ. ಸಂಪರ್ಕಿಸಿ :
90196 80218

**WE ARE HIRING**
**IT COMPANY :**
We are looking for tele caller and typist (only female)
Qualification: PUC or Any graduation
Shift: 9:30am to 6:30pm
Fresher/experienced
Contact : 63660 65527

**ಬೇಕಾಗಿದ್ದಾರೆ**
ದಾವಣಗೆರೆ ಮತ್ತು ಚಿತ್ರದುರ್ಗ ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಉತ್ತಮ ಸಂಬಳವಿರುತ್ತದೆ.
81056 99985, 89715 04492

**ಬೇಕಾಗಿದ್ದಾರೆ**
ತಂದೂರಿ ರೋಟಿ ಹೋಟೆಲ್‌ಗೆ ಹೆಂಗಸರು ಹಾಗು ರೊಟ್ಟಿ ಭಟ್ಟರು ಬೇಕಾಗಿದ್ದಾರೆ.
97401 66884, 94488 38780

**ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ**
ಹುದ್ದೆಗಳ ಸಂಖ್ಯೆ
1) B.Sc B.Ed (Maths)-01
2) BP.Ed/ CP.Ed :01
ನಿಸರ್ಗ ಪ್ರಾಥಮಿಕ ಹಾಗೂ ಪ್ರೌಢಶಾಲೆ, 'C' ಬ್ಲಾಕ್, SOG ಬಡಾವಣೆ, ಇಂಡಸ್ಟ್ರಿಯಲ್ ಏರಿಯಾ, ದಾವಣಗೆರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
87927 02690, 99862 26454
98444 43374

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**WANTED**
**SHRAMAJEEVI Deluxe Lodge**
1) Day & Night - Manager (Computer Experience)
2) Security - 1 Nos
Contact :
96205 48704

**ಮನೆ ಬಾಡಿಗೆಗೆ ಇದೆ**
2 BHK ಮನೆ ಇಂಡಿಪೆಂಡೆಂಟ್, ಗ್ರೌಂಡ್ ಫ್ಲೋರ್ ಮನೆ, ಕಾರ್ಪೊರೇಷನ್, ಬೋರ್‌ವೆಲ್, ಕಾರ್ ಪಾರ್ಕಿಂಗ್ ಸೌಲಭ್ಯವಿದೆ. ಎಸ್.ಎಸ್. ಲೇಔಟ್, ಬಿ ಬ್ಲಾಕ್, 4ನೇ ಮೇನ್, 13ನೇ ಕ್ರಾಸ್, ದಾವಣಗೆರೆ.
(ಸಸ್ಯಹಾರಿಗಳಿಗೆ ಮಾತ್ರ)
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
9108437724, 9535028988

**GRS ಹೋಂ ಪ್ರಾಡಕ್ಟ್**
**ಫೀಲ್ಡ್ ವರ್ಕ್**
ಫೀಲ್ಡ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ
ಎಸ್.ಎಸ್.ಎಲ್.ಸಿ., ಪಿಯುಸಿ,ಐಟಿಐ (M/F)
ಸಂಬಳ : 10,000 ರಿಂದ 50,000
ಪೆಟ್ರೋಲ್ + ಇನ್‌ಸೆಂಟಿವ್ ಸೌಲಭ್ಯವಿದೆ.
ಜಗದೀಶ್ ಸಿ.ಎಂ., 70194 65768

**HOUSE FOR RENT**
3BHK Ground Floor with car Parking, Near Indoor Stadium, SS Layout, 'B' BLock, Davanagere.
98446 44718, 80501 36584

**REQUIRED**
**Sales Executive - 3**
Experience in Medical Industry
Contact :
**Vishwas Scientific Co.**
Hadadi Road, Davanagere.
80739 38552

**ಬೇಕಾಗಿದ್ದಾರೆ**
ಎಸ್.ಎನ್ ಎಂಟರ್‌ಪ್ರೈಸಸ್ ದಾವಣಗೆರೆ.
ನಮ್ಮಲ್ಲಿ ಕೆಲಸಕ್ಕೆ ಯುವಕ, ಯುವತಿಯರು ಬೇಕಾಗಿದ್ದಾರೆ. ಆಸಕ್ತಿ ಉಳ್ಳವರು ಸಂಪರ್ಕಿಸಿ.
85480 47353, 81976 40948

**ಸೈಟ್ ಮಾರಾಟಕ್ಕಿದೆ**
ಶಾಮನೂರು ಡಾಲರ್ಸ್ ಕಾಲೋನಿಯಲ್ಲಿ 30x40 ದಕ್ಷಿಣ
(3450/- sqft)
90366 48615

**ಲೋನ್ ಕೊಡಲಾಗುತ್ತದೆ**
ಇಟ್ಟಿಗೆ ಭಟ್ಟಿ, ಪ್ರಾವಿಜನ್ ಸ್ಟೋರ್, ಬಟ್ಟೆ ವ್ಯಾಪಾರ, ಸಣ್ಣ ವ್ಯಾಪಾರಿಗಳಿಗೆ, ಸಾಲ ಸೌಲಭ್ಯವಿದೆ, ಮನೆ ಖರೀದಿ ಮತ್ತು ನಿರ್ಮಾಣಕ್ಕೂ ಸಾಲ ಸೌಲಭ್ಯವಿದೆ, ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ .
74835 24662

**WANTED ACCOUNTANT**
Graduate with computer knowledge in accounting experience for a reputed company in APMC YARD DAVANGERE.
94495 85680, 98455 55039

**ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ**
SMS ಕಾನ್ವೆಂಟ್ & ಪ್ರೌಢಶಾಲೆ
ರಾಜೀವ್‌ಗಾಂಧಿ ಬಡಾವಣೆ ಕೊಂಡಜ್ಜಿ ರಸ್ತೆ, ದಾವಣಗೆರೆ, ಆಂಗ್ಲ ಮಾಧ್ಯಮದಲ್ಲಿ ಬೋಧಿಸಲು ಈ ಕೆಳಕಂಡ ಅರ್ಹ ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ. BA, B.Ed - Social, Hindi, Kan. D.Ed - 2. PUC, B.Sc - 2. SDA- 1.
ಸಂಪರ್ಕಿಸಿ : 98447 35946, 96631 95531, 80508 77095

**Tuition for supplementary exam**
PCMB, COMMERCE, ARTS.
100% ಫಲಿತಾಂಶ
ಸಿಂಚನ ಕೋಚಿಂಗ್ ಸೆಂಟರ್ ದಾವಣಗೆರೆ.
88614 45913, 85532 78258

**JOB OPPORTUNITY**
We Need a
**Tally Faculty (Female)**
Any Graduate with 0-2 years can send their CV within 05.05.2023 to hardsoftdvg@gmail.com or
Call us : 97312 18567

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು
ದಿ.3.5.2023ರ ಬುಧವಾರ
ದಿ.4.5.2023ರ ಗುರುವಾರ
ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**CHANGE OF NAME**
I Zulfeqar Bieg S/o Fazil Beig, # 1307, 2nd main, 2nd cross, Jalinagar, Davangere. My Son's name is Mohammad Rihan Bieg it is correct in educational Records. In Passport name Entered as Mohammad Rihan Beg. I state that the above said both the names are him only. none-else as per affidevit dated 24.4.2023 Notary Davangere.
Sd/- Zulfeqar Bieg

**REQUIRED**
**SALES EXECUTIVE**
Experience: 2 – 3 years
Contact & whatsap :
9448046571,7899337571
Email: sv.salesvenu15@mail.com

# ಸಮಾಜದ ಸತ್ಕಾರ್ಯಗಳಿಗೆ ಸ್ಪಂದಿಸಲು 'ಪ್ರೀತಿ - ಆರೈಕೆ ಫೌಂಡೇಷನ್' ಅಸ್ತಿತ್ವಕ್ಕೆ






ಸಾಮಾಜಿಕ ಸೇವೆಯಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದ ತಮ್ಮ ಪತ್ನಿ ಲಿಂ. ಶ್ರೀಮತಿ ಪ್ರೀತಿ ಅವರ ಹಂಬಲವನ್ನು ಸಾಕಾರಗೊಳಿಸುವ ಸದುದ್ದೇಶದಿಂದ, ಆರ್ಥಿಕವಾಗಿ ಸಂಕಷ್ಟದಲ್ಲಿರುವ ಬಡ ರೋಗಿಗಳಿಗೆ ಉಚಿತ ಚಿಕಿತ್ಸೆ, ಬಡ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ನೆರವು ಸೇರಿದಂತೆ, ಸಮಾಜಕ್ಕೆ ಸ್ಪಂದಿಸುವ ಇತರೆ ಸತ್ಕಾರ್ಯಗಳಿಗೆ 'ಪ್ರೀತಿ - ಆರೈಕೆ ಫೌಂಡೇಷನ್' ಸದಾ ಮುಂದೆ ಇರಲಿದೆ.

- ಡಾ. ಟಿ.ಜಿ. ರವಿಕುಮಾರ್, ಮುಖ್ಯಸ್ಥರು, ಆರೈಕೆ ಆಸ್ಪತ್ರೆ

ದಾವಣಗೆರೆ, ಮೇ 3- ಯಾವುದೇ ಮತ-ಜಾತಿ-ಪಂಥಕ್ಕೆ ಸೀಮಿತವಾಗದೆ ಸಮಾಜ ಸೇವೆಯನ್ನೇ ಧ್ಯೇಯವನ್ನಾಗಿಸಿಕೊಳ್ಳು ವುದರ ಮೂಲಕ ಸಮಾಜಕ್ಕೆ ತನ್ನದೇ ಆದ ವಿಶಿಷ್ಟ ಕೊಡುಗೆ ನೀಡುವ ನಿಟ್ಟಿನಲ್ಲಿ 'ಪ್ರೀತಿ - ಆರೈಕೆ ಫೌಂಡೇಷನ್' ಅಸ್ತಿತ್ವಕ್ಕೆ ಬಂದಿದೆ.

ನಗರದ ಆರೈಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಮುಖ್ಯಸ್ಥರೂ, ಹಿರಿಯ ವೈದ್ಯರೂ ಆಗಿರುವ ಡಾ. ಟಿ.ಜಿ. ರವಿಕುಮಾರ್ ಅವರು ಈ ಸಂಸ್ಥೆಯನ್ನು ಸ್ಥಾಪಿಸಿದ್ದು, ಆರೈಕೆ ಆಸ್ಪತ್ರೆಯ ಸಹಯೋಗದೊಂದಿಗೆ 'ಪ್ರೀತಿ - ಆರೈಕೆ ಫೌಂಡೇಷನ್' ಮುನ್ನಡೆಸುವ ಸಂಕಲ್ಪ ಮಾಡಿದ್ದಾರೆ.

ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ತಮ್ಮ ಪತ್ನಿ ಶ್ರೀಮತಿ ಪ್ರೀತಿ ಅವರ ಸಾಮಾಜಿಕ ಕಳಕಳಿಯನ್ನು ಸಾಕಾರಗೊಳಿಸುವ ದೆಸೆಯಲ್ಲಿ ಅವರ ಹೆಸರಿನಲ್ಲಿ 'ಪ್ರೀತಿ - ಆರೈಕೆ ಫೌಂಡೇಷನ್' ಡಾ. ರವಿಕುಮಾರ್ ತಿಳಿಸಿದ್ದಾರೆ.

ತಮ್ಮ ಪತ್ನಿ ಪ್ರೀತಿ ಅವರು ಕಳೆದ ಎರಡು ವರ್ಷಗಳ ಹಿಂದೆ ರಸ್ತೆ ಅಪಘಾತದಲ್ಲಿ ಅಗಲಿದ್ದು, ಅವರ ಸಾಮಾಜಿಕ ಸೇವೆಯನ್ನು ಮುಂದುವರಿಸುವುದರ ಮೂಲಕ, ನಮಗೆ ಎಲ್ಲವನ್ನೂ ಕೊಟ್ಟಿರುವ ಸಮಾಜಕ್ಕೆ ನಾವು ಕಿಂಚಿತ್ತು ಹಿಂತಿರುಗಿಸಬೇಕು ಎನ್ನುವ ಹಂಬಲವನ್ನು ಸಾಕಾರಗೊಳಿಸುವ ಸದುದ್ದೇಶದಿಂದ ಈ ಸಂಸ್ಥೆಯನ್ನು ಅಸ್ತಿತ್ವಕ್ಕೆ ತರಲಾಗಿದೆ ಎಂದು ಅವರು ಹೇಳಿದ್ದಾರೆ.

ಈ ನಿಟ್ಟಿನಲ್ಲಿ ನಮಗಾಗಿ ದೇಶ ರಕ್ಷಣೆ ಮಾಡಿದ ಹದಿನಾರು ನಿವೃತ್ತ ಸೈನಿಕರಿಗೆ ಆಜೀವ ಪರ್ಯಂತ ಆರೋಗ್ಯ ತಪಾಸಣೆ ದೊರೆಯುವಂತಹ 'ಪ್ರೀತಿ - ಆರೈಕೆ' ಹೆಲ್ತ್ ಕಾರ್ಡ್ ನೀಡಲಾಗಿದೆ. ಜೊತೆಗೆ, ದಾವಣಗೆರೆ ಜಿಲ್ಲೆಯಾದ್ಯಂತ ದಿನದ 24 ಗಂಟೆಗಳಲ್ಲೂ ಲಭ್ಯ ಇರುವಂತೆ ಉಚಿತ ಆಂಬ್ಯುಲೆನ್ಸ್ ಸೇವೆ ಒದಗಿಸಲಾಗಿದೆ ಎಂದು ಡಾ. ರವಿಕುಮಾರ್ ಅವರು ವಿವರಿಸಿದ್ದಾರೆ.

**ಉದ್ಘಾಟನೆ :** ಆರೈಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಸಭಾಂಗಣದಲ್ಲಿ ಇಂದು ಏರ್ಪಾಡಾಗಿದ್ದ ಸರಳ ಸಮಾರಂಭದಲ್ಲಿ ಜ್ಯೋತಿ ಬೆಳಗಿಸುವುದರೊಂದಿಗೆ 'ಪ್ರೀತಿ - ಆರೈಕೆ ಫೌಂಡೇಷನ್' ತನ್ನನ್ನು ಸಮಾಜ ಸೇವೆಗೆ ಸಮರ್ಪಣೆಗೊಳಿಸಿತು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕ ಭಾಷಣ ಮಾಡಿದ ಆರೈಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಮುಖ್ಯಸ್ಥ ಡಾ. ಟಿ.ಜಿ. ರವಿಕುಮಾರ್, ಪ್ರೀತಿ-ಆರೈಕೆ ಫೌಂಡೇಶನ್ ನನ್ನದು ಎಂಬ ಭಾವಕ್ಕಿಂತ ನಮ್ಮದು ಎಂಬ ಭಾವ ನನ್ನಲ್ಲಿದೆ. ಹಾಗಾಗಿ ಜತೆಗೆ ನೀವೂ ಸೇರಿಕೊಳ್ಳಿ ಎಂಬುದಕ್ಕಿಂತ, ನಿಮ್ಮ ಜತೆ ಫೌಂಡೇಷನ್ ಸೇರಿಕೊಳ್ಳಲಿ ಎಂಬ ಬಯಕೆ ನಮ್ಮದು ಎಂದು ಆಶಯ ವ್ಯಕ್ತಪಡಿಸಿದರು.

ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಶ್ರೀ ರಾಮಕೃಷ್ಣ ಮಿಷನ್‌ನ ಶ್ರೀ ತ್ಯಾಗೀಶ್ವರಾನಂದ ಸ್ವಾಮೀಜಿ ಆಶೀರ್ವಚನ ನೀಡಿ, ಸಮಾಜ ನಮಗೇನು ನೀಡಿದೆ ಎಂಬುದಕ್ಕಿಂತ, ಸಮಾಜಕ್ಕೆ ನಾವೇನು ಸೇವೆ ನೀಡಿದ್ದೇವೆ ಎಂಬುದರ ಆಧಾರದ ಮೇಲೆ ಬದುಕಿನ ಸಾರ್ಥಕತೆ ನಿರ್ಧಾರವಾಗುತ್ತದೆ. ಬದುಕಿನ ಸಾರ್ಥಕತೆ ಎಂದರೆ ಸಮಾಜದಿಂದ ಪಡೆದಿದ್ದನ್ನು ಸಮಾಜಕ್ಕೆ ಪುನಃ ನೀಡುವುದಾಗಿದೆ. ಪ್ರತಿಯೊಬ್ಬರು ಲಾಭ ಬಯಸದೇ ಸಮಾಜಕ್ಕೆ ಕೊಡುಗೆ ನೀಡುವ ಮನಸ್ಥಿತಿ ಬೆಳೆಸಿಕೊಳ್ಳಬೇಕು ಎಂದು ಹಿತ ನುಡಿದರು.

ನಿಸ್ವಾರ್ಥ ಸೇವೆ ಮಾಡುವಲ್ಲಿ ಪವಿತ್ರತೆ ಬೇಕು, ಇದರಿಂದ ಬರುವ ಶಕ್ತಿ ಬಹುದೊಡ್ಡದು. ಪ್ರಪಂಚದಲ್ಲಿ ಉನ್ನತ ಸಾಧನೆ ಮಾಡಿದ ವ್ಯಕ್ತಿಗಳ ಬಳಿ ಯಾವುದೇ ಹಣವಿಲ್ಲ. ಆದರೆ, ಅವರು ತಮ್ಮದೇ ಆದ ರೀತಿಯಲ್ಲಿ ಸಮಾಜಕ್ಕೆ ಕೊಡುಗೆ ನೀಡಿದ್ದಾರೆ. ಪ್ರತಿಯೊಬ್ಬರು ಪ್ರಾಮಾಣಿಕವಾಗಿ ಸಾಧ್ಯವಾದಷ್ಟು ಸಮಾಜಕ್ಕೆ ಕೊಡುಗೆ ನೀಡೋಣ. ತನಗಾಗಿ ಎಲ್ಲವೂ ಬೇಕು ಎಂಬ ದಿನಮಾನದಲ್ಲಿ ನಾವಿದ್ದೇವೆ. ಇದ್ದವರನ್ನೇ ಮರೆತು ಬಿಡುವ ಯಾಂತ್ರಿಕ ಬದುಕನ್ನು ಸಾಗಿಸುತ್ತಿದ್ದೇವೆ. ಆದರೆ, ಲಿಂಗೈಕ್ಯರಾದವರ ಕನಸು, ಧ್ಯೇಯದ ಸಾಕಾರಕ್ಕಾಗಿ ಫೌಂಡೇಶನ್ ಸ್ಥಾಪಿಸುವ ಮೂಲಕ ಡಾ.ರವಿ ಕುಮಾರ್ ಅಗ್ರ ಪಂಕ್ತಿ ಹಾಕಿಕೊಟ್ಟಿದ್ದಾರೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಾಜಿ ಶಾಸಕ ಹಾಗೂ ಆರೈಕೆ ಸಮೂಹ ಸಂಸ್ಥೆಗಳ ಅಧ್ಯಕ್ಷ ಟಿ.ಜಿ. ಗುರುಸಿದ್ದನಗೌಡ ಮಾತನಾಡಿ, ನಿವೃತ್ತ ಸೈನಿಕರಿಗೆ ಸನ್ಮಾನ ಮಾಡುವ ಮೂಲಕ ನಾವೇನೂ ಮಹತ್ ಕಾರ್ಯ ಮಾಡುತ್ತಿಲ್ಲ. ಬದಲಾಗಿ ಜೀವ, ಜೀವನದ ಹಂಗು ತೊರೆದು ನಮಗಾಗಿ ದೇಶ ರಕ್ಷಣೆ ಮಾಡಿದ ಯೋಧರಿಗೆ ನಮ್ಮ ಕೃತಜ್ಞತೆ ಸಲ್ಲಿಸುತ್ತಿದ್ದೇವೆ. ಭಾರತ ಸ್ವಾತಂತ್ರ್ಯದ ಆರಂಭದ ದಿನಗಳಲ್ಲಿ ಫೀಲ್ಡ್ ಮಾರ್ಷಲ್ ಆಗಿದ್ದ ಜನರಲ್ ಕಾರ್ಯಪ್ಪನವರು, ದೇಶದ ಮೇಲೆ ನಿಯಂತ್ರಣ ಸಾಧಿಸಿ ಡಿಕ್ಟೇಟರ್ ಆಗುವ ಎಲ್ಲ ಅವಕಾಶವೂ ಇತ್ತು. ಆದರೆ, ಅವರು ದೇಶದಲ್ಲಿ ಪ್ರಜಾಪ್ರಭುತ್ವ ನೆಲೆಸಬೇಕು ಎಂದು ನಿರ್ಧರಿಸಿ, ಜವಾಹರಲಾಲ್ ನೆಹರು ಅವರು ಪ್ರಧಾನಿ ಆಗಲು ನೆರವಾದರು. ಇಂತಹ ವೀರ ಯೋಧರ ಪರಂಪರೆಯ ತಾಯ್ನಾಡು ನಮ್ಮದು ಎಂದು ಹೇಳಿದರು.

ಡಾ.ಹಾಲಸ್ವಾಮಿ ಕಂಬಳಿಮಠ, ಕ್ಯಾಪ್ಟನ್ ಡಾ.ಬಿ. ಹಾಲೇಶ, ಡಾ. ಎಚ್.ಎಂ ವೀರಯ್ಯ, ಡಾ. ಮಲ್ಲಿಕಾರ್ಜುನ ರೆಡ್ಡಿ, ಡಾ. ಆರ್. ಎಂ. ದೀಪಕ್, ಡಾ. ದೀಪಶ್ರೀ ಕಂಬಳಿಮಠ, ಡಾ. ಸಿದ್ಧಾರ್ಥ, ಡಾ.ಪ್ರದೀಪ್, ಡಾ. ಶ್ರೀನಿವಾಸ್, ಡಾ. ರವಿಗೌಡ್ರು, ಡಾ. ನಾಗಪ್ಪ ಕೆ. ಕಡ್ಲಿ, ನರ್ಸಿಂಗ್ ಅಧೀಕ್ಷಕಿ ಹೆಚ್.ಕೆ. ರೂಪಾ, ರವಿರಾಜ್, ನುಂಕೇಶ್, ಕಿರಣ್, ಆರೈಕೆ ಆಸ್ಪತ್ರೆ ಸಿಬ್ಬಂದಿ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಮತದಾನ ಮಾಡಿದ ಶತಾಯುಷಿಗೆ ಮೋದಿ, ಆಯುಕ್ತರ ಅಭಿನಂದನೆ

ನವದೆಹಲಿ, ಮೇ 3 – ಮನೆಯಿಂದಲೇ ಮತದಾನ ಮಾಡುವ ಸೌಲಭ್ಯ ಬಳಸಿಕೊಂಡು, ಮತದಾನ ಮಾಡಿದ ಬೆಳಗಾವಿ ಜಿಲ್ಲೆಯ 103 ವರ್ಷದ ಮಹದೇವ ಮಹಾಲಿಂಗ ಮಾಲಿ ಅವರನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರು ಪ್ರಶಂಸಿಸಿದ್ದಾರೆ.

ಬೆಳಗಾವಿಯ ಚಿಕ್ಕೋಡಿಯಲ್ಲಿ ರುವ ತಮ್ಮ ಮನೆಯಿಂದ ಮಾಲಿ ಅವರು ಮತದಾನ ಮಾಡಿದ್ದಾರೆ. ದೂರವಾಣಿಯಲ್ಲಿ ಮಾಲಿ ಜೊತೆ ಮಾತನಾಡಿದ ಮುಖ್ಯ ಚುನಾವಣಾ ಆಯುಕ್ತರು, ಅಭಿನಂದನೆ ಸಲ್ಲಿಸಿದ್ದಾರೆ.

ಮಾಲಿ ಅವರು ಪ್ರಜಾಪ್ರಭುತ್ವ ಬಲಗೊಳಿಸುವಲ್ಲಿ ತಮ್ಮ ಬದ್ಧತೆ ತೋರಿದ್ದು, ಇದು ಇತರರಿಗೂ ಸ್ಫೂರ್ತಿ. ಇದು ಕರ್ನಾಟಕದ ಸಂಸ್ಕೃತಿಯ ಪ್ರತೀಕ ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳ ಸಂಭ್ರಮ ಎಂದು ಪ್ರಧಾನಿ ಮೋದಿ ತಿಳಿಸಿದ್ದಾರೆ.

## ಗೋ ಫಸ್ಟ್ ದಿವಾಳಿಯಿಂದ ವಿಮಾನಯಾನ ದರ ಹೆಚ್ಚಳ

ನವದೆಹಲಿ, ಮೇ 3 – ಗೋ ಫಸ್ಟ್ ವಿಮಾನಯಾನ ಸಂಸ್ಥೆ ದಿವಾಳಿ ಪ್ರಕ್ರಿಯೆಗೆ ಮುಂದಾಗುತ್ತಿರುವುದರಿಂದ ವಿಮಾನಯಾನ ದರಗಳು ಹೆಚ್ಚಾಗುವ ಸಾಧ್ಯತೆ ಇದೆ.

ತೀವ್ರ ಹಣಕಾಸು ಸಮಸ್ಯೆ ಹಾಗೂ ಇಂಜಿನ್ ಪೂರೈಕೆ ಕೊರತೆ ಎದುರಿಸುತ್ತಿರುವ ವಿಮಾನಯಾನ ಸಂಸ್ಥೆ, ಮೇ 3ರಿಂದ ಮೂರು ದಿನಗಳ ಕಾಲ ತನ್ನ ವಿಮಾನಗಳ ಹಾರಾಟ ನಿಲ್ಲಿಸಿದೆ.

ವಿಮಾನಯಾನ ಸಂಸ್ಥೆ ದಿವಾಳಿಗೆ ಅರ್ಜಿ ಹಾಕಿರುವುದು ಈ ವಲಯಕ್ಕೆ ಆಘಾತ ನೀಡಿದೆ. ಕಿಂಗ್‌ಫಿಷರ್ ಏರ್‌ಲೈನ್ಸ್ ಕಾರಣದಿಂದ ನಾವು ಕೋಟ್ಯಂತರ ರೂ. ಕಳೆದುಕೊಂಡೆವು. ನಂತರ ಜೆಟ್ ಏರ್‌ವೇಯ್ಸ್ ಹಾಗೂ ಈಗ ಮತ್ತೊಂದು ವಿಮಾನಯಾನ ಸಂಸ್ಥೆ ದಿವಾಳಿ ಪ್ರಕ್ರಿಯೆಗೆ ಮುಂದಾಗಿದೆ ಎಂದು ಟ್ರಾವೆಲ್ ಏಜೆಂಟ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಟಿಎಎಐ) ಅಧ್ಯಕ್ಷೆ ಜ್ಯೋತಿ ಮಯಲ್ ತಿಳಿಸಿದರು.

ಈಗ ರಜಾ ದಿನಗಳಿರುವ ಕಾರಣ ವಿಮಾನಯಾನಕ್ಕೆ ಬೇಡಿಕೆ ಇದೆ. ಗೋ ಫಸ್ಟ್ ನಿರ್ಧಾರದ ನಂತರ ಮುಂಬರುವ ದಿನಗಳಲ್ಲಿ ಬೆಲೆಗಳು ಮತ್ತಷ್ಟು ಏರುವ ಸಾಧ್ಯತೆ ಇದೆ ಎಂದವರು ಹೇಳಿದರು. ಈಗಾಗಲೇ ಟಿಕೆಟ್ ಬುಕ್ ಮಾಡಿರುವವರಿಗೆ ಕಂಪನಿ ಹಣ ಮರಳಿಸುತ್ತಿದೆ. ಆದರೆ, ಕಂಪನಿ ದಿವಾಳಿ ಪ್ರಕ್ರಿಯೆಗೆ ಒಳಗಾದ ನಂತರ ನಿಯಮಗಳು ಬದಲಾಗಲಿವೆ. ನಮ್ಮ ಎದುರು ಸವಾಲಿನ ದಿನಗಳಿವೆ ಎಂದು ಮಯಲ್ ಹೇಳಿದರು.

## ಪಿಯು ಪರೀಕ್ಷೆ : ನಮನ ಜಿ.ಕೆ. ರೆಡ್ಡಿಗೆ ಶೇ. 88.66 ಫಲಿತಾಂಶ



ದಾವಣಗೆರೆ, ಮೇ 3- ನಗರದ ತರಳಬಾಳು ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ನಮನ ಜಿ.ಕೆ. ರೆಡ್ಡಿ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಶೇ. 88.66 ರಷ್ಟು ಫಲಿತಾಂಶ ಪಡೆದಿದ್ದಾಳೆ.

ಕನ್ನಡ-92, ಇಂಗ್ಲಿಷ್-83, ಭೌತಶಾಸ್ತ್ರ- 98, ರಸಾಯನಶಾಸ್ತ್ರ -76, ಗಣಿತಶಾಸ್ತ್ರ-98 ಮತ್ತು ಜೀವಶಾಸ್ತ್ರ-85 ಅಂಕಗಳನ್ನು ಪಡೆದಿದ್ದು, 600 ಅಂಕಗಳಿಗೆ 532 ಅಂಕಗಳನ್ನು ಗಳಿಸುವ ಮೂಲಕ ಡಿಸ್ಟಿಂಕ್ಷನ್‌ನಲ್ಲಿ ತೇರ್ಗಡೆ ಹೊಂದಿದ್ದಾಳೆ.

## ಓದುಗರ ಪತ್ರ

### ಚುನಾವಣೆಯೋ? ಯುದ್ಧವೋ?

**ಮಾನ್ಯರೇ,**

ಭಾರತಕ್ಕೆ ಸ್ವಾತಂತ್ರ್ಯ ಬಂದು 76 ವರ್ಷಗಳಾಗಿದ್ದು, ಮತದಾರ ಸಾಕಷ್ಟು ಜಾಗೃತನಾಗಿದ್ದಾನೆ. ಅವನಿಗೆ ಯಾವ ಪಕ್ಷಕ್ಕೆ, ಯಾರಿಗೆ ಮತ ನೀಡಬೇಕೆಂದು ಅರಿವಿರುತ್ತದೆ. ಈಗಿನ ಚುನಾವಣೆಗಳಲ್ಲಿ ಲಕ್ಷಗಟ್ಟಲೆ ಜನ ಸೇರಿಸುವುದಕ್ಕೆ ಕೋಟಿಗಟ್ಟಲೆ ಹಣ ಪೋಲು ಮಾಡುವುದು, ಅಬ್ಬರದ ಪ್ರಚಾರ, ಹಣ, ಹೆಂಡ ಮತ್ತು ವಸ್ತುಗಳನ್ನು ನೀಡುವುದು ಲಂಚವಾಗಿ ಭ್ರಷ್ಟಾಚಾರಕ್ಕೆ ಎಡೆಮಾಡಿಕೊಡುವುದಿಲ್ಲವೇ? ರಾಜಕಾರಣ, ದೇಶ ಸೇವೆ, ಈಶ ಸೇವೆ ಅನ್ನುವುದು ಹೋಗಿ, ಲೂಟಿ ವ್ಯವಹಾರವಾಗಿರುವುದು ಸರಿಯೇ? ಈಗ ಎಲ್ಲರ ಮನೆಯಲ್ಲಿಯೂ ಟಿ.ವಿ. ಇದ್ದು, ಟಿ.ವಿಗಳ ಮೂಲಕವೇ ಇವರು ಮತದಾರರ ಮನ ಒಲಿಸಬಹುದಲ್ಲವೇ? ಇದು ಯಾರ ದುಡ್ಡು? ಅನ್ಯಾಯದ ಮಾರ್ಗಗಳಲ್ಲಿ ಗಳಿಸಿದ ಹಣವನ್ನು ಮಾತ್ರ ಈ ರೀತಿ ಖರ್ಚು ಮಾಡಲು ಸಾಧ್ಯ. ಹಾಗಾಗಿ ಈಗಿನ ಪ್ರಜಾಪ್ರಭುತ್ವ ಭ್ರಷ್ಟರಿಂದ, ಭ್ರಷ್ಟರಿಗಾಗಿ, ಭ್ರಷ್ಟರಿಗೋಸ್ಕರ ಹಾಗೂ ಶ್ರೀಮಂತರಿಂದ, ಶ್ರೀಮಂತರಿಗಾಗಿ, ಶ್ರೀಮಂತರಿಗೋಸ್ಕರ ಎನ್ನುವಂತಾಗಿದೆ. ಜಾರ್ಜ್ ಬರ್ನಾರ್ಡ್ ಷಾ ಹೇಳಿದಂತೆ ಚುನಾವಣೆ ರಕ್ತಪಾತವಿಲ್ಲದ ಯುದ್ಧ. ಯುದ್ಧ ದಲ್ಲಿ ಆದಷ್ಟೇ ಅನಾಹುತಗಳು, ದುಷ್ಪರಿಣಾಮಗಳು ಚುನಾವಣೆಗಳಲ್ಲಿ ಆಗುತ್ತವೆ.

ಕರ್ನಾಟಕದ ರಾಜಕೀಯದ ಆಡಳಿತದ ಸೂತ್ರವನ್ನು ಎಲ್ಲಾ ಪಕ್ಷಗಳೂ ಸೇರಿ ಸರಿ ಸುಮಾರು ನೂರು ಶ್ರೀಮಂತ ಮನೆತನಗಳು ಆಕ್ಟೋಪಸ್ ಹಿಡಿತ ಹೊಂದಿವೆ. ಇವರ ನಂತರ ಇವರ ಮಕ್ಕಳು, ಮೊಮ್ಮಕ್ಕಳು ಆಡಳಿತ ನಡೆಸಲು ರಾಜಕೀಯ ವೃತ್ತಿ ಆರಂಭಿಸುತ್ತಾರೆ. ಇದು ರಾಜಾಡಳಿತವೋ, ಪ್ರಜಾಪ್ರಭುತ್ವವೋ? ಇದು ಬದಲಾಗಲೇ ಬೇಕು. ಸಾಮಾನ್ಯರೂ ಚುನಾವಣೆಗಳಲ್ಲಿ ಭಾಗವಹಿಸುವಂತಾಗಬೇಕು.

ಚುನಾವಣೆಗಳಲ್ಲಿ ಸ್ಪರ್ಧಿಸಿ ಗೆಲ್ಲುವ ವಿಶ್ವಾಸವಿಲ್ಲದ ಕೆಲ ಎಡಬಿಡಂಗಿ ರಾಜಕಾರಣಿಗಳು ಎರಡೆರಡು ಕಡೆ ಸ್ಪರ್ಧಿಸುವುದು ಪ್ರಜಾ ಪ್ರಭುತ್ವದ ಒಳ್ಳೆಯ ಲಕ್ಷಣವೇನೂ ಅಲ್ಲ ಹಾಗೂ ಆತ ಒಂದೇ ಕಡೆ ಗೆಲ್ಲುವ ಆತ್ಮವಿ ಶ್ವಾಸವಿಲ್ಲದ ನಾಯಕ ಎನ್ನುವಂತಾಯಿತು. ಇಂತಹ ರಾಜಕಾರಣಿಗಳು ಪ್ರಜಾಪ್ರಭುತ್ವವನ್ನು ಆಟಿಕೆಯ ಸಾಮಾನಿನ ಮಟ್ಟಕ್ಕೆ ತಂದಿರುವುದು ಪ್ರಜೆಗಳ ದುರಾದೃಷ್ಟ. ಇದರಿಂದಾಗಿ ಮತ್ತೊಮ್ಮೆ ಚುನಾವಣೆ ನಡೆದು ತೆರಿಗೆ ದಾರರಿಗೆ ಹೊರೆಯೇ ಹೊರತು, ಪ್ರಜಾಪ್ರಭುತ್ವಕ್ಕೆ ಯಾವುದೇ ಅನುಕೂಲ ವಿಲ್ಲ. ಆದ್ದರಿಂದ ಮತದಾರರು ಇಂತಹ ಎಡಬಿಡಂಗಿ ರಾಜಕಾರಣಿಗಳನ್ನು ಎಲ್ಲಿ ನಿಂತರೂ ಎರಡೂ ಕಡೆ ಸೋಲಿಸಿ ಬುದ್ದಿ ಕಲಿಸಬೇಕಾಗಿದೆ.

- **ಮಹಿಮ ಪಟೇಲ್** (ಮಾಜಿ ಶಾಸಕರು),
**ಎಮ್. ಸಿದ್ದಯ್ಯ** (ವಕೀಲರು), **ಅನೀಸ್ ಪಾಷಾ** (ವಕೀಲರು),
**ಶಿವನಕೆರೆ ಬಸವಲಿಂಗಪ್ಪ** (ಸಮಾಜ ಸೇವಕರು),
**ಪ್ರೊ.ಎಂ. ಬಸವರಾಜ್** (ನಿ.ಪ್ರಾಧ್ಯಾಪಕರು)

## ಬಿಸಿಲಿಗಾಗಿ ಮುಂದಿನ ವರ್ಷ ಸಮಗ್ರ ಸೂಚ್ಯಂಕ



ನವದೆಹಲಿ, ಮೇ 3 – ಬಿಸಿಲಿನಿಂದ ಜನರ ಮೇಲೆ ಆಗುವ ಪರಿಣಾಮಗಳ ಕುರಿತು ಭಾರತ ತನ್ನದೇ ಆದ ಸಮಗ್ರ ಸೂಚ್ಯಂಕ ರೂಪಿಸಲಿದೆ. ಇದರಿಂದ ನಿರ್ದಿಷ್ಟ ಪ್ರದೇಶಗಳಿಗೆ ತಾಪಮಾನದ ಮುನ್ನೆಚ್ಚರಿಕೆ ನೀಡಲು ಸಾಧ್ಯವಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕಳೆದ ವಾರ ಹವಾಮಾನ ಇಲಾಖೆ ಪ್ರಾಯೋಗಿಕವಾಗಿ ಈ ಪ್ರಕ್ರಿಯೆ ಆರಂಭಿಸಿದೆ. ವಾಯು ತಾಪಮಾನ ಹಾಗೂ ತೇವಾಂಶದ ಆಧಾರದ ಮೇಲೆ ತಾಪಮಾನ ಸೂಚ್ಯಂಕ ರೂಪಿಸಲಾಗುತ್ತಿದೆ.

ಹಲವಾರು ಮಾನದಂಡಗಳನ್ನು ಆಧರಿಸಿ ತಾಪಮಾನದ ಅಪಾ ಯದ ಕುರಿತು ಎಚ್ಚರಿಕೆ ನೀಡಲಿದ್ದೇವೆ. ಈ ಮಾನದಂಡ ಬೇರೆಯವ ರಿಗಿಂತ ಉತ್ತಮವಾಗಿರಲಿದೆ ಎಂದು ಆಶಿಸುತ್ತೇವೆ ಎಂದು ಹವಾಮಾನ ಇಲಾಖೆಯ ಪ್ರಧಾನ ನಿರ್ದೇಶಕ ಮೃತ್ಯುಂಜಯ ಮೊಹಾಪಾತ್ರ ಹೇಳಿದ್ದಾರೆ.

ತಾಪಮಾನ ಹಾಗೂ ತೇವಾಂಶಗಳಲ್ಲದೇ ಗಾಳಿಯ ವೇಗ ಮತ್ತು ಬಿಸಿಲು ಎಷ್ಟು ಹೊತ್ತಿರಲಿದೆ ಎಂಬ ಪ್ರಮಾಣಗಳನ್ನೂ ಪರಿಗಣಿಸಲಾಗುವುದು. ಇದರಿಂದ ತಾಪಮಾನ ಒತ್ತಡದ ಬಗ್ಗೆ ಜನರಿಗೆ ಸ್ಪಷ್ಟ ಚಿತ್ರಣ ಸಿಗಲಿದೆ ಎಂದವರು ತಿಳಿಸಿದರು.

ಎರಡು ತಿಂಗಳಲ್ಲಿ ಸೂಚ್ಯಂಕ ಸಿದ್ಧವಾಗಲಿದೆ. ಮುಂದಿನ ಬೇಸಿಗೆಯ ವೇಳೆಗೆ ಇದು ಕಾರ್ಯಾರಂಭ ಮಾಡಲಿದೆ ಎಂದವರು ತಿಳಿಸಿದರು.

## 'ಅಜಾತ ಶತ್ರು ಗೆಲ್ಲಿಸಿ, ಅಭಿವೃದ್ಧಿಗೆ ಸಹಕರಿಸಿ' ಎಸ್ಸೆಸ್ ಪರ ಚಿತ್ರ ನಟ ಪ್ರಥಮ್ ಪ್ರಚಾರ



ದಾವಣಗೆರೆ, ಮೇ 3- ದಕ್ಷಿಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಶಾಮನೂರು ಶಿವಶಂಕರಪ್ಪ ಅವರ ಪರವಾಗಿ ಚಲನಚಿತ್ರ ನಟ, ಬಿಗ್ ಬಾಸ್ ಖ್ಯಾತಿಯ ಪ್ರಥಮ್ ಅವರು ಇಂದು ಪ್ರಚಾರ ನಡೆಸಿ ಮತಯಾಚನೆ ಮಾಡಿದರು.

14ನೇ ವಾರ್ಡ್‌ನ ವಿವಿಧ ಕಡೆಗಳಲ್ಲಿ ಪ್ರಚಾರ ನಡೆಸಿದ ಪ್ರಥಮ್, ದಾವಣಗೆರೆಯಷ್ಟೇ ಅಲ್ಲ ರಾಜ್ಯಾದ್ಯಂತ ಉತ್ತಮ ಹೆಸರು ಗಳಿಸಿರುವ ಅಜಾತ ಶತ್ರು ಶಾಮನೂರು ಶಿವಶಂಕರಪ್ಪ ಅವರನ್ನು ಗೆಲ್ಲಿಸಿ ಅಭಿವೃದ್ಧಿಗೆ ಸಹಕರಿಸುವಂತೆ ಮನವಿ ಮಾಡಿದರು. ದಾವಣಗೆರೆ ನಗರ ಸಮಗ್ರ ಅಭಿವೃದ್ಧಿ ಆಗಬೇಕಿದೆ. ನಗರದ ಜನತೆ ಅಭಿವೃದ್ಧಿಗೆ ಮತ ನೀಡುವಿರಿ ಎಂಬ ವಿಶ್ವಾಸವಿದೆ. ಅಲ್ಲದೇ ನಿಮ್ಮ ಮತ ದಾವಣಗೆರೆ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದರು.

ಈ ಸಂದರ್ಭದಲ್ಲಿ ಅಭ್ಯರ್ಥಿ ಶಾಸಕ ಶಾಮನೂರು ಶಿವಶಂಕರಪ್ಪ, ಉದ್ಯಮಿ ಎಸ್.ಎಸ್.ಗಣೇಶ್, ಮಹಾನಗರ ಪಾಲಿಕೆ ಸದಸ್ಯ ಕೆ. ಚಮನ್‌ಸಾಬ್, ಜಾಕೀರ್ ಅಲಿ, ಶಫೀಕ್ ಪಂಡಿತ್, ಎ.ಬಿ.ರಹೀಂ, ಸೀಮೆಎಣ್ಣೆ ಮಲ್ಲೇಶ್, ಡಾ.ದೀಪಕ್ ಬೋಂದಾಡೆ, ಅಣಬೇರು ರಾಜಣ್ಣ ಮತ್ತಿತರರಿದ್ದರು.

## ದೇಶದ ಅಭಿವೃದ್ಧಿಗೆ ಶ್ರಮಿಕರ ಶ್ರಮವೇ ಕಾರಣ

### ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮದಲ್ಲಿ ಎ.ಕೆ. ಫೌಂಡೇಶನ್ ಸಂಸ್ಥಾಪಕ ಕೊಟ್ರೇಶ್



ದಾವಣಗೆರೆ, ಮೇ 3- ಶ್ರಮಿಕರ ಶ್ರಮ ಜೀವನದಿಂದಲೇ ದೇಶ ಅಭಿವೃದ್ಧಿ ಹೊಂದಲು ಕಾರಣವಾಗಿದೆ. ಪ್ರತಿಯೊಂದು ರಂಗದಲ್ಲೂ ಶ್ರಮಿಕರ ಬದುಕು ಪ್ರಮುಖವಾದುದು ಎಂದು ಎ.ಕೆ. ಫೌಂಡೇಶನ್ ಸಂಸ್ಥಾಪಕ ಕೆ.ಬಿ. ಕೊಟ್ರೇಶ್ ಹೇಳಿದರು.

ನಗರದ ಭಾರತ ಸೇವಾ ದಳ ಸಾಂಸ್ಕೃತಿಕ ಭವನದಲ್ಲಿ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಹಾಗೂ ಎ.ಕೆ. ಫೌಂಡೇಶನ್ ವತಿಯಿಂದ ಇಂದು ಹಮ್ಮಿಕೊಂಡಿದ್ದ ಕಾಯಕ ದಿನಾಚರಣೆ ಮತ್ತು ಸನ್ಮಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ದೇಶದಲ್ಲಿರುವ ಅಸಂಘಟಿತ ವಲಯದ ಕಾರ್ಮಿಕರನ್ನು ಸಂಘಟಿತ ವಲಯಕ್ಕೆ ಸೇರಿಸುವ ಮೂಲಕ ಸರ್ಕಾರ ಅವರಿಗೆ ಸಿಗಬೇಕಾದ ಸೌಲಭ್ಯಗಳನ್ನು ನೀಡುವ ಅಗತ್ಯವಿದೆ ಎಂದು ಹೇಳಿದರು.

ವರ್ತಕ ಎಸ್.ಟಿ.ಕುಸುಮ ಶ್ರೇಷ್ಠಿ ಮಾತನಾಡಿ, ಸಮಾಜದಲ್ಲಿ ಶ್ರಮಿಕರ ಪಾತ್ರ ಅತ್ಯಂತ ಪ್ರಮುಖವಾದುದು. ಅವರ ಶ್ರಮದಿಂದಲೇ ಜನರು ನೆಮ್ಮದಿಯ ಜೀವನ ಮಾಡುತ್ತಿದ್ದಾರೆ ಎಂದರು.

ಮಾಲೀಕ ಮತ್ತು ಕಾರ್ಮಿಕ ಪರಸ್ಪರ ಹೊಂದಾಣಿಕೆಯಿಂದ ಇದ್ದರೆ, ಕೆಲಸಗಳು ಸುಗಮವಾಗಿ ಸಾಗುತ್ತವೆ. ಪ್ರತಿಯೊಬ್ಬರಲ್ಲೂ ಕಾಯಕ ಪ್ರಜ್ಞೆ ಮುಖ್ಯ ಎಂದು ಹೇಳಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಕಲಾಪ್ರಕಾಶ ವೃಂದದ ಅಧ್ಯಕ್ಷ ರಮಣ್‌ಲಾಲ್ ಪಿ.ಸಂಘವಿ ಮಾತನಾಡಿ, ಕಾಯಕ ಜೀವಿಗಳನ್ನು ಗೌರವಿಸುವ ಕಾರ್ಯ ಪ್ರಶಂಸನೀಯ. ಸೇವಾದಳ ಭವನದಲ್ಲಿ ನಿರಂತರವಾಗಿ ಕಾರ್ಯ ಚಟುವಟಿಕೆ ಗಳು ನಡೆಯುವಂತೆ ನೋಡಿಕೊಳ್ಳುವಂತೆ ಸಂಘಟಕರಿಗೆ ಮನವಿ ಮಾಡಿದರು.

ಕದಳಿ ಮಹಿಳಾ ವೇದಿಕೆ ಜಿಲ್ಲಾಧ್ಯಕ್ಷರಾದ ವಿನೋದ ಅಜಗಣ್ಣನವರ್ ಮಾತನಾಡಿ, ರೈತ ಮತ್ತು ಯೋಧ ಈ ದೇಶದ ಬೆನ್ನೆಲುಬು. ರೈತರು ಬೆಳೆದರೆ ದೇಶ ಉಳಿಯಲು ಸಾಧ್ಯ. ಅದರಂತೆ ಯೋಧರು ಗಡಿಯಲ್ಲಿದ್ದು ರಕ್ಷಣೆ ಮಾಡುವುದರಿಂದಲೇ ಜನರು ನೆಮ್ಮದಿ ಜೀವನ ನಡೆಸಲು ಸಾಧ್ಯವಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಬಿಎಸ್‌ಎಫ್ ಅಸಿಸ್ಟೆಂಟ್ ಕಮಾಂಡೆಂಟ್ ಡಾ. ಮೃದುಲಾ ಎಂ. ಲಿಂಗರಾಜ್ ಅವರನ್ನೊಳಗೊಂಡಂತೆ ವಿವಿಧ ಕ್ಷೇತ್ರಗಳ ಕಾಯಕ ಜೀವಿಗಳಾದ ಕೆ.ಟಿ. ಗೋಪಲಗೌಡ್ರು, ಸುಲೋಚನಾ ಶ್ರೀಕುಮಾರ್ ಆನೆಕೊಂಡ, ಅಂಜಿನಪ್ಪ, ನಾಗರಾಜ್, ಶ್ರೀನಿವಾಸ್, ಆನಂದ್ ಮತ್ತಿತರರನ್ನು ಗೌರವಿಸಲಾಯಿತು.

ನಿವೃತ್ತ ಪ್ರಾಚಾರ್ಯ ಪರಶುರಾಮ್ ಖಟಾವ್ಕರ್, ನಿವೃತ್ತ ಶಿಕ್ಷಕ ಹೆಚ್.ಹನುಮಂತಪ್ಪ, ಶರಣ ಸಾಹಿತ್ಯ ಪರಿಷತ್ ನಗರ ಘಟಕದ ಅಧ್ಯಕ್ಷ ಎ. ಪರಮೇಶ್ವರಪ್ಪ ಸಿರಿಗೆರೆ ಮತ್ತಿತರರು ಉಪಸ್ಥಿತರಿದ್ದರು.

ಕದಳಿ ಮಹಿಳಾ ವೇದಿಕೆ ಸದಸ್ಯೆಯರು ಪ್ರಾರ್ಥಿಸಿದರು. ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ ಸ್ವಾಗತಿಸಿದರು. ಶಿಕ್ಷಕ ಕೆ.ಟಿ. ಜಯಪ್ಪ ನಿರೂಪಿಸಿದರು.

## 22 ರಿಂದ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆ

ಬೆಂಗಳೂರು, ಮೇ 3- ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಯು ಇದೇ ದಿನಾಂಕ 22 ರಿಂದ ಜೂ.2 ರವರೆಗೆ ನಡೆಯಲಿದೆ ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ ಅಧ್ಯಕ್ಷರು ತಿಳಿಸಿದ್ದಾರೆ.

ನಿಗದಿತ ದಿನಾಂಕಗಳಂದು ಬೆಳಿಗ್ಗೆ 10.15 ರಿಂದ 1.30 ರವರೆಗೆ, ಮಧ್ಯಾಹ್ನ 2.15 ರಿಂದ 5.30 ರವರೆಗೆ ಪರೀಕ್ಷೆಗಳು ನಡೆಯಲಿವೆ.

ಮೇ 22 ರಂದು ಕನ್ನಡ, ಅರೇಬಿಕ್, 23 ರಂದು ಐಚ್ಛಿಕ ಕನ್ನಡ, ರಸಾಯನಶಾಸ್ತ್ರ, ಮೂಲ ಗಣಿತ, 24 ರಂದು ಬೆಳಿಗ್ಗೆ ಇಂಗ್ಲಿಷ್, ಮಧ್ಯಾಹ್ನ ಮಾಹಿತಿ ತಂತ್ರಜ್ಞಾನ, ರೀಟೈಲ್, ಆಟೋಮೊಬೈಲ್, ಹೆಲ್ತ್‌ಕೇರ್, ಬ್ಯೂಟಿ ಅಂಡ್ ವೆಲ್‌ನೆಸ್, 25 ರಂದು ಸಮಾಜಶಾಸ್ತ್ರ, ವಿದ್ಯುನ್ಮಾನಶಾಸ್ತ್ರ, ಗಣಿತ ವಿಜ್ಞಾನ, 26 ರಂದು ಇತಿಹಾಸ, ಸಂಖ್ಯಾಶಾಸ್ತ್ರ, 27 ರಂದು ಬೆಳಿಗ್ಗೆ ಹಿಂದಿ ಮಧ್ಯಾಹ್ನ ತಮಿಳು,ತೆಲುಗು, ಮಲೆಯಾಳಂ, ಮರಾಠಿ, ಉರ್ದು, ಸಂಸ್ಕೃತ, ಫ್ರೆಂಚ್, 29 ರಂದು ಭೂಗೋಳಶಾಸ್ತ್ರ, ಮನಃಶಾಸ್ತ್ರ, ಭೌತಶಾಸ್ತ್ರ, 30 ರಂದು ಭೂಗರ್ಭಶಾಸ್ತ್ರ, ಶಿಕ್ಷಣಶಾಸ್ತ್ರ, ಗೃಹ ವಿಜ್ಞಾನ, 31 ರಂದು ರಾಜ್ಯಶಾಸ್ತ್ರ, ಗಣಿತಶಾಸ್ತ್ರ, ಜೂ. 1 ರಂದು ತರ್ಕಶಾಸ್ತ್ರ, ಹಿಂದೂಸ್ಥಾನಿ ಸಂಗೀತ, ವ್ಯವಹಾರ ಅಧ್ಯಯನ, ಜೂ. 2 ರಂದು ಅರ್ಥಶಾಸ್ತ್ರ, ಜೀವಶಾಸ್ತ್ರ ವಿಷಯಗಳಲ್ಲಿ ಪೂರಕ ಪರೀಕ್ಷೆಗಳು ನಡೆಯಲಿವೆ ಎಂದು ತಿಳಿಸಿದೆ.

## ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಮಾಡಿರುವ ಭಜರಂಗದಳ ನಿಷೇಧದ ಪ್ರಸ್ತಾಪ ಖಂಡನೀಯ



ಕೇವಲ ಅಲ್ಪಸಂಖ್ಯಾತರನ್ನು ಓಲೈಕೆ ಮಾಡುವ ಸಲುವಾಗಿ ಕಾಂಗ್ರೆಸ್ ಈ ರೀತಿ ಹೇಳಿಕೆ ನೀಡಿರುವುದು ದೇಶದ ಬಹುಸಂಖ್ಯಾತ ಹಿಂದೂ ಸಮುದಾಯಕ್ಕೆ ನೋವುಂಟು ಮಾಡಿದ್ದು, ಮೇ 10 ರಂದು ನಡೆಯುವ ಚುನಾವಣೆಯಲ್ಲಿ ರಾಜ್ಯದ ಜನತೆ ತಕ್ಕ ಉತ್ತರ ನೀಡಲಿದ್ದಾರೆ.

- ಹನಗವಾಡಿ ವೀರೇಶ್, ಅಧ್ಯಕ್ಷರು, ಜಿಲ್ಲಾ ಬಿಜೆಪಿ

ದಾವಣಗೆರೆ, ಮೇ 3- ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕೆಂಬ ಭರಾಟೆಯಲ್ಲಿ ತನ್ನ ಪ್ರಣಾಳಿಕೆಯಲ್ಲಿ ಬಜರಂಗದಳ ನಿಷೇಧದ ಪ್ರತಿಜ್ಞೆ ಮಾಡಿರುವ ಹೇಳಿಕೆ ಹಿಂದೂಗಳ ಭಾವನೆಗಳಿಗೆ ಧಕ್ಕೆ ಉಂಟು ಮಾಡಿದ್ದು, ಇದು ಅತ್ಯಂತ ಖಂಡನೀಯ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ರಾಜ್ಯದ ಅಭಿವೃದ್ಧಿ, ನೀರಾವರಿ ಸೇರಿದಂತೆ ಜನತೆಗೆ ಸಿಗಬೇಕಾದ ಸೌಲಭ್ಯ ಗಳನ್ನು ಕಲ್ಪಿಸಿಕೊಡುವ ಅಂಶಗಳನ್ನು ಪ್ರಣಾಳಿಕೆಯಲ್ಲಿ ಸೇರಿಸುವ ಮೂಲಕ ಮತ ಕೇಳಲಿ, ಅದನ್ನು ಬಿಟ್ಟು ಜಾತಿ ಆಧಾರಿತ, ಧರ್ಮ ಆಧಾರಿತವಾಗಿ ಮತ ಕೇಳುವುದು ಸರಿಯಲ್ಲ. ದೇಶ ರಕ್ಷಣೆ ಮಾಡುವ, ದೇಶಾ ಭಿಮಾನ, ದೇಶಪ್ರೇಮ ಮೂಡಿಸುವ ಬಜ ರಂಗ ದಳ ಸಂಘಟನೆಯನ್ನು ನಿಷೇಧಿಸಲು ಇಟಲಿಯ ಆದೇಶವೇನಾದರೂ ಇದೆಯಾ, ನಿಷೇಧ ಮಾಡಲು ಕಾರಣವೇನಾದರೂ ತಿಳಿಸಿ, ಯಾವುದಾದರೊಂದು ದೇಶದ್ರೋಹದ ಉದಾಹರಣೆಯಾದರು ತಿಳಿಸಿ ಎಂದು ಕಿಡಿಕಾರಿದರು.

ಕೇವಲ ಅಧಿಕಾರದ ಆಸೆಗಾಗಿ ಮನಬಂದಂತೆ ಹೇಳಿಕೆ ನೀಡುವುದನ್ನು ನಿಲ್ಲಿಸಲಿ. ಈ ನಾಡಿನ ಸಂಸ್ಕೃತಿ, ಪರಂಪರೆ, ಹಿಂದೂ ಸಂಪ್ರದಾಯಗಳು, ಪದ್ಧತಿಗಳ ಬಗ್ಗೆ ಗೊತ್ತಿಲ್ಲದೇ ಹೇಳಿಕೆ ನೀಡುವುದು ನಾಚಿಕೆಗೇಡಿನ ಸಂಗತಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈಗಾಗಲೇ ಸೋಲಿನ ಭೀತಿ ಅನುಭವಿಸುತ್ತಿರುವ ಕಾಂಗ್ರೆಸ್ ಜನತೆಗೆ ಸುಳ್ಳು ಭರವಸೆಗಳನ್ನು ಕೊಡುವ ಮೂಲಕ ಗೆಲ್ಲಲೇಬೇಕೆಂಬ ತವಕದಲ್ಲಿ ಇಂತಹ ಹೇಳಿಕೆ ನೀಡಿ, ಹಿಂದೂ ಜನತೆಗೆ ನೋವುಂಟು ಮಾಡಿದೆ.

ದೇಶರಕ್ಷಣೆಯ ಬಜರಂಗ ದಳ ಸಂಘಟನೆಯನ್ನು ದೇಶದ್ರೋಹಿ ಸಂಘಟನೆ ಯೊಂದಿಗೆ ಹೋಲಿಕೆ ಮಾಡುವುದು ಎಷ್ಟು ಸಮಂಜಸ ಎಂದು ಪ್ರಶ್ನಿಸಿದ ಅವರು, ಬಜರಂಗ ದಳ ನಿಷೇಧದ ಪ್ರಸ್ತಾಪವನ್ನು ಪ್ರಣಾಳಿಕೆಯಲ್ಲಿ ಮಾಡಿರುವುದು ಅತ್ಯಂತ ಖಂಡನೀಯ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್, ಜಿಲ್ಲಾ ವಕ್ತಾರ ಡಿ.ಎಸ್. ಶಿವಶಂಕರ್, ದೂಡಾ ಸದಸ್ಯ ಲಕ್ಷ್ಮಣ್, ಮಾಜಿ ಮೇಯರ್ ಎಸ್.ಟಿ. ವೀರೇಶ್, ಗುಜರಾತಿನ ಶಾಸಕ ಕಾಂತಿಭಾಯ್ ಮೋರ್ಬಿ, ವಿಶ್ವಾಸ್ ಮತ್ತಿತರರು ಉಪಸ್ಥಿತರಿದ್ದರು.

## 'ಭಜರಂಗ ದಳ' ಬ್ಯಾನ್ ಆಗಲ್ಲ, ರಾಜ್ಯದಲ್ಲಿ ಕಾಂಗ್ರೆಸ್ ನಿರ್ನಾಮ



ಕಾಂಗ್ರೆಸ್ ವರ್ತನೆಗೆ ಬಾಡಾದ ಆನಂದರಾಜ್ ಖಂಡನೆ

ದಾವಣಗೆರೆ, ಮೇ 3- ಭಾವನೆ, ಸಂಸ್ಕೃತಿ ಸಂಪ್ರದಾಯಕ್ಕೆ ವಿರುದ್ಧವಾಗಿ ಧರ್ಮವನ್ನು ಮುಂದಿಟ್ಟುಕೊಂಡು ರಾಜಕೀಯ ಮಾಡುವಂತಹ ಪರಿಸ್ಥಿತಿಗೆ ಕಾಂಗ್ರೆಸ್ ಬಂದಿದೆ ಎಂದು ಜಿಲ್ಲಾ ಶೋಷಿತ ವರ್ಗಗಳ ಮುಖಂಡ ಬಾಡದ ಆನಂದರಾಜು ಕಿಡಿ ಕಾರಿದ್ದಾರೆ.

ಧರ್ಮ, ದೇಶ, ಸಂಸ್ಕೃತಿ ಉಳಿಸುವ ಬಜರಂಗ ದಳ ನಿಷೇಧ ಮಾಡಿದರೆ ಕಾಂಗ್ರೆಸ್‌ಗೆ ಯಾವುದೇ ಲಾಭವಿಲ್ಲ. ಸೋಲಿನ ಭಯದಿಂದ ಕಾಂಗ್ರೆಸ್ ಧರ್ಮವನ್ನು ಅಸ್ತ್ರವನ್ನಾಗಿ ಪ್ರಯೋಗಿಸುತ್ತಿದೆ. ಇದು ಪ್ರಯೋಜನವಾಗಲ್ಲ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ನಾವು ಬಡವರ ಪರ ಎನ್ನುವ ಕಾಂಗ್ರೆಸ್ ಹಿಂದೂ ಸಂಘಟನೆಗಳನ್ನು ಟಾರ್ಗೆಟ್ ಮಾಡಿಕೊಂಡು ಚುನಾವಣೆಯಲ್ಲಿ ಗೆಲ್ಲು ತ್ತೇವೆ ಎಂಬ ಹಗಲು ಕನಸು ಕಾಣುತ್ತಿದೆ. ಇದ ರಿಂದ ಕಾಂಗ್ರೆಸ್ ಎಲ್ಲಾ ಕಡೆ ಸೋಲುತ್ತದೆ. ಬಿಜೆಪಿ ಎಂದೂ ಜಾತಿ ರಾಜಕಾರಣ ಮಾಡಿಲ್ಲ. ಕಾಂಗ್ರೆಸ್ ಜಾತಿ ಮೇಲೆ ರಾಜಕೀಯ ಮಾಡಲು ಮುಂದಾಗಿದೆ. ಜೊತೆಗೆ ಧರ್ಮವನ್ನು ಮುಂದಿಟ್ಟುಕೊಳ್ಳಲು ಯತ್ನಿಸುತ್ತಿದೆ. ರಾಜ್ಯದ ಜನರ ಭಾವನೆಗಳಿಗೆ ಧಕ್ಕೆ ತರಲು ಮುಂದಾಗುತ್ತಿದೆ ಎಂದು ಅವರು ಹೇಳಿದ್ದಾರೆ. ಬಿಜೆಪಿ ಎಂದೂ ಧರ್ಮ, ಜಾತಿ ಮೇಲೆ ಟಿಕೆಟ್ ನೀಡಿಲ್ಲ. ಯೋಗ್ಯತೆ ಮೇಲೆ ಕೆಲವ ರಿಗೆ ಟಿಕೆಟ್ ನೀಡಿದೆ. ಸಾಮಾನ್ಯ ವ್ಯಕ್ತಿ ಹಾಗೂ ಸಾಮಾನ್ಯ ಕಾರ್ಯಕರ್ತನ ಪರ ಇಡೀ ದಾವಣಗೆರೆ ಜನರು ಪ್ರಚಾರ ಮಾಡುತ್ತಿದ್ದಾರೆ. ಧರ್ಮ ಮತ್ತು ದೇಶಭಕ್ತ ಸಂಘಟನೆಗಳನ್ನು ನಿಷೇಧ ಮಾಡಿದರೆ, ಮೇ 10ರ ನಂತರ ಕಾಂಗ್ರೆಸ್ ಮುಕ್ತ ಕರ್ನಾಟಕವಾಗಿ ಜನರೇ ಮಾಡುತ್ತಾರೆ ಎಂದು ಆನಂದರಾಜು ಟಾಂಗ್ ನೀಡಿದ್ದಾರೆ.

# ಬಿಜೆಪಿ ಬ್ರಹ್ಮಾಂಡ ಭ್ರಷ್ಟಾಚಾರದಿಂದ ಬೇಸತ್ತು ಬದಲಾವಣೆ ಬಯಸಿರುವ ಜನತೆ



### 17ನೇ ವಾರ್ಡಿನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಬಿರುಸಿನ ಪ್ರಚಾರದಲ್ಲಿ ಉತ್ತರದ ಕಾಂಗ್ರೆಸ್ ಅಭ್ಯರ್ಥಿ ಎಸ್.ಎಸ್.ಮಲ್ಲಿಕಾರ್ಜುನ್

ದಾವಣಗೆರೆ, ಮೇ 3- ರಾಜ್ಯ ಬಿಜೆಪಿ ಸರ್ಕಾರದ ಬ್ರಹ್ಮಾಂಡ ಭ್ರಷ್ಟಾಚಾರದಿಂದ ಬೇಸತ್ತಿರುವ ಜನತೆ ಬದಲಾವಣೆ ಬಯಸಿದ್ದಾರೆ ಎಂದು ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಸ್.ಎಸ್. ಮಲ್ಲಿಕಾರ್ಜುನ್ ಅಭಿಪ್ರಾಯಪಟ್ಟರು.

17ನೇ ವಾರ್ಡಿನಲ್ಲಿರುವ ಶ್ರೀ ಗುಳ್ಳಮ್ಮ ದೇವಸ್ಥಾನದಲ್ಲಿ ಇಂದು ಬೆಳಿಗ್ಗೆ ಪೂಜೆ ಸಲ್ಲಿಸುವ ಮೂಲಕ ಪ್ರಚಾರ ಆರಂಭಿಸಿದರು. ಕಾರ್ಯಕರ್ತರು ಮಲ್ಲಿಕಾರ್ಜುನ್ ಅವರನ್ನು ಅದ್ಧೂರಿಯಾಗಿ ಸ್ವಾಗತಿಸಿದರು. ಪಕ್ಷದ ಮುಖಂಡರು, ಕಾರ್ಯಕರ್ತರು ಮತ್ತು ಅಭಿಮಾನಿಗಳ ಜೊತೆಗೂಡಿ ಪಿಸಾಳೆ ಕಾಂಪೌಂಡ್ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಂಚರಿಸಿ ಮತ ಯಾಚಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಬಿಜೆಪಿಯ ಆಡಳಿತದಿಂದ ಬೇಸತ್ತು ನೊಂದಿರುವ ಜನತೆ ಬದಲಾವಣೆ ಬಯಸಿದ್ದಾರೆ. ಹಾಗಾಗಿ ಜನ ಕಾಂಗ್ರೆಸ್ ಪಕ್ಷಕ್ಕೆ ಆಶೀರ್ವಾದ ಮಾಡುತ್ತಾರೆ ಎಂಬ ಸಂಪೂರ್ಣ ನಂಬಿಕೆ, ಭರವಸೆ ತಮಗೆ ಇದೆ ಎಂದರು.

ಬಿಜೆಪಿ ಸುಳ್ಳುಗಾರರ ಪಕ್ಷ, ಭ್ರಷ್ಟಾಚಾರಿಗಳ ಪಕ್ಷ. ಆ ಪಕ್ಷಕ್ಕೆ ಜನರ ಹಿತ, ಶಾಂತಿ, ನೆಮ್ಮದಿ ಬೇಕಾಗಿಲ್ಲ, ಬರಿ ಅಧಿಕಾರ ಒಂದೇ ಬೇಕಾಗಿದೆ. ಹಾಗಾಗಿಯೇ ಈ ಬಾರಿ ಬಿಜೆಪಿಯನ್ನು ಸೋಲಿಸುವ ನಿರ್ಧಾರವನ್ನು ಈ ನಾಡಿನ ಮತದಾರ ಪ್ರಭುಗಳು ಮಾಡಿದ್ದಾರೆ ಎಂದು ಅವರು ಹೇಳಿದರು.

ದಾವಣಗೆರೆ ಜಿಲ್ಲೆಯ ಎಲ್ಲಾ ಏಳು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳೇ ಬಹುಮತದಿಂದ ಗೆಲ್ಲಲಿದ್ದಾರೆ ಎಂದು ಪುನರುಚ್ಚರಿಸಿದ ಮಲ್ಲಿಕಾರ್ಜುನ್, ಕಳೆದ ಐದು ವರ್ಷಗಳಿಂದ ಯಾವುದೇ ಅಭಿವೃದ್ಧಿ ಕಾರ್ಯಗಳು ಜಿಲ್ಲೆಯಲ್ಲಿ ಆಗಿಲ್ಲ. ರೈತರು ಮತ್ತು ಜನಸಾಮಾನ್ಯರ ಸಮಸ್ಯೆಗಳನ್ನು ಪರಿಹರಿಸಬೇಕಾಗಿದೆ. ನೀರಾವರಿ ಯೋಜನೆಗಳು ಸೇರಿದಂತೆ, ಸಾಕಷ್ಟು ಯೋಜನೆಗಳನ್ನು ತಂದು ಜಿಲ್ಲೆಯನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಬೇಕಾಗಿದೆ ಎಂದು ಹೇಳಿದರು.

ಅಲ್ಲದೆ ಕೃಷಿ ಉತ್ಪನ್ನಗಳ ಬೆಲೆ ಆಯೋಗವನ್ನು ಸ್ಥಾಪಿಸುವಲ್ಲಿ ಮುಂದಾಗಿ ರೈತರು ಬೆಳೆದ ಬೆಳೆಗೆ ಉತ್ತಮ ಬೆಲೆಯನ್ನು ನೀಡುವುದರ ಮೂಲಕ ಅವರ ಆರ್ಥಿಕ ಸ್ಥಿತಿ ಸುಧಾರಿಸುವ ನಿಟ್ಟಿನಲ್ಲಿ ಯೋಜನೆ ರೂಪಿಸಿದ್ದು, ಆ ಎಲ್ಲ ಯೋಜನೆಗಳನ್ನು ಸಾಕಾರಗೊಳಿಸಲು ರಾಜ್ಯದ ಜನತೆಯ ಶಕ್ತಿಯ ಬಲಬೇಕು. ಕಾಂಗ್ರೆಸ್ ಪಕ್ಷ ಯಾವತ್ತೂ ಕೊಟ್ಟ ಮಾತಿಗೆ ತಪ್ಪಿಲ್ಲ. ಈ ಚುನಾವಣೆಯಲ್ಲಿ ಮತದಾರರು ಕಾಂಗ್ರೆಸ್ ಪಕ್ಷಕ್ಕೆ ಆಶೀರ್ವಾದ ಮಾಡುವ ಮೂಲಕ ಅಧಿಕಾರ ನಡೆಸುವ ಶಕ್ತಿಯನ್ನು ನೀಡಬೇಕೆಂದು ಎಸ್ಸೆಸ್ಸೆಂ ಮನವಿ ಮಾಡಿದರು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ವಾರ್ಡ್ ಅಧ್ಯಕ್ಷ ಮಧು ಪವಾರ್, ಮುಖಂಡರಾದ ಪಂಚಪ್ಪ ತೆರದಾಳ್, ವಾಟಾಳ್ ನಾಗರಾಜ್, ರಾಜು ಚವ್ಹಾಣ್, ಗುರುರಾಜ್, ಜಗದೀಶ್ ಕುಮಾರ್, ರವಿ ಗಾಂಧಿ, ವೆಂಕಟೇಶ್, ಪರಶುರಾಮ್, ಸಂತೋಷ್, ಲತಿಕಾ ದಿನೇಶ್ ಶೆಟ್ಟಿ, ಬೀನಾ, ಅಶ್ವಿನಿ ಸಾವಂತ್, ರಂಗಣ್ಣ ಜೊಳ್ಳಿ, ಪರಶುರಾಮ್ ಕನ್ನವರ, ಆರ್. ಲಲಿತಾ, ಗೀತಾ ಜೆ, ಸಹನ, ಸರಳ, ರಾಗಿಣಿ, ಅಂಬಿಕಾ, ಪಾರ್ವತಿ, ಯುವರಾಜ್, ಸಿರಿಲ್, ಸಚಿನ್, ಗಗನ್ ಮತ್ತಿತರರು ಈ ಸಂದರ್ಭದಲ್ಲಿ ಹಾಜರಿದ್ದರು.

# ಮನೆ ಬಾಗಿಲಿಗೆ ಬಂದು ಸೇವೆ ನೀಡುವ ಅಭ್ಯರ್ಥಿಯನ್ನು ಆಯ್ಕೆ ಮಾಡಲು ಕರೆ



### ಉತ್ತರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಪರ 35ನೇ ವಾರ್ಡ್‌ನಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ ಮತ ಯಾಚನೆ

ದಾವಣಗೆರೆ, ಮೇ 3- ಮನೆ ಬಾಗಿಲಿಗೇ ಬಂದು ಸೇವಾ ಸೌಲಭ್ಯ ನೀಡುವಂತಹ ಅಭ್ಯರ್ಥಿ ಪರ ಮತ ನೀಡಬೇಕು ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಕರೆ ನೀಡಿದರು.

ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಅವರ 35ನೇ ವಾರ್ಡ್ ನಿಟ್ಟುವಳ್ಳಿ ಲೆನಿನ್ ನಗರದಲ್ಲಿನ ಮತ ಪ್ರಚಾರಕ್ಕೆ ಶ್ರೀ ದುರ್ಗಾಂಬಿಕ ದೇವಿ ದೇವಸ್ಥಾನದಿಂದ ಚಾಲನೆ ನೀಡಿ ಅವರು ಮತ ಯಾಚಿಸಿದರು.

ಈ ವೇಳೆ ಮತದಾರರನ್ನುದ್ದೇಶಿಸಿ ಮಾತನಾಡಿದ ಸಿದ್ದೇಶ್ವರ ಅವರು, ಮನೆ ಬಳಿ ಕಾಯಿಸುವ ಬದಲಿಗೆ ಮನೆ ಬಾಗಿಲಿಗೇ ಬಂದು ಜನ ಸೇವೆ ನೀಡುವ ಜವಾಬ್ದಾರಿಯುತ ನಾಯಕರಿಗೆ ಅಮೂಲ್ಯವಾದ ಮತ ಚಲಾಯಿಸಬೇಕು. ಹೀಗೆ ಮನೆ ಬಾಗಿಲಿಗೆ ನಿಮ್ಮ ಸೇವೆ ನೀಡುವ ಮಹದಾಸೆ ಹೊತ್ತು ಬಿಜೆಪಿ ಪಕ್ಷದ ದಕ್ಷಿಣದಲ್ಲಿ ಬಿ.ಜಿ. ಅಜಯ್ ಕುಮಾರ್ ಮತ್ತು ಉತ್ತರದಲ್ಲಿ ನಾಗರಾಜ್ ಲೋಕಿಕೆರೆ ಅವರಿಗೆ ಮತ ನೀಡಿ ಎಂದು ಹೇಳಿದರು. ಬಿಜೆಪಿ ಡಬಲ್ ಇಂಜಿನ್ ಸರ್ಕಾರ ಅನೇಕ ಜನಪರ ಯೋಜನೆಗಳನ್ನು ಜಾರಿಗೆ ತಂದಿದ್ದು, ನಮ್ಮ ಸರ್ಕಾರಗಳ ಸಾಧನೆಗಳ ಗುರುತಿಸಿ ಕಮಲದ ಗುರುತಿಗೆ ಮತ ನೀಡಿ ನಮ್ಮ ಪಕ್ಷದ ಅಭ್ಯರ್ಥಿಗಳನ್ನು ಬೆಂಬಲಿಸಿ ನಿಮ್ಮ ಸೇವೆ ನೀಡುವ ಅವಕಾಶ ನೀಡಬೇಕೆಂದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್, ಮುಖಂಡರುಗಳಾದ ಹೇಮಂತ ಕುಮಾರ್, ಶಿವರಾಜ್ ಪಾಟೀಲ್, ಹೆಚ್.ಎನ್. ಶಿವಕುಮಾರ್, ಜಿಲ್ಲಾ ಬಿಜೆಪಿ ದಕ್ಷಿಣ ಮಂಡಲ ಅಧ್ಯಕ್ಷ ಸಂಗನಗೌಡ್ರು ಸೇರಿದಂತೆ ಇತರರು ಸಾಥ್ ನೀಡಿದ್ದರು.

## ಕಾಂಗ್ರೆಸ್ ಅಭ್ಯರ್ಥಿ ಎಸ್ಸೆಸ್ ಪರ ಇಂದು ಕನ್ನಯ್ಯಕುಮಾರ್ ರೋಡ್ ಶೋ



ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಶಾಸಕ ಶಾಮನೂರು ಶಿವಶಂಕರಪ್ಪ ಅವರ ಪರವಾಗಿ ಕಾಂಗ್ರೆಸ್ ಪಕ್ಷದ ಸ್ಟಾರ್ ಪ್ರಚಾರಕ ಕನ್ನಯ್ಯಕುಮಾರ್ ಅವರು ಇಂದು ಬೆಳಿಗ್ಗೆ 11 ರಿಂದ ಅರಳಿಮರ ಸರ್ಕಲ್‌ನಿಂದ ಹಳೇ ಬೇತೂರು ರಸ್ತೆ, ಮದೀನಾ ಸರ್ಕಲ್, ಆಜಾದ್ ನಗರ ಮುಖ್ಯರಸ್ತೆ, ಬಾಷಾನಗರ ಮೂಲಕ ಅಖ್ತರ್ ರಜಾ ಸರ್ಕಲ್ ವರೆಗೆ ರೋಡ್ ಶೋ ಮೂಲಕ ತೆರಳಿ ಮತಯಾಚಿಸುವರು.

ನಂತರ ಬೂದಾಳ್ ರಸ್ತೆಯ ಗೋಲ್ಡನ್ ಪ್ಯಾಲೇಸ್‌ನಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಯೂಬ್ ಪೈಲ್ವಾನ್ ಅಧ್ಯಕ್ಷತೆಯಲ್ಲಿ ಜರುಗುವ ಪ್ರಚಾರ ಸಭೆಯಲ್ಲಿ ಭಾಗವಹಿಸುವರು ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ತಿಳಿಸಿದ್ದಾರೆ.

## ನಗರದ ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಳೆ ವಿಶೇಷ ಪೂಜೆ



ದಾವಣಗೆರೆ, ಮೇ 3- ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ದವನದ ಹುಣ್ಣಿಮೆ ಪ್ರಯುಕ್ತ ನಾಡಿದ್ದು ದಿನಾಂಕ 5ರ ಶುಕ್ರವಾರ ನವಗ್ರಹ ಹೋಮ, ಶ್ರೀ ಸತ್ಯನಾರಾಯಣ ಸ್ವಾಮಿ ಪೂಜಾ ಕಥಾ, ಪ್ರಧಾನ ದೇವತೆ ಶ್ರೀ ಮಾತಾ ಅನ್ನ ಪೂರ್ಣೇಶ್ವರಿಗೆ ಮಹಾಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ.


ಶ್ರೀಮತಿ ರೇಷ್ಮಾ ಅವಿನಾಶ್ ಹಾಗೂ ಸಕುಟುಂಬದವರು ಪೂಜಾ ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

## ಮೇ 10, ಸಾರ್ವತ್ರಿಕ ರಜೆ ಘೋಷಣೆ

ಬೆಂಗಳೂರು, ಮೇ 3- ವಿಧಾನಸಭೆ ಚುನಾವಣೆ ನಡೆಯುವ ಹಿನ್ನೆಲೆಯಲ್ಲಿ ಮತದಾರರು ಮತ ಚಲಾಯಿಸಲು ಅನುಕೂಲವಾಗುವಂತೆ ಆಯಾ ಮತ ಕ್ಷೇತ್ರಗಳ ಎಲ್ಲಾ ಕೇಂದ್ರ, ಹಾಗೂ ರಾಜ್ಯ ಸರ್ಕಾರಿ ಕಛೇರಿಗಳಿಗೆ, ಶಾಲಾ-ಕಾಲೇಜುಗಳಿಗೆ, ವಿವಿಧ ಸಂಘ, ಸಂಸ್ಥೆಗಳಿಗೆ ಸರ್ಕಾರವು ಮೇ 10ರಂದು ಸಾರ್ವತ್ರಿಕ ರಜಾ ದಿನವನ್ನಾಗಿ ಘೋಷಿಸಿದೆ.

ಈ ರಜೆಯು ತುರ್ತು ಸೇವೆ ಮತ್ತು ಚುನಾವಣಾ ಕಾರ್ಯಗಳಿಗೆ ನಿಯೋಜಿಸಲ್ಪಟ್ಟ ನೌಕರರಿಗೆ ಅನ್ವಯಿಸುವುದಿಲ್ಲ ಎಂದು ಸರ್ಕಾರದ ಅಧೀನ ಕಾರ್ಯದರ್ಶಿ ಅಧಿಸೂಚನೆ ಹೊರಡಿಸಿರುತ್ತಾರೆ.

## ರಸ್ತೆ ಅಪಘಾತದಲ್ಲಿ ಲೆಕ್ಕಪರಿಶೋಧಕ ವಿ.ಎಸ್. ಅರುಣಾಚಲ ಶೆಟ್ರು ನಿಧನ



ಜಗಳೂರು, ಮೇ 3- ತಾಲ್ಲೂಕಿನ ಬಿಳಿಚೋಡು ಹೋಬಳಿಯ ನರೇನಹಳ್ಳಿ ಬಳಿ ಇಂದು ಸಂಜೆ 5 ಗಂಟೆ ಸುಮಾರಿಗೆ ಖಾಸಗಿ ಬಸ್ ಮತ್ತು ಕಾರಿನ ಮಧ್ಯೆ ನಡೆದ ರಸ್ತೆ ಅಪಘಾತದಲ್ಲಿ ದಾವಣಗೆರೆಯ ಹಿರಿಯ ಲೆಕ್ಕ ಪರಿಶೋಧಕರೂ, ವಕೀಲರೂ ಆದ ವಿ.ಎಸ್. ಅರುಣಾಚಲ ಶೆಟ್ಟಿ (72) ಅವರು ಮೃತಪಟ್ಟಿದ್ದು, ಮೂವರ ಸ್ಥಿತಿ ಗಂಭೀರವಾಗಿದೆ.

ದಾವಣಗೆರೆ ತಾಲ್ಲೂಕಿನ ಶಾಸ್ತ್ರಿಹಳ್ಳಿಯ ಶ್ರೀ ಮಾತಾ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷರೂ ಆಗಿದ್ದ ವಿ.ಎಸ್. ಅರುಣಾಚಲಶೆಟ್ಟಿ ಅವರು ತಮ್ಮ ಕುಟುಂಬದೊಂದಿಗೆ ಉಜ್ಜಯಿನಿಯ ದೇವಸ್ಥಾನಕ್ಕೆ ತೆರಳಿ, ಪೂಜೆ ಸಲ್ಲಿಸಿ ವಾಪಸ್ ಬರುವಾಗ ಖಾಸಗಿ ಬಸ್ ಮತ್ತು ಕಾರು ಮುಖಾಮುಖಿ ಡಿಕ್ಕಿಯಾದ ಪರಿಣಾಮ ಈ ದುರಂತ ನಡೆದಿದೆ.

ಗಾಯಗೊಂಡಿರುವ ಮೂವರನ್ನು ದಾವಣಗೆರೆ ಮತ್ತು ಜಗಳೂರು ಪಟ್ಟಣದ ಆಸ್ಪತ್ರೆಗಳಿಗೆ ಹೆಚ್ಚಿನ ಚಿಕಿತ್ಸೆಗೆ ದಾಖಲಿಸಲಾಗಿದೆ. ಬಸ್‌ನಲ್ಲಿದ್ದ ಒಬ್ಬ ಪ್ರಯಾಣಿಕನಿಗೂ ಗಾಯವಾಗಿದೆ.

ಬಿಳಿಚೋಡು ಸಿಪಿಐ ಸೋಮಶೇಖರ್ ಸ್ಥಳಕ್ಕೆ ಭೇಟಿ ನೀಡಿದ್ದು, ಪ್ರಕರಣ ದಾಖಲಿಸಿಕೊಂಡಿದ್ದಾರೆ.

# ಅಭಿವೃದ್ಧಿ ಪರ್ವ, ಜನಪರ ಬದಲಾವಣೆಗಾಗಿ ಬಿ.ಜಿ. ಅಜಯ್ ಕುಮಾರ್ ಗೆಲ್ಲಿಸಲು ಕರೆ




### ಹದಡಿ ಗ್ರಾಮದಲ್ಲಿ ಕೇಂದ್ರ ಸಚಿವ ಮನ್ಸುಕ್ ಮಾಂಡವೀಯ ಮತ ಸಂಚಾರ

ದಾವಣಗೆರೆ, ಮೇ 3- ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಿ.ಜಿ. ಅಜಯ್ ಕುಮಾರ್ ಅವರ ಪರ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ. ಮನ್ಸುಕ್ ಮಾಂಡವೀಯ ಅವರು ಗ್ರಾಮೀಣ ಭಾಗದಲ್ಲಿ ಬಿರುಸಿನ ಪ್ರಚಾರ ನಡೆಸಿದರು.

ಹದಡಿ ಗ್ರಾಮ ಸುತ್ತ ಮುತ್ತ ಅಜಯ್ ಕುಮಾರ್ ಅವರ ಪರ ರೋಡ್ ಶೋ ನಡೆಸಿ ಅಜಯ್ ಕುಮಾರ್ ಅವರನ್ನು ಬೆಂಬಲಿಸುವಂತೆ ಮತಯಾಚಿಸಿದರು. ಈ ವೇಳೆ ಮತದಾರರ ಉದ್ದೇಶಿಸಿ ಮಾತನಾಡಿ, ದಕ್ಷಿಣ ಕ್ಷೇತ್ರದಲ್ಲಿನ ಅಭಿವೃದ್ಧಿ ಪರ್ವ ಮತ್ತು ಜನಪರ ಬದಲಾವಣೆಗಾಗಿ ಬಿಜೆಪಿ ಅಭ್ಯರ್ಥಿ ಅಜಯ್ ಕುಮಾರ್ ಅವರನ್ನು ಗೆಲ್ಲಿಸುವಂತೆ ಮನವಿ ಮಾಡಿದರು.

**ಒಟ್ಟು 14 ಹಳ್ಳಿಗಳಲ್ಲಿ ಮತ ಸಂಚಾರ :** ಬೆಳಗ್ಗೆ ಮತ್ತು ರಾತ್ರಿ ಒಟ್ಟು 14 ಹಳ್ಳಿಗಳಲ್ಲಿ ಅಜಯ್ ಕುಮಾರ್ ಅವರು ಸಂಚಾರ ನಡೆಸಿ, ಮತ ಯಾಚಿಸಿದರು.

ಕನಗೊಂಡನಹಳ್ಳಿ, ಬಲ್ಲೂರು, ಶಿರಗಾನಹಳ್ಳಿ, ಬಲ್ಲೂರು ಹೊಸ ಬಡಾವಣೆ, ಜಡಗನಹಳ್ಳಿ, ನಾಗರಸನಹಳ್ಳಿ, ಹಳೇ ಕೋಳೇನಹಳ್ಳಿ, ಹೊಸ ಕೋಳೇನಹಳ್ಳಿ, ಕುಕ್ಕುವಾಡ, ಭಗೀರಥನಗರ, ಜವಳಘಟ್ಟ, ತರಳಬಾಳು ನಗರ, ಮಹಾದೇವಪುರ ಗ್ರಾಮಗಳಲ್ಲಿ ಪ್ರಚಾರದ ಮೂಲಕ ಮನೆ ಮನೆ ಸಂಪರ್ಕ ಮತಯಾಚನೆ ಮಾಡಿದರು.

ಸಂಸದ ಜಿ.ಎಂ.ಸಿದ್ದೇಶ್ವರ ಅವರ ಪುತ್ರ ಜಿ.ಎಸ್.ಅನಿತ್ ಕುಮಾರ್, ರಾಜನಹಳ್ಳಿ ಶಿವಕುಮಾರ್, ಕೋಳೇನಹಳ್ಳಿ ಸತೀಶ್, ವೀರೇಂದ್ರ ಪಾಟೀಲ್, ಶ್ರೀನಿವಾಸ್ ದಾಸಕರಿಯಪ್ಪ, ರುದ್ರೇಗೌಡ, ಬಿಜೆಪಿ ನಿಕಟ ಪೂರ್ವ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್, ದಕ್ಷಿಣ ಮಂಡಲ ಅಧ್ಯಕ್ಷ ಆನಂದರಾವ್ ಶಿಂಧೆ ಸೇರಿದಂತೆ ಇತರರು ಅಜಯ್ ಕುಮಾರ್ ಅವರಿಗೆ ಸಾಥ್ ನೀಡಿದ್ದರು.

# ಸಿಬಿಐ ಇತಿಹಾಸದಲ್ಲೇ ಅತಿ ಹೆಚ್ಚಿನ ನಗದು ವಶ

### ವಾಪ್ಕೋಸ್ ಸಂಸ್ಥೆಯ ಮಾಜಿ ಅಧ್ಯಕ್ಷರ ಮನೆಯಲ್ಲಿ 38 ಕೋಟಿ ರೂ. ಪತ್ತೆ

ನವದೆಹಲಿ, ಮೇ 3 – ವಾಪ್ಕೋಸ್ ಸಂಸ್ಥೆಯ ಮಾಜಿ ಅಧ್ಯಕ್ಷ ರಾಜಿಂದರ್ ಕುಮಾರ್ ಗುಪ್ತ ಹಾಗೂ ಅವರ ಪುತ್ರ ಗೌರವ್ ಮನೆಯಿಂದ 38.38 ಕೋಟಿ ರೂ. ನಗದು ವಶಪಡಿಸಿಕೊಂಡಿರುವ ಸಿ.ಬಿ.ಐ., ಉಭಯರನ್ನು ಬಂಧಿಸಿದೆ. ಸಿ.ಬಿ.ಐ. ಇತಿಹಾಸದಲ್ಲೇ ಇಷ್ಟೊಂದು ಹಣ ವಶಪಡಿಸಿಕೊಂಡಿರುವುದು ಇದೇ ಮೊದಲು.

ವಾಪ್ಕೋಸ್ ಮೊದಲು ವಾಟರ್ ಅಂಡ್ ಪವರ್ ಕನ್ಸಲ್ಟೆನ್ಸಿ ಸರ್ವೀಸಸ್ ಎಂಬ ಹೆಸರು ಹೊಂದಿತ್ತು. ಇದು ಸಾರ್ವಜನಿಕ ವಲಯದ ಕಂಪನಿಯಾಗಿದ್ದು, ಕೇಂದ್ರ ಜಲ ಶಕ್ತಿ ಸಚಿವಾಲಯದ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತದೆ.

ಗುಪ್ತ, ಪತ್ನಿ ರೀಮಾ ಸಿಂಗಲ್, ಪುತ್ರ ಗೌರವ್ ಸಿಂಗಲ್ ಹಾಗೂ ಸೊಸೆ ಕೋಮಲ್ ಸಿಂಗಲ್ ಅವರು ಅಕ್ರಮವಾಗಿ 7.91 ಕೋಟಿ ರೂ. ಆಸ್ತಿ ಗಳಿಸಿದ್ದಾರೆ ಎಂದು ಸಿ.ಬಿ.ಐ. ಪ್ರಕರಣ ದಾಖಲಿಸಿಕೊಂಡು ದಾಳಿ ನಡೆಸಿತ್ತು.

ದೆಹಲಿ ಸೇರಿದಂತೆ ದೇಶದ ವಿವಿಧೆಡೆಯ 19 ತಾಣಗಳಲ್ಲಿ ದಾಳಿ ನಡೆಸಲಾಗಿತ್ತು. ಮಂಗಳವಾರ 20 ಕೋಟಿ ರೂ. ನಗದು ವಶಪಡಿಸಿಕೊಳ್ಳಲಾಗಿತ್ತು. ಬುಧವಾರದ ವೇಳೆಗೆ ಈ ಪ್ರಮಾಣ 38.38 ಕೋಟಿ ರೂ.ಗಳಿಗೆ ಏರಿಕೆಯಾಗಿದೆ. ನಗದಿನ ಜೊತೆಗೆ ಗಣನೀಯ ಪ್ರಮಾಣದ ಆಭರಣ, ಅಮೂಲ್ಯ ವಸ್ತುಗಳು ಹಾಗೂ ಆಸ್ತಿ ದಾಖಲೆಗಳನ್ನು ವಶಪಡಿಸಿಕೊಂಡಿರುವುದಾಗಿ ಸಿಬಿಐ ವಕ್ತಾರರು ತಿಳಿಸಿದ್ದಾರೆ.

## ನಗರದಲ್ಲಿ ಇಂದು

ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಪ್ರಾಜೆಕ್ಟ್ ಎಕ್ಸ್‌ಪೋ ಇಂದು ನಡೆಯಲಿದೆ. ಅತಿಥಿಗಳು : ಡಾ. ಎಸ್.ಬಿ. ಮಲ್ಲೂರ್ (ಪ್ರೊಫೆಸರ್, ಮೆಕ್ಯಾನಿಕಲ್, ಇಂಜಿನಿಯರಿಂಗ್ ವಿಭಾಗ, ಯುಬಿಡಿಟಿಇ ದಾವಣಗೆರೆ)

## ತಿಪ್ಪೇಸ್ವಾಮಿ, ರಾಜ್ಯ ಕಾಂಗ್ರೆಸ್ ಇಂಟಕ್ ವಿಭಾಗದ ಕಾರ್ಯದರ್ಶಿ



ದಾವಣಗೆರೆ, ಮೇ 3- ಕರ್ನಾಟಕ ರಾಜ್ಯ ಕಾಂಗ್ರೆಸ್ ಇಂಟಕ್ ವಿಭಾಗದ ಕಾರ್ಯ ದರ್ಶಿಯನ್ನಾಗಿ ನಗರದ ಆರ್.ಎಸ್. ತಿಪ್ಪೇಸ್ವಾಮಿ ಅವರನ್ನು ನೇಮಕ ಮಾಡಲಾಗಿದೆ ಎಂದು ರಾಷ್ಟ್ರೀಯ ಮಜ್ದೂರ್ ಕಾಂಗ್ರೆಸ್ ರಾಜ್ಯ ಶಾಖೆ ಅಧ್ಯಕ್ಷ ಡಿ. ಲಕ್ಷ್ಮಿ ವೆಂಕಟೇಶ್ ತಿಳಿಸಿದ್ದಾರೆ.

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಇಂಟಕ್ ವಿಭಾಗದ ಅಧ್ಯಕ್ಷ ಡಾ. ಜಿ. ಸಂಜೀವ್ ರೆಡ್ಡಿ ಅವರ ಆದೇಶ ಹಾಗೂ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಅನುಮೋದನೆ ಮೇರೆಗೆ ಈ ನೇಮಕ ಮಾಡಲಾಗಿದೆ.

## ವಿಶ್ವ ಬ್ಯಾಂಕ್ ಅಧ್ಯಕ್ಷರಾಗಲಿರುವ ಭಾರತೀಯ ಮೂಲದ ಅಜಯ್ ಬಂಗ



ನವದೆಹಲಿ, ಮೇ 3 – ಭಾರತೀಯ ಮೂಲದ ಅಮೆರಿಕದ ಉದ್ಯಮಿ ಅಜಯ್ ಬಂಗ ಅವರು ವಿಶ್ವ ಬ್ಯಾಂಕ್‌ನ ಮುಂದಿನ ಅಧ್ಯಕ್ಷರಾಗಲಿದ್ದಾರೆ.

ಐದು ವರ್ಷದ ಅವಧಿಗೆ ಅವರು ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಲಿದ್ದಾರೆ. ಜೂನ್ 2ರಂದು ಡೇವಿಡ್ ಮಾಲ್ಪಾಸ್ ಈ ಹುದ್ದೆಯಿಂದ ಹೊರ ಹೋಗಲಿದ್ದು, ನಂತರ ಬಂಗ ಅಧಿಕಾರಕ್ಕೆ ಬರಲಿದ್ದಾರೆ.

## ನೀತಿ ಸಂಹಿತೆ ಉಲ್ಲಂಘನೆ : ಪ್ರಿಯಾಂಕ್, ಯತ್ನಾಳ್‌ಗೆ ನೋಟಿಸ್

ನವದೆಹಲಿ, ಮೇ 3 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ನಾಲಾಯಕ್ ಎಂದಿದ್ದ ಕಾಂಗ್ರೆಸ್ ಮುಖಂಡ ಪ್ರಿಯಾಂಕ್ ಖರ್ಗೆ ಹಾಗೂ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರನ್ನು ವಿಷಕನ್ಯೆ ಎಂದಿದ್ದ ಬಿಜೆಪಿ ಮುಖಂಡ ಬಸನಗೌಡ ಪಾಟೀಲ್ ಯತ್ನಾಳ್ ಅವರಿಗೆ ಚುನಾವಣಾ ಆಯೋಗ ನೋಟಿಸ್ ಕಳಿಸಿದೆ. ಉಭಯರು ನೀಡಿರುವ ಹೇಳಿಕೆಗಳು ನೀತಿ ಸಂಹಿತೆಯ ಉಲ್ಲಂಘನೆಯಾಗಿವೆ. ಈ ಹಿನ್ನೆಲೆಯಲ್ಲಿ ನಾಳೆ ಗುರುವಾರದೊಳಗೆ ಉತ್ತರ ಸಲ್ಲಿಸುವಂತೆ ಪ್ರತ್ಯೇಕ ನೋಟಿಸ್‌ಗಳಲ್ಲಿ ತಿಳಿಸಲಾಗಿದೆ.

## ಈಶ್ವರ್ ಬೈಲಕೂರ್ ಬಿ. ನಿಧನ



ದಿ|| ಈಶ್ವರ್ ಬೈಲಕೂರ್ ಬಿ

ದಾವಣಗೆರೆ ಜಿಲ್ಲೆ ಅಶೋಕ ನಗರದ ವಾಸಿ **ಈಶ್ವರ್ ಬೈಲಕೂರ್ ಬಿ** ಇವರು ದಿನಾಂಕ: 03–05–2023ರ ಬುಧವಾರ ಬೆಳಿಗ್ಗೆ 10.30ಕ್ಕೆ ನಿಧನರಾಗಿದ್ದಾರೆ ಎಂದು ತಿಳಿಸಲು ವಿಷಾದಿಸುತ್ತೇವೆ. ಮೃತರು ಪತ್ನಿ ಸೇರಿದಂತೆ ಮೂವರು ಪುತ್ರರು, ಒಬ್ಬ ಮೊಮ್ಮಗ ಹಾಗೂ ಅಪಾರ ಬಂಧು–ಬಳಗವನ್ನು ಆಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕಿನ ಕೊಂಡಜ್ಜಿ ಗ್ರಾಮದ ಮೃತರ ತೋಟದಲ್ಲಿ ದಿನಾಂಕ:04–05–2023ನೇ ಗುರುವಾರ ಬೆಳಿಗ್ಗೆ 9.30 ಗಂಟೆಗೆ ನೆರವೇರಿಸಲು ಗುರು–ಹಿರಿಯರು ನಿಶ್ವಯಿಸಿರುತ್ತಾರೆ.

ಮೊ: 9243970683










JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte